ಬುಧವಾರ, ಡಿಸೆಂಬರ್ 1, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 332 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
5ಜಿ ನೆಟ್‌ವರ್ಕ್ ಈಗ ಮನೆಯ ಹೊಸ್ತಿಲಿನವರೆಗೂ ಬಂದಾಗಿದೆ. ಬರಮಾಡಿಕೊಳ್ಳುವ ಮುಂಚೆ ಒಂದು ಅವಲೋಕನ ಇಲ್ಲಿದೆ.



ಆಳ-ಅಗಲ
ಟೆಕ್ ಕಂಪನಿಗಳ ಸಾರಥ್ಯ ಭಾರತೀಯ ಸಿಇಒಗಳ ಪಾರಮ್ಯ

ಓಮೈಕ್ರಾನ್: ಜಪಾನ್, ಫ್ರಾನ್ಸ್‌ನಲ್ಲೂ ಪ್ರಕರಣಗಳು ಪತ್ತೆ 4

ಆಟೊ ಪ್ರಯಾಣ ದರ ₹ 5 ಹೆಚ್ಚಳ; ಇಂದಿನಿಂದ ಜಾರಿ 2

ಸೆನ್ಸೆಕ್ಸ್ 57,065 | ನಿಫ್ಟಿ 16,983 | ₹/$ 75.13

ಓಮೈಕ್ರಾನ್: 'ಹೆಚ್ಚು ಅಪಾಯ'ದ ದೇಶಗಳಿಂದ ಬರುವವರ ಮೇಲೆ ನಿಗಾ

ಆರ್‌ಟಿ ಪಿಸಿಆರ್ ಕಡ್ಡಾಯ

ನವದೆಹಲಿ (ಪಿಟಿಐ): ವಿದೇಶಗಳಿಂದ ಅದರಲ್ಲೂ ವಿಶೇಷವಾಗಿ ಓಮೈಕ್ರಾನ್ ಪ್ರಕರಣಗಳು ದೃಢಪಟ್ಟಿರುವ ದೇಶಗಳಿಂದ ಬರುವ ಪ್ರಯಾಣಿಕರ ಮೇಲೆ ಕಟ್ಟುನಿಟ್ಟಿನ ನಿಗಾ ಇರಿಸಬೇಕು ಎಂದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಮಂಗಳವಾರ ಸೂಚಿಸಿದೆ.

ಭಾರತದಲ್ಲಿ ಈವರೆಗೆ ಓಮೈಕ್ರಾನ್ ಪ್ರಕರಣಗಳು ಪತ್ತೆಯಾಗಿಲ್ಲ. ಹಾಗಾಗಿ, 'ಹೆಚ್ಚು ಅಪಾಯ' (ಓಮೈಕ್ರಾನ್ ಪ್ರಕರಣಗಳು ದೃಢ ಪಟ್ಟಿರುವ ದೇಶಗಳು) ಇರುವ ದೇಶಗಳಿಂದ ಬರುವ ಎಲ್ಲ ಪ್ರಯಾಣಿಕರನ್ನು ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸಬೇಕು. ವಿಮಾನ ನಿಲ್ದಾಣದಲ್ಲಿ ಬಂದು ಇಳಿದ ಕೂಡಲೇ ಪರೀಕ್ಷೆ ನಡೆಸಬೇಕು. ಕೋವಿಡ್ ದೃಢಪಡದ ಪ್ರಯಾಣಿಕರಿಗೆ ಎಂಟನೇ ದಿನ ಮತ್ತೊಮ್ಮೆ ಪರೀಕ್ಷೆ ನಡೆಸಬೇಕು ಎಂದು ಮಾರ್ಗಸೂಚಿ ಹೇಳಿದೆ.

ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳು ಪರೀಕ್ಷೆಯನ್ನು ಹೆಚ್ಚಿಸಬೇಕು, ನಿಗಾವನ್ನು ಕಟ್ಟುನಿಟ್ಟುಗೊಳಿಸಬೇಕು ಎಂದು ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್ ಅವರು ಸಲಹೆ ನೀಡಿದ್ದಾರೆ. ವಿದೇಶಿ ಪ್ರಯಾಣಿಕರು ಬರುವ ವಿಮಾನ ನಿಲ್ದಾಣಗಳು, ಬಂದರುಗಳು ಮತ್ತು ಭೂ ಗಡಿಗಳಲ್ಲಿ ಹೆಚ್ಚಿನ ಕಣ್ಗಾವಲು ಬೇಕು ಎಂದು ಅವರು ಸೂಚಿಸಿದ್ದಾರೆ.

'ಹೆಚ್ಚು ಅಪಾಯ'ದ ದೇಶಗಳ ಪಟ್ಟಿಯನ್ನು ನವೆಂಬರ್ 26ರಂದು ಪರಿಷ್ಕರಿಸಲಾಗಿದೆ. ಈ ಪಟ್ಟಿಯಲ್ಲಿ ಯುರೋಪ್‌ನ ಕೆಲವು ದೇಶಗಳು, ಬ್ರಿಟನ್, ದಕ್ಷಿಣ ಆಫ್ರಿಕಾ, ಬ್ರೆಜಿಲ್, ಬೋಟ್ಸ್‌ವಾನ, ಚೀನಾ, ಮಾರಿಷಸ್, ನ್ಯೂಜಿಲ್ಯಾಂಡ್, ಜಿಂಬಾಬ್ವೆ, ಸಿಂಗಪುರ, ಇಸ್ರೇಲ್ ಮತ್ತು ಹಾಂಗ್‌ಕಾಂಗ್ ಇವೆ. ಈ ಎಲ್ಲ ದೇಶಗಳಲ್ಲಿ ಓಮೈಕ್ರಾನ್ ಪ್ರಕರಣಗಳು ದೃಢಪಟ್ಟಿವೆ.

ಮಾರ್ಗಸೂಚಿಯಲ್ಲಿ ಏನಿದೆ?

- ಓಮೈಕ್ರಾನ್ ಪ್ರಕರಣಗಳು ದೃಢಪಟ್ಟ ದೇಶಗಳಿಂದ ಬರುವ ಪ್ರಯಾಣಿಕರಿಗೆ ಆರ್‌ಟಿ-ಪಿಸಿಆರ್ ಪರೀಕ್ಷೆ ಕಡ್ಡಾಯ
- ಪರೀಕ್ಷೆಯ ಫಲಿತಾಂಶ ಬಂದ ಬಳಿಕವೇ ಪ್ರಯಾಣಿಕರು ವಿಮಾನ ನಿಲ್ದಾಣದಿಂದ ಹೊರಗೆ ಹೋಗಲು ಅವಕಾಶ
- ಇತರ ದೇಶಗಳಿಂದ ಬರುವ ಶೇ 5ರಷ್ಟು ಪ್ರಯಾಣಿಕರನ್ನೂ ಪರೀಕ್ಷೆಗೆ ಒಳಪಡಿಸಬೇಕು
- ಕೋವಿಡ್ ದೃಢಪಟ್ಟ ವ್ಯಕ್ತಿಗಳನ್ನು ಸಾಂಸ್ಥಿಕ ಪ್ರತ್ಯೇಕವಾಸಕ್ಕೆ ಒಳಪಡಿಸಬೇಕು
- ಕೋವಿಡ್ ದೃಢಪಟ್ಟವರ ಸಂಪರ್ಕಿತರನ್ನು ಸಾಂಸ್ಥಿಕ/ಮನೆ ಪ್ರತ್ಯೇಕವಾಸಕ್ಕೆ ಒಳಪಡಿಸಲಾಗುವುದು, ಇವರ ಮೇಲೆ ಕಟ್ಟುನಿಟ್ಟಿನ ನಿಗಾ ಇರಿಸಬೇಕು
- ಪರೀಕ್ಷೆಗೆ ಒಳಪಡದವರು ಮತ್ತು ಆರ್‌ಟಿ-ಪಿಸಿಆರ್‌ನಲ್ಲಿ ಕೋವಿಡ್ ಪತ್ತೆ ಆಗದವರ ಮೇಲೆಯೂ ನಿಗಾ ಮುಂದುವರಿಸಬೇಕು. 2 ಮತ್ತು 5ನೇ ದಿನ ಅವರನ್ನು ಗಮನಿಸಬೇಕು. ಲಕ್ಷಣಗಳು ಕಂಡು ಬಂದರೆ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಒಳಪಡಿಸಬೇಕು
- 'ಹೆಚ್ಚು ಅಪಾಯ'ದ ದೇಶಗಳಿಂದ ಬರುವವರು ವಿಮಾನ ನಿಲ್ದಾಣದಲ್ಲಿ ಹೆಚ್ಚು ಸಮಯ ಇರುವುದಕ್ಕೆ ಸಿದ್ಧರಾಗಿ ಬರಬೇಕು. ಆರ್‌ಟಿ-ಪಿಸಿಆರ್ ಪರೀಕ್ಷೆ ಫಲಿತಾಂಶ ಬರುವ ತನಕ ಬೇರೆಡೆಗೆ ಹೋಗುವುದಕ್ಕಾಗಿ ವಿಮಾನ ಟಿಕೆಟ್ ಕಾಯ್ದಿರಿಸಬೇಡಿ ಎಂದು ಸಲಹೆ ನೀಡಲಾಗಿದೆ
- ಕೋವಿಡ್ ದೃಢಪಟ್ಟ ಎಲ್ಲ ಮಾದರಿಗಳನ್ನು ಭಾರತದ ಸಾರ್ಸ್ ಕೋವಿಡ್ ಕನ್‌ಸೋರ್ಷಿಯಂ ಪ್ರಯೋಗಾಲಯಕ್ಕೆ ರವಾನೆ ಮಾಡಬೇಕು

ವಿದೇಶದಿಂದ ಬರುವವರಿಗೆಲ್ಲ ಕೋವಿಡ್ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಗಳಿಂದ ರಾಜ್ಯಕ್ಕೆ ಬರುವ ಎಲ್ಲರಿಗೂ ಆರ್‌ಟಿ-ಪಿಸಿಆರ್ ವಿಧಾನದಲ್ಲಿ ಕೊರೊನಾ ಸೋಂಕು ಪತ್ತೆ ಪರೀಕ್ಷೆ ನಡೆಸಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ತಜ್ಞರ ಜತೆ ಮಂಗಳವಾರ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ವಿದೇಶಗಳಿಂದ ಪ್ರತಿದಿನ 2,500 ಜನರು ಬರುತ್ತಿದ್ದಾರೆ. ಓಮೈಕ್ರಾನ್ ತಳಿಯ ವೈರಾಣು ಪತ್ತೆಯಾಗಿರುವ ದೇಶಗಳಿಂದ ಬರುವವರಿಗೆ ಮಾತ್ರ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸಲಾಗುತ್ತಿತ್ತು. ಆದರೆ, ವಿದೇಶಗಳಿಂದ ಬರುವ ಎಲ್ಲರಿಗೂ ಆರ್‌ಟಿ-ಪಿಸಿಆರ್ ವಿಧಾನದಲ್ಲಿ ಪರೀಕ್ಷೆ ಮಾಡುವಂತೆ ಮುಖ್ಯಮಂತ್ರಿ ಸೂಚಿಸಿದ್ದಾರೆ' ಎಂದರು.

ವಿದೇಶಗಳಿಂದ ಬರುವ ಎಲ್ಲರಿಗೂ ಆರ್‌ಟಿ-ಪಿಸಿಆರ್ ಪರೀಕ್ಷೆ ನಡೆಸುವ ವಿಷಯದಲ್ಲಿ ಇನ್ನೂ ಸ್ಪಷ್ಟತೆ ಇಲ್ಲ. ಕೇಂದ್ರ ಆರೋಗ್ಯ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿ ಪಾಲಿಸಲು ಆರೋಗ್ಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ ಎಂಬ ಮಾಹಿತಿ ಲಭಿಸಿದೆ.

ಪರೀಕ್ಷೆ ನಂತರ ಮುಂದೇನು?

- ಕೋವಿಡ್ ದೃಢಪಟ್ಟ ಎಲ್ಲರನ್ನೂ ಕ್ವಾರಂಟೈನ್ ಕೇಂದ್ರಕ್ಕೆ ಸ್ಥಳಾಂತರ
- ರೋಗಲಕ್ಷಣ ಇರುವವರನ್ನು ಪ್ರತ್ಯೇಕಿಸಿ ಚಿಕಿತ್ಸೆ
- ರೋಗಲಕ್ಷಣ ಇಲ್ಲದೆಯೂ ಕೋವಿಡ್ ದೃಢಪಟ್ಟವರಿಗೆ ಕ್ವಾರಂಟೈನ್ ಕೇಂದ್ರದಲ್ಲಿ ಏಳು ದಿನಗಳ ವಾಸ
- ರೋಗಲಕ್ಷಣ ಇಲ್ಲದವರಿಗೆ ಏಳನೇ ದಿನ ಮತ್ತೆ ಪರೀಕ್ಷೆ, ನೆಗೆಟಿವ್ ಬಂದಲ್ಲಿ ಬಿಡುಗಡೆ
- ನೆಗೆಟಿವ್ ವರದಿ ಬಂದಲ್ಲಿ ಮನೆಯಲ್ಲೇ ಏಳು ದಿನಗಳ ಕ್ವಾರಂಟೈನ್ ಕಡ್ಡಾಯ

ಹೊಸ ಘಟಕ ಅಳವಡಿಕೆಗೆ ಸಿದ್ಧತೆ

- ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸದ್ಯ ಒಂದು ಆರ್‌ಟಿ-ಪಿಸಿಆರ್ ಪರೀಕ್ಷಾ ಪ್ರಯೋಗಾಲಯವಿದ್ದು, ನಾಲ್ಕು ಗಂಟೆಗಳಲ್ಲಿ ವರದಿ ನೀಡಲಾಗುತ್ತಿದೆ. ಒಂದು ಗಂಟೆಯಲ್ಲೇ ವರದಿ ನೀಡಲು ಸಾಧ್ಯವಾಗುವಂತಹ ಸುಧಾರಿತ ಪ್ರಯೋಗಾಲಯ ಸ್ಥಾಪಿಸಲು ಸಿದ್ಧತೆ ನಡೆದಿದೆ
- ತ್ವರಿತವಾಗಿ ವರದಿ ಪಡೆಯಲು ಪ್ರತಿ ಪ್ರಯಾಣಿಕರು ₹ 3,000 ಪರೀಕ್ಷಾ ಶುಲ್ಕ ಪಾವತಿಸಬೇಕಾಗುತ್ತದೆ
- ಬೆಂಗಳೂರಿನಲ್ಲಿ ಬೌರಿಂಗ್ ಆಸ್ಪತ್ರೆ ಹಾಗೂ ಮಂಗಳೂರಿನಲ್ಲಿ ವೆನ್ಲಾಕ್ ಆಸ್ಪತ್ರೆ, ಮತ್ತು ಶಿವಭಾಗ್‌ನ ಇಎಸ್‌ಐ ಆಸ್ಪತ್ರೆಗಳನ್ನು ಕ್ವಾರಂಟೈನ್ ಕೇಂದ್ರಗಳನ್ನಾಗಿ ಗುರುತಿಸಲಾಗಿದೆ

ಇನ್ನಷ್ಟು ಸುದ್ದಿಗಳು 4

ಮೂಲಸೌಕರ್ಯ: ಶೇ 7.5ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಉತ್ಪಾದನೆಯು ಅಕ್ಟೋಬರ್‌ನಲ್ಲಿ ಶೇ 7.5ರಷ್ಟು ಬೆಳವಣಿಗೆ ಕಂಡಿವೆ. 2020ರ ಅಕ್ಟೋಬರ್‌ನಲ್ಲಿ ಶೇ (–) 0.5ರಷ್ಟು ಇಳಿಕೆ ಕಂಡಿದ್ದವು.

ಕಲ್ಲಿದ್ದಲು, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು ಹಾಗೂ ಸಿಮೆಂಟ್ ವಲಯಗಳ ಉತ್ತಮ ಬೆಳವಣಿಗೆಯಿಂದ ಈ ಪ್ರಮಾಣದ ಪ್ರಗತಿ ಸಾಧ್ಯವಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಾಹಿತಿ ನೀಡಿದೆ.

2021ರ ಸೆಪ್ಟೆಂಬರ್‌ನಲ್ಲಿ ಈ ವಲಯಗಳು ಶೇ 4.5ರಷ್ಟು ಬೆಳವಣಿಗೆ ಕಂಡಿದ್ದವು. ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಈ ವಲಯಗಳ ಉತ್ಪಾದನೆಯು ಶೇ 15.1ರಷ್ಟು ಬೆಳವಣಿಗೆ ಕಂಡಿವೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ 12.6ರಷ್ಟು ಬೆಳವಣಿಗೆ ಕಂಡಿದ್ದವು.

ದೇಶದ ಕೈಗಾರಿಕಾ ಉತ್ಪಾದನೆ ಸೂಚ್ಯಂಕಕ್ಕೆ (ಐಐಪಿ) ಮೂಲಸೌಕರ್ಯ ವಲಯದ ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ಸಂಸ್ಕರಣಾ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ವಲಯಗಳು ಶೇ 40.27ರಷ್ಟು ಕೊಡುಗೆ ನೀಡುತ್ತಿವೆ.

ಅಧಿವೇಶನ ಪೂರ್ತಿ ಧರಣಿಗೆ ನಿರ್ಧಾರ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ ಅಮಾನತಾಗಿರುವ ವಿರೋಧ ಪಕ್ಷಗಳ 12 ರಾಜ್ಯಸಭಾ ಸದಸ್ಯರ, ಅಮಾನತು ಆದೇಶ ವಾಪಸ್ ಪಡೆಯಬೇಕೆಂದರೆ ಅವರು ಕ್ಷಮೆ ಯಾಚಿಸಬೇಕು ಎಂದು ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಹೇಳಿರುವುದನ್ನು ವಿರೋಧ ಪಕ್ಷಗಳು ಖಂಡಿಸಿವೆ. ಬದಲಿಗೆ ಅಮಾನತು ರದ್ದಾಗುವವರೆಗೆ ಅಥವಾ ಅಧಿವೇಶನ ಮುಗಿಯುವವರೆಗೆ ಧರಣಿ ನಡೆಸಲು ನಿರ್ಧರಿಸಿವೆ. 10

'ಮಲ್ಯ ವಿರುದ್ಧದ ವಿಚಾರಣೆ ಜ. 18ಕ್ಕೆ'

ನವದೆಹಲಿ (ಪಿಟಿಐ): ಬ್ಯಾಂಕ್‌ಗಳಿಂದ ₹9,000 ಕೋಟಿಗೂ ಹೆಚ್ಚು ಸಾಲ ಪಡೆದು, ಪರಾರಿಯಾಗಿರುವ ಕಿಂಗ್‌ಫಿಷರ್ ಏರ್‌ಲೈನ್ಸ್‌ನ ಮಾಲೀಕ ವಿಜಯ್ ಮಲ್ಯ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಯನ್ನು ಮುಂದಿನ ವರ್ಷದ ಜನವರಿ 18ರಂದು ನಡೆಸುವುದಾಗಿ ಸುಪ್ರಿಂ ಕೋರ್ಟ್ ಮಂಗಳವಾರ ತಿಳಿಸಿದೆ. 10

ಹಾಕಿ: ಭಾರತ – ಬೆಲ್ಜಿಯಂ ಹಣಾಹಣಿ

ಭುವನೇಶ್ವರ (ಪಿಟಿಐ): ಭಾರತ ತಂಡ ವಿಶ್ವ ಜೂನಿಯರ್ ಹಾಕಿ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಬುಧವಾರ ಬೆಲ್ಜಿಯಂ ತಂಡವನ್ನು ಎದುರಿಸಲಿದೆ. ಎರಡು ಬಾರಿ ಚಾಂಪಿಯನ್ ಆಗಿರುವ ಭಾರತ ಕಳೆದ ಬಾರಿ ಫೈನಲ್‌ನಲ್ಲಿ ಬೆಲ್ಜಿಯಂ ವಿರುದ್ಧ 2–1ರಲ್ಲಿ ಜಯ ಸಾಧಿಸಿತ್ತು. ಈ ಬಾರಿ ಮೊದಲ ಪಂದ್ಯದಲ್ಲಿ ಸೋತಿದ್ದರೂ ನಂತರ ಎರಡು ಪಂದ್ಯಗಳಲ್ಲಿ ಭರ್ಜರಿ ಆಟವಾಡಿ ಗೆಲುವು ಗಳಿಸಿತ್ತು. 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ಆಟೊ ಪ್ರಯಾಣ ದರ ₹ 5 ಹೆಚ್ಚಳ; ಇಂದಿನಿಂದ ಜಾರಿ

ಬೆಂಗಳೂರು: ನಗರದಲ್ಲಿ ಆಟೊ ಪ್ರಯಾಣ ದರವನ್ನು ಹಾಲಿ ದರಕ್ಕಿಂತ ₹ 5 ಹೆಚ್ಚಳ ಮಾಡಲಾಗಿದ್ದು, ಈ ಪರಿಷ್ಕೃತ ದರ ಬುಧವಾರದಿಂದಲೇ (ಡಿ.1) ಜಾರಿಗೆ ಬರಲಿದೆ.

'ಹೊಸ ಆಟೊ ಖರೀದಿ ಬೆಲೆ, ಸಾರಿಗೆ ಇಲಾಖೆ ಶುಲ್ಕಗಳು, ಇಂಧನ ಹಾಗೂ ಎಲ್‌ಪಿಜಿ ದರ ಏರಿಕೆ ಆಗಿದೆ' ಎಂದು ಆರೋಪಿಸಿ ಆಟೊ ಚಾಲಕರ ಸಂಘಟನೆಗಳು ನೀಡಿದ್ದ ಮನವಿ ಪರಿಶೀಲಿಸಿದ್ದ ಬೆಂಗಳೂರು ನಗರ ಜಿಲ್ಲೆಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ದರ ಪರಿಷ್ಕರಿಸಿ ಇತ್ತೀಚೆಗಷ್ಟೇ ಅಧಿಸೂಚನೆ ಹೊರಡಿಸಿತ್ತು.

ಸದ್ಯ 1.9 ಕಿ.ಮೀ ಸಂಚಾರಕ್ಕೆ ₹ 25 ದರವಿದೆ. ಇದೀಗ 2 ಕಿ.ಮೀ ಸಂಚಾರಕ್ಕೆ ₹ 30 ನಿಗದಿ ಮಾಡಲಾಗಿದೆ.

'ಲಾಕ್‌ಡೌನ್‌ನಿಂದ ಆಟೊ ಚಾಲಕರ ಜೀವನ ನಿರ್ವಹಣೆಗೆ ತೊಂದರೆ ಆಗಿದೆ. ಮಂಗಳೂರು, ಉಡುಪಿಯಲ್ಲಿ ಈಗಾಗಲೇ ದರ ಹೆಚ್ಚಿಸಲಾಗಿದೆ. ಈ ಎಲ್ಲ ಅಂಶಗಳನ್ನು ಗಮನಿಸಿ ಪ್ರಯಾಣ ದರವನ್ನು ಹೆಚ್ಚಿಸಲಾಗಿದೆ' ಎಂದು ಅಧಿಸೂಚನೆಯಲ್ಲಿ ಉಲ್ಲೇಖಿಸಲಾಗಿದೆ.

ಯಶಸ್ವಿ 28ನೇ ವರ್ಷದಲ್ಲಿ

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ "ಅನುಭವಿ ಸೇವಾ ಪೂರೈಕೆದಾರ" ಮಾನ್ಯತೆ

ಅಡಿಗಾಸ್ ಯಾತ್ರಾ®

ಪ್ರವಾಸ ಯಾತ್ರಾ ದರ್ಶನ

144, ದುರ್ಗಾ ಮ್ಯಾನ್ಷನ್, ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು-04

ಬಸವನಗುಡಿ: ☎ 080-26616678, 7022259008, 9611600810 | ಮಲ್ಲೇಶ್ವರಂ: ☎ 080-23346678, 7022259003, 9449478944 | ಹುಬ್ಬಳ್ಳಿ: ☎ 0836-2256678, 8095800301, 8095800701

email: care@adigasyatra.com website: www.adigasyatra.com

2022 ವರ್ಷ ಕಾರ್ಯಕ್ರಮ ವಿವರ

ರೈಲು/ವಿಮಾನ ಪ್ರಯಾಣ, A/C* ಬಸ್, A/C* ರೂಮ, ನುರಿತ ಅಡಿಗೆಯವರಿಂದ ಸಸ್ಯಹಾರಿ ಊಟೋಪಹಾರ, ಟೂರ್ ಮ್ಯಾನೇಜರ್‌ನೊಂದಿಗೆ ಗ್ರೂಪ್ ಪ್ರವಾಸ

ಕಾಶಿ ಯಾತ್ರಾ

ಅಯೋಧ್ಯಾ-ಕಾಶಿ-ಗಯಾ
By Train 14 Days & By Flight 10 Days
ನೈಮಿಶಾರಣ್ಯ, ಅಯೋಧ್ಯಾ, ಪ್ರಯಾಗರಾಜ್ (ತ್ರಿವೇಣಿ ಸಂಗಮ), ಚಿತ್ರಕೂಟ, ವಿಂಧ್ಯಾಚಲ, ವಾರಣಾಸಿ (ಕಾಶಿ), ಸಾರನಾಥ, ಗಯಾ, ಬೋಧಗಯಾ.
DEP DATES: JAN 19. FEB 9,23. MAR 9,23. APR 6, 20. MAY 11, 25. JUN 8, 22.

ಕಾಶಿ-ಗಯಾ ಯಾತ್ರಾ
By Train 10 Days & By Flight 6 Days
ಪ್ರಯಾಗರಾಜ್, ತ್ರಿವೇಣಿ ಸಂಗಮ, ಗಯಾ, ಬೋಧಗಯಾ, ವಾರಣಾಸಿ(ಕಾಶಿ), ಸಾರನಾಥ.
DEP DATES: JAN 10,24. FEB 7,21. MAR 7,21. APR 11, 25. MAY 9, 23. JUN 6,20

ಅಯೋಧ್ಯಾ-ಕಾಶಿ-ಬೈದ್ಯನಾಥ್
By Train 12 Days & By Flight 8 Days
ಅಯೋಧ್ಯಾ, ಪ್ರಯಾಗರಾಜ್, ತ್ರಿವೇಣಿ ಸಂಗಮ, ವಾರಣಾಸಿ(ಕಾಶಿ), ಸಾರನಾಥ, ಬೈದ್ಯನಾಥ್ ಜ್ಯೋತಿರ್ಲಿಂಗ, ಗಯಾ, ಬೋಧಗಯಾ.
DEP DATES : JAN 16. FEB 6, 20. MAR 6, 20. APR 4, 18. MAY 9, 23. JUN 6, 20.

ನೇಪಾಳ-ಕಾಶಿ-ಗಯಾ
By Train 15 Days & By Flight 11 Days
ಪ್ರಯಾಗರಾಜ್, ಅಯೋಧ್ಯಾ, ಸುನೌಲಿ ಬಾರ್ಡರ್, ಮನೋಕಾಮನ, ಕಠ್ಮಂಡು, ಗೋರಖಪುರ, ಲುಂಬಿನಿ, ಗಯಾ, ಬೋಧಗಯಾ, ವಾರಣಾಸಿ (ಕಾಶಿ), ಸಾರನಾಥ.
DEP DATES: JAN 16. FEB 6, 20. MAR 6, 20. APR 4, 18. MAY 9, 23. JUN 6, 20.

ಗುಜರಾತ್-ರಾಜಸ್ಥಾನ

ರಾಜಸ್ಥಾನ ವಿಶೇಷ ಪ್ರವಾಸ
By Train 14 Days & By Flight 10 Days
ಜೋಧಪುರ, ಜೈಸಲ್ಮೇರ್, ಸ್ಯಾಮ್ ಸ್ಯಾಂಡ್ ಡ್ಯೂನ್ಸ್, ಬಿಕಾನೇರ್, ಕರಣೀ ಮಾತಾ, ಪುಷ್ಕರ್, ಚಿತ್ತೋರಗಢ, ಉದಯಪುರ, ಜೈಪುರ.
DEP DATES: JAN 6, 20. FEB 3, 17, 24. MAR 10, 24. APR 14.

ಗುಜರಾತ ವಿಶೇಷ ಪ್ರವಾಸ
By Train 12 Days & By Flight 9 Days
ಅಹಮದಾಬಾದ್, ಕೆವಡಿಯಾ, ಸರ್ದಾರ್ ವಲ್ಲಭಬಾಯ್ ಪ್ರತಿಮೆ, ಭಾವನಗರ, ನಿಷ್ಕಳಂಕ ಮಹಾದೇವ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್ ದ್ವಾರಕ, ನಾಗೇಶ್ವರ್. ದ್ವಾರಕ, ಮಾತೃಗಯಾ (ಸಿದ್ಧಪುರ), ಮೊಧೆರಾ
DEP DATES : 2022; JAN 2, 16, 30. FEB 6, 13. MAR 6, 13. APR 3.

ಕಚ್-ಸೌರಾಷ್ಟ್ರ-ಗಿರ್
By Train 16 Days & By Flight 13 Days
ಅಹಮದಾಬಾದ್, ಕೆವಡಿಯಾ, ಸರ್ದಾರ್ ವಲ್ಲಭಬಾಯ್ ಸ್ಮಾರಕ, ಭಾವನಗರ, ನಿಷ್ಕಳಂಕ ಮಹಾದೇವ್, ಗಿರ್ ನ್ಯಾಷನಲ್ ಪಾರ್ಕ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್ ದ್ವಾರಕ, ನಾಗೇಶ್ವರ್, ದ್ವಾರಕ, ನಾರಾಯಣ ಸರೋವರ, ಕೋಟೇಶ್ವರ್, ಮಾಂಡ್ವಿ ಬೀಚ್, ಭುಜ್, ರನ್ ಆಫ್ ಕಛ್, ಧೋರ್ಡೋ, ದಸಾಡ, ಮೊಧೇರಾ, ಪಟಾನ್.
DEP DATES : JAN 2, 16, 30. FEB 6, 13.

ಪಂಚದ್ವಾರಕಾ ಯಾತ್ರಾ
By Train 13 Days & By Flight 10 Days
ಅಹಮದಾಬಾದ್, ಸೋಮನಾಥ, ವೀರಾವಲ್, ಪೋರಬಂದರ್, ಬೆಟ್‌ದ್ವಾರಕ, ನಾಗೇಶ್ವರ, ದ್ವಾರಕ, ಮಾತೃಗಯಾ (ಸಿದ್‌ಧಪುರ), ಮೊಧೆರಾ, ಕಂಕ್ರೋಲಿ, ನಾಥ್‌ದ್ವಾರ, ಉದಯಪುರ, ದಾಕೋರೆ,
DEP DATES : JAN 2, 16, 30. FEB 6, 13. MAR 6, 13. APR 3.

ಮಧ್ಯಪ್ರದೇಶ

ಉಜ್ಜಯಿನಿ-ಓಂಕಾರ-ಭೋಪಾಲ್
By Train 9 Days &By Flight 6 Days
ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಾಹೇಶ್ವರ, ಮಾಂಡು, ಓಂಕಾರೇಶ್ವರ.
DEP DATES : JAN 5, 19. FEB 2, 16. MAR 2, 16.

ಮಧ್ಯಪ್ರದೇಶ ಪ್ರವಾಸ
By Train 13 Days &By Flight 10 Days
ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಾಹೇಶ್ವರ, ಮಾಂಡು, ಓಂಕಾರೇಶ್ವರ, ಖಜುರಾಹೋ, ಜಬಲ್‌ಪುರ್, ಬೇಡಾಘಾಟ್, ಪಾಚ್‌ಮಾರಿ.
DEP DATES : JAN 5, 26. FEB 9, 23. MAR 9, 23.

ಪೂರ್ವ & ಈಶಾನ್ಯ

ಪೂರ್ವ ಭಾರತ ಪ್ರವಾಸ
By Train 6/8/12/ 15/ 20 Days & By Flight 4/6/9 /12 / 17 Days
ಭುವನೇಶ್ವರ, ನಂದಕಾನನ, ಧವಳಗಿರಿ, ಸಾಕ್ಷಿಗೋಪಾಲ, ಹೌರಾ, ಕಲ್ಕತ್ತಾ, ದಕ್ಷಿಣೇಶ್ವರ, ನವಜಲಪೈಗುರಿ, ಮಿರಿಕ್, ಡಾರ್ಜಿಲಿಂಗ್, ಗ್ಯಾಂಗ್‌ಟಿಕ್, ತ್ಸಾಂಗೋ ಸರೋವರ, ಲಾಚುಂಗ್, ಯುಮ್ತಾಂಗ್, ನಮಚಿ ಚಾರಧಾಮ್, ಪೆಲ್ಲಿಂಗ್,
DEP DATES : JAN 20, 27. FEB 10, 24. MAR 10, 24. APR 7, 21. MAY 5, 19. JUN 2.

ಸೆವೆನ್ ಸಿಸ್ಟರ್ಸ್ ಟೂರ್
By Train 16/18/ 29 Days & By Flight 13/ 23 Days
ಗುವಾಹತಿ, ಕಾಜೀರಂಗ ನ್ಯಾಷನಲ್ ಪಾರ್ಕ್//ಶಿವಸಾಗರ್*, ತೇಜ್‌ಪುರ್ (ಅಸ್ಸಾಂ), ಬಾಂಡಿಲ್ಲಾ, ತವಾಂಗ್, ಸೆಲಾ ಪಾಸ್ (ಅರುಣಾಚಲ ಪ್ರದೇಶ), ಚಿರಾಪುಂಜಿ, ದಾವ್ಕಿ, ಮಾವ್ಲಿನಾಂಗ್, ಶಿಲ್ಲಾಂಗ್ (ಮೇಘಾಲಯ), ಸಿಲ್ಚಾರ್, ಉನಕೋಟಿ, ಉದಯಪುರ, ಅಗರ್ತಲ (ತ್ರಿಪುರ), ಐಜ್ವಾಲ್ (ಮಿಜೋರಾಂ), ಲೊಕ್‌ತಕ್ ಲೇಕ್, ಇಂಪಾಲ (ಮಣಿಪುರ), ಕಿಸಾಮ, ಕೊನ್ಹೊಮ, ಕೊಹಿಮ (ನಾಗಾಲ್ಯಾಂಡ್)
DEP DATES : MAR 18, 25. APR 1, 15. JUL 29. AUG 12*, 26*. SEP 9*, 23*. OCT 7, 28.

ಹಿಮಾಲಯ

ಆಗ್ರಾ-ಜೈಪುರ್-ಮನಾಲಿ
By Train 17 Days & By Flight 14 Days
ನವದೆಹಲಿ, ಜೈಪುರ್, ಫತೇಪುರ್ ಸಿಕ್ರಿ, ಆಗ್ರಾ, ಮಥುರಾ, ಬೃಂದಾವನ, ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಅಟಲ್ ಟನಲ್, ಸೊಲಾಂಗ್ ವ್ಯಾಲಿ, ಚಂಡೀಗಢ.
DEP DATES : JAN 19. FEB 9,23. MAR 9,23. APR 6, 20. MAY 11,25. JUN 8,22.

ಶಿಮ್ಲಾ-ಮನಾಲಿ-ವೈಷ್ಣೋದೇವಿ
By Train 17 Days & By Flight 14 Days
ನವದೆಹಲಿ, ಕುರುಕ್ಷೇತ್ರ, ಚಂಡೀಗಢ, ಶಿಮ್ಲಾ, ಕುಫ್ರಿ, ಕುಲು, ಮನಾಲಿ, ಬೈಜನಾಥ್, ಕಾಂಗ್ರಾ, ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಕಟ್ರಾ, ವೈಷ್ಣೋದೇವಿ, ವಾಘಾ ಬಾರ್ಡರ್, ಅಮೃತಸರ
DEP DATES : JAN 3, 17. FEB 7, 21. MAR 7, 21. APR 4, 11, 18, 25. MAY 9, 23. JUN 6, 20.

ಶಕ್ತಿಪೀಠ-ಹಿಮಾಚಲ
By Train 16 Days & By Flight 13 Days
ನವದೆಹಲಿ, ಕುರುಕ್ಷೇತ್ರ, ಚಂಡೀಗಡ, ಡಾಲಹೌಸಿ, ಖಜ್ಜಿಯರ್, ಧರ್ಮಶಾಲಾ, ನೈನಾದೇವಿ, ಮಾನಸ ದೇವಿ, ಭದ್ರಕಾಳಿ, ಕಾಂಗ್ರಾ, ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಕಟ್ರಾ, ವೈಷ್ಣೋದೇವಿ, ವಾಘಾ ಬಾರ್ಡರ್, ಅಮೃತಸರ.
DEP DATES : JAN 3, 17. FEB 7, 21. MAR 7, 21. APR 4, 11, 18, 25. MAY 9, 23. JUN 6, 20.

ಕಾಶ್ಮೀರ ವೈಷ್ಣೋದೇವಿ
By Train 14 Days & By Flight 8 Days
ಜಮ್ಮು, ಪಹಲ್ಗಾಮ್, ಸೋನ್‌ಮಾರ್ಗ್, ಶ್ರೀನಗರ, ಗುಲ್ಮಾರ್ಗ್, ಕಟ್ರಾ, ವೈಷ್ಣೋದೇವಿ.
DEP DATES : JAN 5, 19. FEB 9, 23. MAR 9, 23. APR 6, 13, 20, 27. MAY 11, 25. JUN 8, 22.

'ಆಟೊ: ಆನ್‌ಲೈನ್ ಬುಕಿಂಗ್‌ಗೆ ಶೇ 5ರಷ್ಟು ಜಿಎಸ್‌ಟಿ ಬೇಕಿತ್ತೇ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟೊ ಸೇವೆ ಪಡೆಯಲು ಆನ್‌ಲೈನ್‌ನಲ್ಲಿ ಬುಕ್ ಮಾಡುವುದಕ್ಕೆ ಶೇ 5ರಷ್ಟು ಜಿಎಸ್‌ಟಿ ವಿಧಿಸುವ ನಿರ್ಧಾರ ಸರಿಯಲ್ಲ, ಇದರಿಂದ ಹೆಚ್ಚಿನ ಹೊರೆ ಆಗಲಿದೆ ಎನ್ನುವುದು ಬಹುಪಾಲು ಜನರ ಅಭಿಪ್ರಾಯ. ಆದರೆ, ಆಫ್‌ಲೈನ್ ಆಟೊ ಸೇವೆಯಲ್ಲಿ ಆಗುವ ಸಮಸ್ಯೆಗಳನ್ನು ಗಮನಿಸಿದರೆ, ತುಸು ದುಬಾರಿ ಆದರೂ ಆನ್‌ಲೈನ್ ಸೇವೆಯೇ ಹೆಚ್ಚು ಅನುಕೂಲ ಎನ್ನುವ ಅಭಿಪ್ರಾಯವೂ ಕೆಲವರದ್ದು. 2022ರ ಜನವರಿ 1ರಿಂದ ಶೇ 5ರಷ್ಟು ಜಿಎಸ್‌ಟಿ ಜಾರಿಗೆ ಬರಲಿದೆ.

ನಾವು ಬಳಸುವ ಸೇವೆಗಳಿಗೆ ತೆರಿಗೆ ಕೊಡಬೇಕಾಗುತ್ತದೆ. ದುಬಾರಿ ಆದರೂ ಪಾವತಿ ಸಾಮರ್ಥ್ಯ ಇರುವವರು, ಅನುಕೂಲ ಬಯಸುವವರು ಆನ್‌ಲೈನ್ ಬುಕಿಂಗ್ ಮಾಡೇ ಮಾಡುತ್ತಾರೆ ಎನ್ನುವುದು ತಜ್ಞರು ವಾದ. ಮಧ್ಯಮ, ಮೇಲ್ಮಧ್ಯಮ ವರ್ಗ ಈ ತರಹದ ಆಟೊ ಸೇವೆಗೆ ಹೆಚ್ಚು ಒಗ್ಗಿಕೊಂಡಿದೆ. ಆದರೆ, ಈಗಲೇ ಇದನ್ನು ಜಾರಿಗೆ ತರುವ ಅಗತ್ಯವಾದರೂ ಏನಿತ್ತು ಎನ್ನುವ ಪ್ರಶ್ನೆಯನ್ನೂ ಅವರು ಕೇಳುತ್ತಾರೆ.

ನಿರ್ವಹಣೆ: ವಿಶ್ವನಾಥ ಶರ್ಮ

ರಾಜಧಾನಿ ಒಡಲದನಿ

'ಬಳಸಿಕೊಳ್ಳುವ ಸೇವೆಗೆ ತೆರಿಗೆ'

ನಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳುವ ಸೇವೆಗಳಿಗೆ ತೆರಿಗೆ ವಿಧಿಸಲಾಗುತ್ತದೆ. ಸರ್ಕಾರದ ಈ ನಿರ್ಧಾರದಿಂದ ಗ್ರಾಹಕರಿಗೆ ಹೊರೆ ಆಗುವುದಿಲ್ಲವೇ ಎಂದರೆ, ನಮ್ಮ ಅನುಕೂಲಕ್ಕೆ ಬಳಕೆ ಮಾಡುವ ಪ್ರತಿ ಸೇವೆಗೂ ತೆರಿಗೆ ಕೊಡಬೇಕಾಗುತ್ತದೆ. ವಾಹನ ನಮ್ಮ ಮನೆ ಬಾಗಿಲಿಗೆ ಬರುತ್ತದೆ. ದಾರಿ ತೋರಿಸುವ ಅಗತ್ಯ ಇರುವುದಿಲ್ಲ, ಹೆಚ್ಚಿನ ಸುರಕ್ಷತೆ ಇರುತ್ತದೆ ಎಂಬೆಲ್ಲಾ ಕಾರಣಗಳಿಂದ ಓಲಾ, ಉಬರ್ ಬುಕ್ ಮಾಡುತ್ತೇವೆ. ಚಾಲಕರ ಪೂರ್ಣ ವಿವರದ ಜೊತೆಗೆ ಆಟೊ ಹತ್ತಿದ್ದು ಎಷ್ಟು ಹೊತ್ತಿಗೆ, ಯಾವ ಜಾಗದಲ್ಲಿ, ಎಷ್ಟು ಹೊತ್ತಿಗೆ ಇಳಿದದ್ದು ಎನ್ನುವ ಮಾಹಿತಿಗಳೆಲ್ಲವೂ ಇರುತ್ತದೆ. ಏನಾದರೂ ಸಮಸ್ಯೆ ಆದರೆ ಕಂಪನಿಗೆ ದೂರು ನೀಡುವ ಅವಕಾಶವೂ ಇದೆ. ಆದರೆ, ಸಾಮಾನ್ಯ ಆಟೊದಲ್ಲಿ ಹೋಗುವುದಾದರೆ ಎಲ್ಲರೂ ಮೀಟರ್ ಹಾಕುವುದಿಲ್ಲ. ಕರೆದೆಡೆಗೆಲ್ಲಾ ಬರುವುದೂ ಇಲ್ಲ. ಗ್ರಾಹಕರನ್ನು ಇಳಿಸುವಾಗ ಹೇಳಿದ್ದಕ್ಕಿಂತ ಹೆಚ್ಚಿನ ದುಡ್ಡು ಕೊಡುವಂತೆ ತಗಾದೆ ತೆಗೆಯುವುದು ಇತ್ಯಾದಿ ಸಮಸ್ಯೆಗಳಿರುತ್ತವೆ.

ಎಲ್ಲ ಸಮಯದಲ್ಲಿಯೂ ಹಣದ ಮುಖ ನೋಡಲು ಆಗುವುದಿಲ್ಲ. ಹಣಕ್ಕಿಂತ ಸಮಯಕ್ಕೆ ಹೆಚ್ಚು ಮೌಲ್ಯ ಇದೆ. ಹೀಗಾಗಿ ಸಮಯ ಮತ್ತು ಅನುಕೂಲಕ್ಕೆ ಆದ್ಯತೆ ನೀಡುವವರು ತುಸು ಹೆಚ್ಚಾದರೂ ಪರವಾಗಿಲ್ಲ ಎಂದು ಇಂತಹ ಸೇವೆಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಾರೆ.

ಬಿ.ಟಿ. ಮನೋಹರ್, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಜಿಎಸ್‌ಟಿ ಸಮಿತಿ ಅಧ್ಯಕ್ಷ

'ಈಗ ಇದರ ಅಗತ್ಯ ಇತ್ತೇ?'

ಈಗ ಇಂತಹ ನಿರ್ಧಾರ ಕೈಗೊಳ್ಳುವ ಅಗತ್ಯವಾದರೂ ಏನಿತ್ತು ಎನ್ನುವ ಪ್ರಶ್ನೆ ಮೂಡುತ್ತದೆ. ಸರ್ಕಾರಕ್ಕೆ ಬರುವ ವರಮಾನ ಕಡಿಮೆ ಇದೆ ಎಂದಾಗ ಹೊಸ ಮೂಲದಿಂದ ವರಮಾನ ಸಂಗ್ರಹಕ್ಕೆ ಮುಂದಾಗುವುದು ಸಹಜ. ಆದರೆ, ಕಳೆದ ಕೆಲವು ತಿಂಗಳುಗಳಿಂದ ತೆರಿಗೆ ಸಂಗ್ರಹ ಚೆನ್ನಾಗಿದೆ. ಸೇವಾ ವಲಯವು ಇನ್ನೂ ಪೂರ್ಣವಾಗಿ ಹಳಿಗೆ ಮರಳಿಲ್ಲ. ಹೀಗಾಗಿ, ಈ ನಿರ್ಧಾರವನ್ನು ಕನಿಷ್ಠ ಆರು ತಿಂಗಳವರೆಗೆ ಮುಂದೂಡಬಹುದಿತ್ತು. ಇಲ್ಲಿ ಸಂಗ್ರಹ ಆಗುವ ಹಣವನ್ನು ಯಾವ ಉದ್ದೇಶಕ್ಕೆ ಬಳಸಲಾಗುತ್ತದೆ ಎನ್ನುವುದೂ ಬಹಳ ಮುಖ್ಯವಾಗಲಿದೆ.

ಡಿ. ಮುರಳೀಧರ, ಆರ್ಥಿಕ ತಜ್ಞ

ಮಧ್ಯಮ ವರ್ಗಕ್ಕೆ ಅನಿವಾರ್ಯತೆ



ಮಧ್ಯಮ ವರ್ಗದವರಿಗೆ ಅತಿ ಹೆಚ್ಚು ಸೇವೆ ನೀಡುತ್ತಿರುವವರೇ ಆಟೊದವರು. ಜಿಎಸ್‌ಟಿಯಿಂದ ಪ್ರಯಾಣ ದರ ಹೆಚ್ಚಾದರೆ ಅಲವಂಬಿತ ಪ್ರಯಾಣಿಕರು ಹೆಚ್ಚು ಹಣ ನೀಡಿ ಪ್ರಯಾಣಿಸಲೇಬೇಕಾದ ಅನಿವಾರ್ಯತೆ ಉಂಟಾಗುತ್ತದೆ. ಪ್ರಯಾಣ ದರ ಹೆಚ್ಚಳದ ಬಿಸಿ ಪ್ರಯಾಣಿಕರಿಗೇ ಹೊರತು ಆಟೊದವರಿಗಲ್ಲ

ಪಿ.ವಿ. ಕೊಣ್ಣೂರ, ಅಧ್ಯಕ್ಷರು, ಎಲ್‌.ಐ.ಎಸ್. ಅಕಾಡೆಮಿ

'ಹೆಚ್ಚುವರಿ ಹಣ ಕಡಿತ: ಅವರ ವ್ಯವಹಾರವೇ ಸರಿ ಇಲ್ಲ'

ಆರಂಭದಲ್ಲಿ ಓಲಾ, ಉಬರ್ ಜೊತೆ ಒಪ್ಪಂದ ಮಾಡಿಕೊಂಡಿದ್ದೆ. ಆದರೆ, ಅವರ ವ್ಯವಹಾರವೇ ಸರಿ ಇಲ್ಲ. ಗ್ರಾಹಕರು ಆಟೊ ಬುಕ್ ಮಾಡುವಾಗ ಬಾಡಿಗೆ ₹ 70 ಆಗುತ್ತದೆ ಅಂತ ಆ್ಯಪ್‌ನಲ್ಲಿ ತೋರಿಸಲಾಗುತ್ತದೆ. ಇಳಿಯುವಾಗ ₹ 100 ಆಗಿರುತ್ತದೆ. ಇದರಿಂದ ಗ್ರಾಹಕರೊಂದಿಗೆ ನಾವು ಜಗಳಕ್ಕಿಳಿಯುವಂತಾಗುತ್ತದೆ. ಈ ರೀತಿ ಹೆಚ್ಚುವರಿ ಆಗಿ ಗ್ರಾಹಕರಿಂದ ಬರುವ ₹ 30 ಹಣದಲ್ಲಿ ಒಂದು ರೂಪಾಯಿನೂ ಚಾಲಕರಿಗೆ ಸಿಗುವುದಿಲ್ಲ. ಯಾರಾದರೊಬ್ಬರು ಗ್ರಾಹಕರು ಗೂಗಲ್ ಪೇ, ಓಲಾ ಮನಿ ಮೂಲಕ ಹಣ ಪಾವತಿಸಿರೆ ಆಗ ಕಂಪನಿಯು ನಮ್ಮ ಖಾತೆಯಿಂದ ಆ ಹೆಚ್ಚುವರಿ ಹಣವನ್ನು ಕಡಿತ ಮಾಡಿಕೊಳ್ಳುತ್ತದೆ.

–ರಮೇಶ, ಆಟೊ ಚಾಲಕ

'ಹೊರೆ ಮತ್ತಷ್ಟು ಹೆಚ್ಚಲಿದೆ'



ಶನಿವಾರ ಮತ್ತು ಭಾನುವಾರ ಹೊರಗಡೆ ಹೋಗಲು ಆಟೊವನ್ನೇ ಅವಲಂಬಿಸಿದ್ದೇನೆ. ತಕ್ಷಣಕ್ಕೆ ಆಟೊ ಬೇಕು ಎಂದಾಗ ಸಿಗುವುದು ಓಲಾ, ಉಬರ್ ಮಾತ್ರ. ಈಗಾಗಲೇ ಅಗತ್ಯವಸ್ತುಗಳ ಬೆಲೆಯಲ್ಲಿ ಏರಿಕೆ ಆಗಿದ್ದು, ಇದೀಗ ಆನ್‌ಲೈನ್ ಆಟೊ ಸೇವೆಗೆ ಜಿಎಸ್‌ಟಿ ನೀಡುವುದರಿಂದ ಹೊರೆ ಇನ್ನಷ್ಟು ಹೆಚ್ಚಾಗಲಿದೆ

ವಿಜಯಲಕ್ಷ್ಮಿ ಎಂ. ಹಿಪ್ಪರಗಿ, ಐ.ಟಿ. ಉದ್ಯೋಗಿ

'ಎನ್‌ಇಪಿಯಲ್ಲಿ ಸಂಶೋಧನೆ, ನಾವೀನ್ಯತೆಗೆ ಒತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಸಂಶೋಧನೆ ಹಾಗೂ ಆವಿಷ್ಕಾರಕ್ಕೆ ಒತ್ತು ನೀಡಲಾಗಿದೆ. ವಿದ್ಯಾರ್ಥಿಗಳ ಸರ್ವತೋಮುಖ ಏಳಿಗೆಯ ಗುರಿಯನ್ನೂ ಇದು ಹೊಂದಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಪ್ರತಿಪಾದಿಸಿದರು.

ಎಜುಕೇಷನ್ ಪ್ರೊಮೋಷನ್ ಸೊಸೈಟಿ ಫಾರ್ ಇಂಡಿಯಾವು (ಇಪಿಎಸ್‌ಐ) ಕುಪೇಕಾ ಮತ್ತು ಕಾಮೆಡ್‌–ಕೆ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 'ಎನ್‌ಇಪಿ ಜಾರಿ: ಶಿಕ್ಷಣ ಸಂಸ್ಥೆಗಳ ಮುಂದಿರುವ ಸವಾಲುಗಳು ಹಾಗೂ ಅವಕಾಶಗಳು' ಕುರಿತ ವಿಚಾರಸಂಕಿರಣದಲ್ಲಿ ಮಾತನಾಡಿದರು.

ಡಾ.ಸಿ.ಎನ್‌ ಅಶ್ವತ್ಥನಾರಾಯಣ ಹಾಗೂ ಎಂ.ಆರ್‌.ಜಯರಾಂ ಚರ್ಚಿಸಿದರು

'ಎನ್‌ಇಪಿ ಅನುಷ್ಠಾನಕ್ಕೆ ಎಲ್ಲ ಸಿದ್ಧತೆಗಳನ್ನು ರಾಜ್ಯ ಸರ್ಕಾರ ಮಾಡಿಕೊಂಡಿದೆ. ಶಾಲೆ ಹಾಗೂ ಉನ್ನತ ಶಿಕ್ಷಣದ ಪಠ್ಯಕ್ರಮ, ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಹಾಗೂ ಸುಧಾರಣೆಗಳತ್ತಲೂ ಗಮನ ಕೇಂದ್ರೀಕರಿಸಲಾಗಿದೆ. ಬಹುಶಿಸ್ತೀಯ ವಿಧಾನಗಳ ಮೂಲಕ ಮಾದರಿ ಕಾಲೇಜುಗಳನ್ನು ಸ್ಥಾಪಿಸುವ ಕಾರ್ಯವೂ ಪ್ರಗತಿಯಲ್ಲಿದೆ' ಎಂದು ತಿಳಿಸಿದರು.

'ಎನ್‌ಇಪಿಆಶಯಕ್ಕೆ ಅನುಗುಣವಾಗಿ 10 ವರ್ಷಗಳಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಗೆ ಆಧುನಿಕತೆಯ ಸ್ಪರ್ಶ ನೀಡಲಾಗುತ್ತದೆ. ಅದು ವಿದ್ಯಾರ್ಥಿ ಕೇಂದ್ರಿತವಾಗಿರುವಂತೆ ಮಾಡಲಾಗುತ್ತದೆ. ಜಾಗತಿಕ ಗುಣಮಟ್ಟದ ಬೋಧನೆಗೂ ಒತ್ತು ನೀಡಲಾಗಿದೆ. ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನವನ್ನೂ ಅಸ್ತಿತ್ವಕ್ಕೆ ತರಲಾಗುತ್ತದೆ' ಎಂದು ತಿಳಿಸಿದರು.

ಎಐಸಿಟಿಇ ಮುಖ್ಯಸ್ಥ ಡಾ.ಅನಿಲ್ ದತ್ತಾತ್ರೇಯ ಸಹಸ್ರಬುದ್ಧೆ, ವೆಲ್ಲೂರು ತಾಂತ್ರಿಕ ಶಿಕ್ಷಣ ಸಂಸ್ಥೆಯ ಕುಲಪತಿ ಡಾ.ಜಿ.ವಿಶ್ವನಾಥನ್, ಎಂ.ಎಸ್. ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಂ.ಆರ್. ಜಯರಾಂ, ಬಿಐಎಂಟಿಇಸಿಎಚ್‌ನ ನಿರ್ದೇಶಕ ಡಾ.ಎಚ್.ಚತುರ್ವೇದಿ, ಪುಣೆಯ ಎಂಐಟಿ-ಎಡಿಟಿ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಅಧ್ಯಕ್ಷ ಪ್ರೊ. ಮಂಗೇಶ್ ಟಿ.ಕರಾಡ್ ಇದ್ದರು.

ಸಮರ್ಥನಂ ಅಂಗವಿಕಲರ ಸಂಸ್ಥೆ
Samarthanam Trust for the Disabled®

ಪೂರ್ವ ಅರ್ಹತಾ ಬಿಡ್

ಬೆಂಗಳೂರಿನ ಎಚ್.ಎಸ್.ಆರ್ ಬಡಾವಣೆ, ಸೆಕ್ಟರ್ 4ರಲ್ಲಿ ವಿಕಲಚೇತನ ಸ್ನೇಹಿ ಸಭಾಂಗಣದ ನಿರ್ಮಾಣಕ್ಕೆ **ಸಮರ್ಥನಂ ಅಂಗವಿಕಲರ ಟ್ರಸ್ಟ್** ಟೆಂಡರ್ ಆಹ್ವಾನಿಸುತ್ತಿದೆ. ಕ್ಲಾಸ್ 1 ಕಾಂಟ್ರಾಕ್ಟರ್ ಪರವಾನಗಿ ಅಥವಾ ಆರ್ಕಿಟೆಕ್ಚುರಲ್, ಸಿವಿಲ್, ಸ್ಟ್ರಕ್ಚರಲ್ ಹಾಗೂ ಮುನ್ನೆಲೆಯ ಕೆಲಸಗಳನ್ನು ಒಳಗೊಂಡ ಸಮಾನ ಕಾರ್ಯಯೋಜನೆಗಳನ್ನು ಹೊಂದಿರುವ ಆಸಕ್ತರು ಟೆಂಡರ್ ಪತ್ರಗಳನ್ನು : ಸಿಎ: 39, 15ನೇ ಅಡ್ಡರಸ್ತೆ, 16ನೇ ಮುಖ್ಯ ರಸ್ತೆ, ಸೆಕ್ಟರ್–4, ಎಚ್.ಎಸ್.ಆರ್ ಬಡಾವಣೆ, ಬೆಂಗಳೂರು– 560102 ಇಲ್ಲಿ ಪಡೆದುಕೊಳ್ಳಬಹುದು. **ಮೊಬೈಲ್ ನಂ : 9449864773 / 9449864682**

ಸಭಾಂಗಣದ ಬ್ಲಾಕ್ ಬೇಸ್ಮೆಂಟ್+ ಗ್ರೌಂಡ್+ ಮೂರು ಮಹಡಿಗಳನ್ನು ಒಳಗೊಂಡಿದ್ದು ಆಡಳಿತ ಕಛೇರಿ, 350 ಮಂದಿ ಹಿಡಿಸುವಷ್ಟು ಸಭಾಂಗಣ, ಚಟುವಟಿಕೆಗಳಿಗೆ ಮೀಸಲು ಸ್ಥಳ, ಕಲಾವಿದರ ಕೋಣೆಗಳು, ಸಭಾಂಗಣದ ಸರ್ವಿಸ್ ಏರಿಯಾಗಳನ್ನು ಒಳಗೊಂಡಿದೆ. (ಒಟ್ಟು ಬಿಲ್ಡಪ್ ಏರಿಯಾ: 24,000 ಚದುರ ಅಡಿ)

ಟೆಂಡರ್ ಸಂಬಂಧಿತ ಹೆಚ್ಚಿನ ಮಾಹಿತಿಗೆ ಹಾಗೂ ಪೂರ್ವ ಅರ್ಹತೆಗಳಿಗೆ **www.samarthanam.org/tender** ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ. ಪೂರ್ವ ಅರ್ಹತಾ ಟೆಂಡರ್ ಪತ್ರಗಳನ್ನು ಮೇಲ್ ಮೂಲಕ ಸಲ್ಲಿಸಲು ಕಡೆಯ **ದಿನಾಂಕ 5ನೇ ಡಿಸೆಂಬರ್, 2021** (ಶಾರ್ಟ್‌ಲಿಸ್ಟ್‌ನಲ್ಲಿರುವ ಅರ್ಹ ಬಿಡ್ಡರ್‌ಗಳಿಗೆ ಮಾತ್ರ ಟೆಂಡರ್ ವಿತರಿಸಲಾಗುವುದು. ಖಾತರಿಯಾದ ಬಗ್ಗೆ ಮೇಲ್‌ನಲ್ಲಿ ಮಾಹಿತಿ ತಿಳಿಸಲಾಗುವುದು)

ಟೆಂಡರ್ ಪತ್ರಗಳನ್ನು 7 ಡಿಸೆಂಬರ್ 2021 ರಿಂದ 11 ಡಿಸೆಂಬರ್ 2021ರವರೆಗೆ ವಿತರಿಸಲಾಗುವುದು.

ಪ್ರಶ್ನೆ ಮತ್ತು ಚಕಾರಗಳನ್ನು ಸಲ್ಲಿಸಲು ಕಡೆಯ ದಿನಾಂಕ 13 ಡಿಸೆಂಬರ್ 2021
ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ 18ನೇ ಡಿಸೆಂಬರ್ 2021

ಸಹಿ/–
ಸಂಸ್ಥಾಪಕ ವ್ಯವಸ್ಥಾಪನಾ ಟ್ರಸ್ಟಿ
ಸಮರ್ಥನಂ ಅಂಗವಿಕಲರ ಸಂಸ್ಥೆ

ನಂದಿಬೆಟ್ಟ ಇಂದಿನಿಂದ ಸಾರ್ವಜನಿಕರಿಗೆ ಮುಕ್ತ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಪ್ರಸಿದ್ಧ ಗಿರಿಧಾಮ ನಂದಿಬೆಟ್ಟ ಮೂರು ತಿಂಗಳ ನಂತರ ಡಿಸೆಂಬರ್ 1ರಿಂದ ಮತ್ತೆ ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಲಿದೆ.

ಶನಿವಾರ ಮತ್ತು ಭಾನುವಾರ ಗಿರಿಧಾಮದಲ್ಲಿ ಕೊಠಡಿಗಳನ್ನು ಕಾಯ್ದಿರಿಸಿದ ಪ್ರವಾಸಿಗರ ಪ್ರವೇಶಕ್ಕೆ ಮಾತ್ರ ಅವಕಾಶವಿದೆ. ಸಾಮಾನ್ಯ ಪ್ರವಾಸಿಗರಿಗೆ ಪ್ರವೇಶವಿಲ್ಲ. ಗಿರಿಧಾಮಕ್ಕೆ ಬರುವವರು ಕೋವಿಡ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಜಿಲ್ಲಾಡಳಿತ ಸೂಚಿಸಿದೆ.

ಆಗಸ್ಟ್ 24ರಂದು ಸುರಿದ ಭಾರಿ ಮಳೆಯಿಂದ ಸಂಭವಿಸಿದ ಭೂ ಕುಸಿತದಿಂದಾಗಿ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿತ್ತು. ದಿಬ್ಬ ಕುಸಿದ ಕಡೆ ಹೊಸದಾಗಿ ರಸ್ತೆ ನಿರ್ಮಿಸಲಾಗಿದೆ.

ಗಿರಿಧಾಮ ಪ್ರವೇಶಕ್ಕೆ ಪಾಸ್ ಕಡ್ಡಾಯ. ಪಾಸ್ ವಿತರಿಸಲು ಆನ್‌ಲೈನ್ ಮತ್ತು ಆಫ್‌ಲೈನ್ ವ್ಯವಸ್ಥೆ ಮಾಡಲಾಗಿದೆ.

ಗಿರಿಧಾಮದ ವಾಹನ ನಿಲುಗಡೆ ಪ್ರದೇಶದ ಸ್ಥಳಾವಕಾಶಕ್ಕೆ ಅನುಗುಣವಾಗಿ 1,500 ದ್ವಿಚಕ್ರ ವಾಹನ ಮತ್ತು 350 ನಾಲ್ಕು ಚಕ್ರ ವಾಹನಗಳ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ.

ಮುಖ್ಯ ಪ್ರವೇಶದ್ವಾರದಲ್ಲಿಯೇ ತಪಾಸಣೆ ನಡೆಸಿ ಪಾಸ್ ಹೊಂದಿರುವ ವಾಹನಗಳನ್ನು ಮಾತ್ರ ಮೇಲ್ಭಾಗಕ್ಕೆ ಬಿಡಲಾಗುತ್ತದೆ.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ – 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ. ದೂರವಾಣಿ: 08537–275740/ 276339/275463, ಇ–ಮೇಲ್: material276339@gmail.com ವೆಬ್‌ಸೈಟ್ : www.huttigold.co.in

ಅಲ್ಪಾವಧಿ–ಟೆಂಡರ್ ಪ್ರಕಟಣೆ ನಂ.54/2021–22 ದಿನಾಂಕ: 01.12.2021 (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು(ಸರಕು) ಇವರಿಂದ ಈ ಕೆಳಗಿನ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ತಯಾರಕರು ಮತ್ತು ಪರಿಗಣಿಸಲ್ಪಟ್ಟ ವಿತರಕರಿಂದ ಆಹ್ವಾನಿಸಲಾಗಿದೆ.

ಕ್ರ. ಸಂ.	ಸಾಮಗ್ರಿ ವಿವರ	ಪ್ರಮಾಣ	ಅಂದಾಜು ವೆಚ್ಚ. (ರೂ. ಕೋಟಿಗಳಲ್ಲಿ)	ಇ.ಎಂ.ಡಿ. ಮೊತ್ತ. (ರೂ.ಗಳಲ್ಲಿ)
1	65 mm ಪೋರ್ಜ್‌ಡ್ ಸ್ಟೀಲ್ ಗ್ರೈಂಡಿಂಗ್ ಮೀಡಿಯಾ ಬಾಲ್ಸ್ ಪೂರೈಸುವುದು. HGML/2021-22/IND3215.	ಪಟ್ಟಿಯ ಪ್ರಕಾರ	2.50	3,75,000/–
2	125 mm ಪೋರ್ಜ್‌ಡ್ ಸ್ಟೀಲ್ ಗ್ರೈಂಡಿಂಗ್ ಮೀಡಿಯಾ ಬಾಲ್ಸ್ ಪೂರೈಸುವುದು. HGML/2021-22/IND3216.	ಪಟ್ಟಿಯ ಪ್ರಕಾರ	3.75	5,62,500/–

(1) ಪೂರ್ವ ಭಾವಿ ಸಭೆ: 06.12.2021 ಬೆಳಿಗ್ಗೆ 10.30 ಗಂಟೆಗೆ. (2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 15.12.2021 ಸಂಜೆ 4.00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 18.12.2021 ಬೆಳಿಗ್ಗೆ 10.00 ಗಂಟೆಗೆ. ಟೆಂಡರ್ ನಮೂನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ https://www.eproc.karnataka.gov.in ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ನಿಯಮದ ಅನುಸಾರ. ಹೆಚ್ಚಿನ ಮಾಹಿತಿಗಾಗಿ ಖರೀದಿ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ವಿಎಸ್‌ಒಸಿ ತಂತ್ರಾಂಶ ಅಭಿವೃದ್ಧಿ

ಬೆಂಗಳೂರು: ಕ್ಲೌಡ್ ಕಂಪ್ಯೂಟಿಂಗ್ ಮತ್ತು ಡಾಟಾ ಸೆಂಟರ್ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಸಿಂಕ್ರೊನಾಟ್ ಸಂಸ್ಥೆಯು ವರ್ಚುವಲ್ ಸಿಸ್ಟಂ ಆನ್ ಚಿಪ್ (ವಿಎಸ್‌ಒಸಿ) ತಂತ್ರಾಂಶ ಅಭಿವೃದ್ಧಿಪಡಿಸಿ ಮಾರುಕಟ್ಟೆಗೆ ಪರಿಚಯಿಸಿದೆ.

'ಈ ತಂತ್ರಾಂಶವು ಕ್ಲೌಡ್ ಕಂಪ್ಯೂಟಿಂಗ್, ಎಡ್ಜ್ ಕಂಪ್ಯೂಟಿಂಗ್, ಡಾಟಾ ಸೆಂಟರ್ ಮತ್ತು ಐಒಟಿಗಳ ಗ್ರಹಿಕೆ ಹಾಗೂ ಅನುಷ್ಠಾನಗಳಲ್ಲಿ ಮಹತ್ವದ ಬದಲಾವಣೆ ತರುವ ನಿರೀಕ್ಷೆ ಇದೆ. ಕೂಲಿಂಗ್ ಮತ್ತು ಸಾಫ್ಟ್‌ವೇರ್ ಲೈಸೆನ್ಸಿಂಗ್‌ಗಳ ವೆಚ್ಚವನ್ನು ಶೇ 30 ರಿಂದ 50 ರಷ್ಟು ಕಡಿಮೆ ಮಾಡಬಹುದೆಂದು ಅಂದಾಜಿಸಲಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಇಎಸ್‌ಐ ಆಸ್ಪತ್ರೆ: ಚಿಕಿತ್ಸೆಗಾಗಿ ಅಲೆದಾಟ– ಕಾರ್ಮಿಕರಿಗೆ ಪೀಕಲಾಟ

ರೋಗಬಾಧೆಗಿಂತ ಸುತ್ತಾಟದ ಸುಸ್ತೇ ಜಾಸ್ತಿ!

• ವಿಜಯಕುಮಾರ್ ಎಸ್‌.ಕೆ.

ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯಲ್ಲಿ ನೋಂದಣಿಗೆ ಕಾದು ಕುಳಿತಿರುವ ಕಾರ್ಮಿಕರು ಮತ್ತು ಅವರ ಸಂಬಂಧಿಕರು ಪ್ರಜಾವಾಣಿ ಚಿತ್ರ/ಅನೂಪ್ ರಾಘ ಟಿ.

ಬೆಂಗಳೂರು: ಕಾರ್ಮಿಕರ ಹಣದಲ್ಲೇ ನಡೆಯುವ, ಕಾರ್ಮಿಕರ ಆರೋಗ್ಯ ಕಾಪಾಡಲೆಂದೇ ಇರುವ ಆಸ್ಪತ್ರೆ ಇದು. ಇಲ್ಲಿಗೆ ಬರುವ ರೋಗಿಗಳು ಚಿಕಿತ್ಸೆಗಾಗಿ ನಡೆಸಬೇಕಾದ ಅಲೆದಾಟದಲ್ಲೇ ಸುಸ್ತಾಗುತ್ತಾರೆ... ನಗರದಲ್ಲಿರುವ ಇಎಸ್‌ಐ ಆಸ್ಪತ್ರೆಗಳ ಸ್ಥಿತಿ ಇದು.

ಕಾರ್ಮಿಕರ ರಾಜ್ಯ ವಿಮಾ ನಿಗಮ ನಿರ್ವಹಣೆ ಮಾಡುತ್ತಿರುವ ಆಸ್ಪತ್ರೆಗಳಲ್ಲಿ ರಾಜಾಜಿನಗರದಲ್ಲಿ ಮಾದರಿ ಆಸ್ಪತ್ರೆ ಇದೆ. ಈ ಆಸ್ಪತ್ರೆ ಒಳ ಹೊಕ್ಕರೆ ಏಳುಸುತ್ತಿನ ಕೋಟೆಯಲ್ಲಿ ಸುತ್ತಾಡಿದ ಅನುಭವವಾಗುತ್ತದೆ. ರೋಗಿಗಳು, ಅವರ ಸಂಬಂಧಿಕರು ದಾಖಲೆ ಪತ್ರಗಳನ್ನು ಹಿಡಿದು, ಮೊಗದಲ್ಲಿ ದುಗುಡ ಹೊತ್ತು ಅತ್ತಿಂದಿತ್ತ ಅಲೆದಾಡುವ ದೃಶ್ಯಗಳಿಲ್ಲಿ ಮಾಮೂಲು.

ನಗರದ ಹಲವೆಡೆ ಇಎಸ್‌ಐ ಆಸ್ಪತ್ರೆಗಳಿವೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದರೆ ರಾಜಾಜಿನಗರದಲ್ಲಿನ 'ಮಾದರಿ ಆಸ್ಪತ್ರೆಗೆ' ಕಳುಹಿಸಲಾಗುತ್ತದೆ. ರೋಗಿಗಳನ್ನು ನೋಂದಾಯಿಸಲು, ಹೆಚ್ಚಿನ ಚಿಕಿತ್ಸೆಗೆ ಬೇರೆ ಆಸ್ಪತ್ರೆಗೆ ಕರೆದೊಯ್ಯಲು ಬೇಕಿರುವ ಅನುಮತಿ ಪಡೆಯಲು ಅಲೆದಾಡಿಯೇ ಕಾರ್ಮಿಕರು ಹೈರಾಣಾಗುತ್ತಾರೆ.

'ಕಾರ್ಮಿಕರ ವೇತನದಿಂದ ಇಎಸ್‌ಐ ಸೌಲಭ್ಯ ಪಡೆದುಕೊಳ್ಳಲು ತಿಂಗಳಿಗೆ ₹1 ಸಾವಿರ ಕಡಿತಗೊಳ್ಳುತ್ತದೆ. ಅದೇ ಹಣದಲ್ಲಿ ನಡೆಯುವ ಆಸ್ಪತ್ರೆಯಲ್ಲಿ ಸೌಲಭ್ಯಗಳನ್ನು ಪಡೆಯಲು ನಾವು ಪರದಾಡಬೇಕಿದೆ' ಎಂದು ಲಗ್ಗೆರೆಯಿಂದ ಚಿಕಿತ್ಸೆಗೆಂದು ಬಂದಿದ್ದ ರಮೇಶ್ ಬೇಸರ ತೋಡಿಕೊಂಡರು.

ಪ್ರಜಾವಾಣಿ ವಿಶೇಷ

'ವಿಶಾಲವಾದ ಜಾಗದಲ್ಲಿ ದೊಡ್ಡ ದೊಡ್ಡ ಕಟ್ಟಡಗಳಿವೆ. ಚಿಕಿತ್ಸೆ ನೀಡಲು ಬೇಕಾದ ಎಲ್ಲ ವ್ಯವಸ್ಥೆಗಳೂ ಇಲ್ಲಿವೆ. ಆದರೆ, ಸಿಬ್ಬಂದಿಯ ಬೇಜವಾಬ್ದಾರಿಯಿಂದ ಕಾರ್ಮಿಕರು ಅಲೆದಾಡಬೇಕಾದ ಸ್ಥಿತಿ ಇದೆ. ಶೈತ್ಯಾಗಾರದಲ್ಲಿ ಎರಡು ಶವಗಳು 15 ತಿಂಗಳು ಬಳಿಕ ಸಿಕ್ಕಿರುವುದು ಸಿಬ್ಬಂದಿ ಬೇಜವಾಬ್ದಾರಿ ಕೆಲಸಕ್ಕೆ ಸಾಕ್ಷಿ' ಎಂದರು.

'ಮೂತ್ರಪಿಂಡ ಸಮಸ್ಯೆ ಇರುವ ತಂದೆಗೆ ಡಯಾಲಿಸಿಸ್ ಮಾಡಿಸಬೇಕಿದೆ. ಈ ಆಸ್ಪತ್ರೆಯಲ್ಲಿ ನೋಂದಣಿ ಮಾಡಿಸಿ ದೃಢೀಕರಣ ಪತ್ರ ಪಡೆಯಬೇಕಾಗಿದೆ. ವಾರದಿಂದ ಅಲೆದಾಡುತ್ತಿದ್ದೇನೆ' ಎಂದು ಸಪ್ಪೆಮೋರೆಯಲ್ಲಿ ಕುಳಿತಿದ್ದ ಇಮ್ರಾನ್ ಹೇಳಿದರು.

'ಹೆಸರಿಗೆ ದೊಡ್ಡ ಆಸ್ಪತ್ರೆ. ಅನಾರೋಗ್ಯ ಪೀಡಿತರಾಗಿ ಬರುವ ಕಾರ್ಮಿಕರಿಗೆ ಸರಿಯಾದ ಚಿಕಿತ್ಸೆ ಇಲ್ಲಿ ಸಿಗುವುದಿಲ್ಲ. ದೊಡ್ಡ ಸಮಸ್ಯೆ ಇದ್ದರೆ ಬೇರೆ ಆಸ್ಪತ್ರೆಗಳಿಗೆ ರವಾನಿಸಲು ಮೀನಾಮೇಷ ಎಣಿಸುತ್ತಾರೆ. ಉದಾಹರಣೆಗೆ ಹೃದಯ ಸಂಬಂಧಿ ಖಾಯಿಲೆಗಳಿದ್ದರೆ ಜಯದೇವ ಆಸ್ಪತ್ರೆಗೆ ಕಳುಹಿಸಬೇಕು. ಅದಕ್ಕೂ ಮೂರ್ನಾಲ್ಕು ದಿನ ಸತಾಯಿಸುತ್ತಾರೆ' ಎಂದು ಕಾರ್ಮಿಕ ಹೋರಾಟಗಾರ ಅಪ್ಪಣ್ಣ ದೂರಿದರು.

'ಚಿಕಿತ್ಸೆ ಪಡೆಯಲು ಹಣಪಾವತಿಸಬೇಕಿಲ್ಲ ಎಂಬ ಕಾರಣಕ್ಕೆ ಕಾರ್ಮಿಕರು ಇಲ್ಲಿಗೆ ಬರುತ್ತಾರೆ. ಕಾರ್ಮಿಕರೆಂದರೆ ಆಸ್ಪತ್ರೆಯವರಿಗೆ ಅಸಡ್ಡೆ. ಆದ್ದರಿಂದಲೇ ಈ ರೀತಿ ಉಡಾಫೆ ವರ್ತನೆ ಇದೆ. ತಗಾದೆ ತೆಗೆದರೆ ಭದ್ರತಾ ಸಿಬ್ಬಂದಿ ಮೂಲಕ ಕಾರ್ಮಿಕರನ್ನು ಹೊರಗೆ ದಬ್ಬಿಸುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

'ಪೌರ ಕಾರ್ಮಿಕರು, ವಲಸೆ ಕಾರ್ಮಿಕರು ಸೇರಿದಂತೆ ಅನಕ್ಷರಸ್ಥರೂ ಚಿಕಿತ್ಸೆಗಾಗಿ ಇಲ್ಲಿಗೆ ಬರುತ್ತಾರೆ. ದಾಖಲೆಗಳಲ್ಲಿ ಸಣ್ಣಪುಟ್ಟ ಲೋಪವಿದ್ದರೆ, ಇನಿಷಿಯಲ್(ಆರಂಭಿಕ ಅಕ್ಷರ) ಬಿಟ್ಟು ಹೋಗಿದ್ದರೆ ಅದನ್ನೇ ದೊಡ್ಡದು ಮಾಡಿ ಚಿಕಿತ್ಸೆ ನಿರಾಕರಿಸಲಾಗುತ್ತದೆ. ಈ ಎಲ್ಲ ಸಮಸ್ಯೆಗಳಿಂದ ಬೇಸತ್ತಿರುವ ಕಾರ್ಮಿಕರು ಇಎಸ್‌ಐ ಸೌಲಭ್ಯವೂ ಬೇಡ, ವೇತನದಲ್ಲಿ ಕಡಿತ ಆಗುವುದು ಬೇಡ ಎನ್ನುತ್ತಿದ್ದಾರೆ' ಎಂದು ಅಪ್ಪಣ್ಣ ಹೇಳಿದರು.

'ಕಾರ್ಮಿಕ ಇಲಾಖೆ ಕಾರ್ಯದರ್ಶಿಯಾಗಿದ್ದ ಕ್ಯಾಪ್ಟನ್ ಮಣಿವಣ್ಣನ್ ಅವರು ಈ ಆಸ್ಪತ್ರೆಗಳ ಮೇಲುಸ್ತುವಾರಿಗೆ ಸಮಿತಿ ರಚನೆ ಮಾಡಲು ಎರಡು ಸಭೆಗಳನ್ನು ನಡೆಸಿದ್ದರು. ಅವರು ಬೇರೆಡೆಗೆ ವರ್ಗಾವಣೆಯಾದ ಬಳಿಕ ಸಭೆಯೇ ನಡೆದಿಲ್ಲ' ಎಂದರು.

'ಪೀಣ್ಯದಲ್ಲಿ ಸುಸಜ್ಜಿತ ಆಸ್ಪತ್ರೆ'

ಪೀಣ್ಯದಲ್ಲಿ ಇಎಸ್‌ಐ ಆಸ್ಪತ್ರೆ ಸುಸಜ್ಜಿತವಾಗಿದ್ದು, ಸಮಯಕ್ಕೆ ಸರಿಯಾಗಿ ಚಿಕಿತ್ಸೆಯೂ ದೊರೆಯುತ್ತಿದೆ ಎನ್ನುವ ಅಭಿಪ್ರಾಯ ಕಾರ್ಮಿಕರಲ್ಲಿದೆ.

'ಯಾವ ಖಾಸಗಿ ಆಸ್ಪತ್ರೆಗೂ ಕಡಿಮೆ ಇಲ್ಲದಂತೆ ಕಟ್ಟಡ ನಿರ್ಮಾಣವಾಗಿದೆ. ನಿರ್ವಹಣೆ ಕೂಡ ಅಚ್ಚುಕಟ್ಟಾಗಿದ್ದು, ವೈದ್ಯರೂ ಸಮಯ ಪಾಲನೆ ಮಾಡುತ್ತಿದ್ದಾರೆ' ಎಂದು ಚಿತ್ರದುರ್ಗದಿಂದ ಚಿಕಿತ್ಸೆಗೆಂದು ಬಂದಿದ್ದ ರುದ್ರಪ್ಪ ಹೇಳಿದರು.

ರಾಜಾಜಿನಗರದ ಇಎಸ್‌ಐ ಆಸ್ಪತ್ರೆ

ರೋಗಿಗಳಿಗೆ ಚಿಕಿತ್ಸೆ ವಿಳಂಬವಾಗುತ್ತಿದ್ದರೆ, ಸಭೆ ನಡೆಸಿ ಸೂಚನೆ ನೀಡುತ್ತೇನೆ. ಕೇಂದ್ರ ಸರ್ಕಾರಕ್ಕೂ ಪತ್ರ ಬರೆಯುತ್ತೇನೆ

ಶಿವರಾಂ ಹೆಬ್ಬಾರ್, ಕಾರ್ಮಿಕ ಸಚಿವ

ಇಎಸ್‌ಐ ಆಸ್ಪತ್ರೆಗಳಿಗೆ ಹಣಕಾಸಿನ ಕೊರತೆ ಇಲ್ಲ. ಆದರೆ, ಸರಿಯಾದ ವ್ಯವಸ್ಥೆ ಇಲ್ಲ. ಭ್ರಷ್ಟಾಚಾರ, ಚಿಕಿತ್ಸೆ ವಿಪರೀತ ವಿಳಂಬವಾಗುವುದರಿಂದ ಕಾರ್ಮಿಕರು ರೋಸಿ ಹೋಗಿದ್ದಾರೆ.

ಕೆ.ಮಹಾಂತೇಶ್, ನಿರ್ಮಾಣ ಕಾರ್ಮಿಕರ ಫೆಡರೇಷನ್ ಪ್ರಧಾನ ಕಾರ್ಯದರ್ಶಿ

'ಹೊಸ ತಾಲ್ಲೂಕು ಮೂಲಸೌಕರ್ಯಕ್ಕೆ ಹಣ ಇಲ್ಲವಾದರೆ ರದ್ದು ಮಾಡಿ'

ಬೆಂಗಳೂರು: 'ಹೊಸದಾಗಿ ಘೋಷಿಸಿದ 50 ತಾಲ್ಲೂಕುಗಳಲ್ಲಿ, ತಾಲ್ಲೂಕು ಕೇಂದ್ರ ಕಚೇರಿ ನಿರ್ಮಾಣ ವಿಳಂಬವಾಗುತ್ತಿದೆ ಹಾಗೂ ಅಗತ್ಯ ಮೂಲಸೌಕರ್ಯಕ್ಕೆ ಹಣ ಒದಗಿಸಲು ಸದ್ಯಕ್ಕೆ ಆಗುತ್ತಿಲ್ಲ ಎನ್ನುವುದಾದರೆ ಹೊಸ ತಾಲ್ಲೂಕುಗಳನ್ನು ರದ್ದು ಮಾಡಿಬಿಡಿ' ಎಂದು ಹೈಕೋರ್ಟ್ ಕಿಡಿಕಾರಿದೆ.

ಈ ಕುರಿತಂತೆ ಬೀದರ್ ಜಿಲ್ಲೆಯ ಸಾಮಾಜಿಕ ಕಾರ್ಯಕರ್ತ ಗುರುನಾಥ ವಡ್ಡೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ನ್ಯಾಯಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿ, '50 ತಾಲ್ಲೂಕು ಗಳಲ್ಲಿ ಮೂಲಸೌಕರ್ಯ ಒದಗಿಸಲು ದೊಡ್ಡ ಮೊತ್ತದ ಹಣಕಾಸು ಬೇಕಾಗುತ್ತದೆ. ಆದರೆ, ಕೋವಿಡ್ ಹಾಗೂ ಪ್ರವಾಹದ ಹಿನ್ನೆಲೆಯಲ್ಲಿ ಆರ್ಥಿಕ ಪರಿಸ್ಥಿತಿ ಅಷ್ಟೊಂದು ಸರಿಯಿಲ್ಲ. ಆದರೂ, ಹಣಕಾಸಿನ ನೆರವು ನೀಡಲು ರಾಜ್ಯ ಸರ್ಕಾರ ಎಲ್ಲಾ ಪ್ರಯತ್ನ ನಡೆಸಿದೆ' ಎಂದರು.

ಪ್ರಮಾಣ ಪತ್ರ ಪರಿಶೀಲಿಸಿದ ನ್ಯಾಯಪೀಠ, 'ರಾಜ್ಯ ಸರ್ಕಾರ ಸಲ್ಲಿಸಿರುವ ಪ್ರಮಾಣಪತ್ರ ಸಮಾಧಾನಕರವಾಗಿಲ್ಲ. ಹಣ ಬಿಡುಗಡೆ ಮಾಡಲಾಗಿದೆ, ಕ್ರಮ ಕೈಗೊಳ್ಳಲಾಗುತ್ತಿದೆ ಎಂದಷ್ಟೇ ಹೇಳಲಾಗಿದೆ. ಇದೊಂದು ಅಸ್ಪಷ್ಟ ಪ್ರಮಾಣಪತ್ರ. ಆದ್ದರಿಂದ, ಹೊಸದಾಗಿ ಸಮರ್ಪಕ ಪ್ರಮಾಣಪತ್ರ ಸಲ್ಲಿಸಬೇಕು' ಎಂದು ಸೂಚಿಸಿತು.

'ಒಂದು ವೇಳೆ ಸಮರ್ಪಕ ಪ್ರಮಾಣಪತ್ರ ಸಲ್ಲಿಸಲು ವಿಫಲವಾದಲ್ಲಿ ಮುಂದಿನ ವಿಚಾರಣೆಗೆ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಖುದ್ದು ಹಾಜರಾಗಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದ ನ್ಯಾಯಪೀಠ, ವಿಚಾರಣೆಯನ್ನು 2022ರ ಜನವರಿ 14ಕ್ಕೆ ಮುಂದೂಡಿತು.

ಆಕ್ಷೇಪ ಏನು?: '2017–18ನೇ ಸಾಲಿನ ಬಜೆಟ್‌ನಲ್ಲಿ ರಾಜ್ಯ ಸರ್ಕಾರ ಹೊಸದಾಗಿ ಘೋಷಿಸಿದ 50 ತಾಲ್ಲೂಕುಗಳಲ್ಲಿ ತಾಲ್ಲೂಕು ಕೇಂದ್ರ ಕಚೇರಿಗಳೇ ಇಲ್ಲ ಮತ್ತು ಅವುಗಳಿಗೆ ಅಗತ್ಯವಾದ ಇತರೆ ಸರ್ಕಾರಿ ಕಚೇರಿಗಳೂ ಸ್ಥಾಪನೆಯಾಗಿಲ್ಲ. ಮೂರು ವರ್ಷ ಕಳೆದರೂ ಸಾರ್ವಜನಿಕರು ಪರದಾಡುತ್ತಿದ್ದಾರೆ' ಎಂಬುದು ಅರ್ಜಿದಾರರ ಆರೋಪ.

ಓತಿಹಾಳ ಗ್ರಾಮದಲ್ಲಿ ಶಾಲೆಗೆ ಮೂಲಸೌಕರ್ಯ ಕಲ್ಪಿಸಲು ಒತ್ತಾಯಿಸಿ ಗ್ರಾಮಸ್ಥರು ಶಾಲೆಗೆ ಬೀಗ ಹಾಕಿದ್ದರಿಂದ ವಿದ್ಯಾರ್ಥಿಗಳು ಮಂಗಳವಾರ ಬಯಲಲ್ಲಿಯೇ ಕುಳಿತು ಪಾಠ ಕೇಳಿದರು –ಪ್ರಜಾವಾಣಿ ಚಿತ್ರ

ಮೂಲಸೌಕರ್ಯ ಕಲ್ಪಿಸಲು ಗ್ರಾಮಸ್ಥರ ಒತ್ತಾಯ

ಶಾಲೆಗೆ ಬೀಗ; ಬಯಲಲ್ಲೇ ಕಲಿಕೆ

ಪ್ರಜಾವಾಣಿ ವಾರ್ತೆ

ಸಿಂದಗಿ (ವಿಜಯಪುರ ಜಿಲ್ಲೆ): ಶಾಲೆಗೆ ಮೂಲಸೌಕರ್ಯ ಕಲ್ಪಿಸಬೇಕು ಮತ್ತು ಶಿಕ್ಷಕರ ಕೊರತೆ ನೀಗಿಸಬೇಕು ಎಂದು ಒತ್ತಾಯಿಸಿ ಗ್ರಾಮಸ್ಥರು ಶಾಲೆಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದ್ದರಿಂದ ಮಂಗಳವಾರ ತಾಲ್ಲೂಕಿನ ಓತಿಹಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು, ಬಯಲಲ್ಲೇ ಕುಳಿತು ಪಾಠ ಕೇಳಬೇಕಾಯಿತು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಶಿವಾನಂದ ಸಾಲಿಮಠ, ಗ್ರಾಮದ ಪ್ರಮುಖರ ನೇತೃತ್ವದಲ್ಲಿ ಗ್ರಾಮಸ್ಥರು ಶಾಲೆಗೆ ಬಂದು ವಿದ್ಯಾರ್ಥಿಗಳನ್ನು ಕೊಠಡಿಯಿಂದ ಹೊರ ಕಳಿಸಿ ಶಾಲೆಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ಇಬ್ಬರು ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಮುಖ್ಯ ಶಿಕ್ಷಕರಿಗೆ ಆದೇಶಿಸಲಾಗಿದೆ. ಶಾಲೆಗೆ ಮೂಲಸೌಕರ್ಯಗಳನ್ನು ಗ್ರಾಮ ಪಂಚಾಯಿತಿ ಕಲ್ಪಿಸಬೇಕಿದೆ

ಆರ್.ಎಸ್.ನೀರಲಗಿ
ಕ್ಷೇತ್ರ ಶಿಕ್ಷಣಾಧಿಕಾರಿ, ಸಿಂದಗಿ

ಗ್ರಾಮದ ಪ್ರಮುಖ ಬಾಬೂ ನಾಟೀಕಾರ ಮಾತನಾಡಿ, 'ಶಾಲೆ 30 ವರ್ಷಗಳಿಂದ ಸೌಕರ್ಯಗಳಿಂದ ವಂಚಿತವಾಗಿದೆ. ಕಾಂಪೌಂಡ್ ಇಲ್ಲ, ಕ್ರೀಡಾ ಸಾಮಗ್ರಿಗಳಿಲ್ಲ. ವಿದ್ಯುತ್ ಸಂಪರ್ಕವೂ ಇಲ್ಲ. ಮೂರು ದಶಕಗಳಿಂದ ಈವರೆಗೆ ಒಂದು ಸಲವೂ ಕೊಠಡಿಗಳಿಗೆ ಸುಣ್ಣ ಬಣ್ಣ ಹಚ್ಚಿಲ್ಲ...' ಎಂದು ಸಮಸ್ಯೆಗಳ ಸರಮಾಲೆಯನ್ನೇ ಬಿಚ್ಚಿಟ್ಟರು.

'ಇಂಗ್ಲಿಷ್, ಗಣಿತ, ವಿಜ್ಞಾನ ಶಿಕ್ಷಕರ ಕೊರತೆಯಿಂದಾಗಿ ಮಕ್ಕಳ ಕಲಿಕೆಗೆ ತೊಂದರೆಯಾಗುತ್ತಿದೆ. ಶಾಲೆಯ ಸಮಸ್ಯೆಗಳ ಕುರಿತು ಬಿಇಒ, ಡಿಡಿಪಿಐ ಅವರ ಗಮನಕ್ಕೆ ಸಾಕಷ್ಟು ಬಾರಿ ತಂದರೂ ಪ್ರಯೋಜನ ಆಗಿಲ್ಲ. ಇನ್ನಾದರೂ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲಿ. ಇಲ್ಲದಿದ್ದರೆ ಹೋರಾಟ ತೀವ್ರಗೊಳ್ಳುತ್ತದೆ' ಎಂದು ಎಸ್‌ಡಿಎಂಸಿ ಅಧ್ಯಕ್ಷ ಶಿವಾನಂದ ಸಾಲಿಮಠ ಎಚ್ಚರಿಸಿದರು.

ಈ ಪ್ರತಿಭಟನೆಯಿಂದಾಗಿ ಮಕ್ಕಳು ಬಯಲಲ್ಲೇ ಕುಳಿತು ಪಾಠ ಕೇಳಿದರು.

ಬಿಜೆಪಿ ಕಾರ್ಯಕರ್ತರ ಮಾರಾಮಾರಿ: ಮೂವರಿಗೆ ಗಾಯ

ಅರಸೀಕೆರೆ: ವಿಧಾನಪರಿಷತ್ ಚುನಾವಣೆಗೆ ಬಿಜೆಪಿ ಅಭ್ಯರ್ಥಿ ಎಚ್.ಎಂ.ವಿಶ್ವನಾಥ್ ಪರ ಪ್ರಚಾರ ಸಭೆಯಲ್ಲಿ ಮಂಗಳವಾರ ಎರಡು ಬಣಗಳ ನಡುವೆ ಮಾರಾಮಾರಿ ನಡೆದಿದ್ದು, ಮೂವರು ಗಾಯಗೊಂಡರು.

ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ನಡೆದ ಸಭೆಯಲ್ಲಿ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ ಜೊತೆಗೆ ಮುಖಂಡ ಅಣ್ಣನಾಯಕನಹಳ್ಳಿ ವಿಜಯ್‌ಕುಮಾರ್ ಅವರನ್ನು ವೇದಿಕೆ ಮೇಲೆ ಕುಳ್ಳಿರಿಸಿದ್ದಕ್ಕೆ ಮತ್ತೊಬ್ಬ ಮುಖಂಡ ಎನ್.ಆರ್ ಸಂತೋಷ್ ಪರ ಬಣ ಆಕ್ಷೇಪ ವ್ಯಕ್ತಪಡಿಸಿತು.

ಸಂತೋಷ್ ಭಾಷಣದ ವೇಳೆ ವಿಜಯಕುಮಾರ್ ಬಣ ವಿರೋಧ ವ್ಯಕ್ತಪಡಿಸಿ, 'ಸಂತೋಷ್ ಅವರು ಸುಳ್ಳು ಕೇಸು ದಾಖಲಿಸಿ ಬಿಜೆಪಿ ಮುಖಂಡರಿಗೆ ಕಿರುಕುಳ ನೀಡುತ್ತಿದ್ದಾರೆ. ಅಂಥವರಿಗೆ ಮಣೆ ಹಾಕುವುದಾದರೆ ಏಕೆ ಬೆಂಬಲ ಕೊಡಬೇಕು' ಎಂದು ತಗಾದೆ ತೆಗೆದರು. ಸಚಿವರು ಎರಡೂ ಕಡೆಯವರನ್ನು ಸಮಾಧಾನಪಡಿಸಿದರು.

ಸಭೆಯಿಂದ ಸಚಿವರು ನಿರ್ಗಮಿಸಿದ ಬಳಿಕ ಎರಡು ಬಣಗಳ ನಡುವೆ ಮಾರಾಮಾರಿ ನಡೆಯಿತು. ಕುರ್ಚಿಗಳನ್ನು ಎಸೆದಾಡಿದರು. ಕಾರ್ಯಕರ್ತ ಮೋಹನ್ ನಾಯ್ಕ ಅವರಿಗೆ ಮೂಗಿಗೆ ಪೆಟ್ಟಾಯಿತು.

ಎನ್.ಆರ್.ಸಂತೋಷ್ ಬಣದಲ್ಲಿ ಗುರುತಿಸಿಕೊಂಡಿರುವ ಹರ್ಷವರ್ಧನ್ ಹಾಗೂ ನಗರಸಭೆ ಸದಸ್ಯ ಭಾಸ್ಕರ್ ಇಬ್ಬರೂ ಸೇರಿ ಶಿವರಾಜ್, ಮಲ್ಲಿಕ್, ಚರಣ್, ಶಶಿ ಸೇರಿದಂತೆ ಇತರರ ವಿರುದ್ಧ ಜಾತಿ ನಿಂದನೆ ದೂರು ನೀಡಿದ್ದಾರೆ.

ಮುಂದಿನ ಶೈಕ್ಷಣಿಕ ವರ್ಷದಿಂದ ಎನ್‌ಟಿಎ ಮೂಲಕ ಪ್ರವೇಶ ಪರೀಕ್ಷೆ

ಕೇಂದ್ರೀಯ ವಿ.ವಿಗಳ ಪ್ರವೇಶಕ್ಕೆ ಸಿಇಟಿ

ನವದೆಹಲಿ (ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಮುಂದಿನ ಶೈಕ್ಷಣಿಕ ವರ್ಷದಿಂದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ನಡೆಸಲಾಗುವುದು. ಇದನ್ನು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ನಡೆಸಲಿದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ತಿಳಿಸಿದೆ.

ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಪತ್ರ ಬರೆದಿರುವ ಯುಜಿಸಿ, ಮುಂದಿನ ಶೈಕ್ಷಣಿಕ ವರ್ಷದಿಂದ ಸಾಮಾನ್ಯ ಪ್ರವೇಶ ಪರೀಕ್ಷೆಗಳ ಮೂಲಕ ವಿದ್ಯಾರ್ಥಿಗಳ ಪ್ರವೇಶಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಸೂಚಿಸಿದೆ. ಸಿಇಟಿಯನ್ನು ಕನಿಷ್ಠ 13 ಭಾಷೆಗಳಲ್ಲಿ ಎನ್‌ಟಿಎ ನಡೆಸಲಿದೆ ಎಂದೂ ತಿಳಿಸಿದೆ.

ಈ ಸಿಇಟಿಯನ್ನು ಅಳವಡಿಸಿಕೊಳ್ಳಲು ಆಸಕ್ತಿ ತೋರುವ ರಾಜ್ಯಗಳ ವಿಶ್ವವಿದ್ಯಾಲಯಗಳು, ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಿಗೂ ಅವಕಾಶ ನೀಡಲಾಗುವುದು ಎಂದು ಯುಜಿಸಿ ಪತ್ರದಲ್ಲಿ ಉಲ್ಲೇಖಿಸಿದೆ.

ಹೊಸ ಶಿಕ್ಷಣ ನೀತಿಯು (ಎನ್‌ಇಪಿ) ದೇಶದ ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಎನ್‌ಟಿಎ ಮೂಲಕ ಸಿಇಟಿ ನಡೆಸಿ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವಂತೆ ಶಿಫಾರಸು ಮಾಡಿದೆ.

ಕೇಂದ್ರ ಶಿಕ್ಷಣ ಸಚಿವಾಲಯವು 2021ನೇ ಸಾಲಿನಿಂದಲೇ ಇದನ್ನು ಜಾರಿಗೊಳಿಸುವುದಾಗಿ ಈ ಹಿಂದೆ ಘೋಷಿಸಿತ್ತು. ಆದರೆ ಕೋವಿಡ್ ಪಿಡುಗಿನ ಕಾರಣದಿಂದ ಅದು ಸಾಕಾರವಾಗಲಿಲ್ಲ.

ಪಿಎಚ್‌.ಡಿ ಪ್ರವೇಶಕ್ಕೆ ರಾಷ್ಟ್ರೀಯ ಅರ್ಹತಾ ಪರೀಕ್ಷೆಯ (ಎನ್‌ಇಟಿ) ಅಂಕಗಳನ್ನು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಬಳಸುವಂತೆಯೂ ಯುಜಿಸಿ ಪತ್ರದಲ್ಲಿ ಹೇಳಿದೆ.

ಆಂಧ್ರ, ಒಡಿಶಾ, ಪ. ಬಂಗಾಳದಲ್ಲಿ ಮಳೆ ಸಾಧ್ಯತೆ

ಡಿ.5 ಮತ್ತು 6ರಂದು ಈಶಾನ್ಯ ರಾಜ್ಯಗಳಲ್ಲೂ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಡಿ. 4ರಂದು ಚಂಡಮಾರುತ ಅಪ್ಪಳಿಸುವ ಭೀತಿ

ನವದೆಹಲಿ (ಪಿಟಿಐ): 'ಡಿಸೆಂಬರ್ 4ರಂದು ಬೆಳಿಗ್ಗೆ ಆಂಧ್ರ ಪ್ರದೇಶ, ಒಡಿಶಾದ ಕರಾವಳಿ ಪ್ರದೇಶ ಹಾಗೂ ಪಶ್ಚಿಮ ಬಂಗಾಳಕ್ಕೆ ಚಂಡಮಾರುತ ಅಪ್ಪಳಿಸಲಿದ್ದು, ಭಾರಿ ಮಳೆಯಾಗುವ ಸಾಧ್ಯತೆ ಇದೆ' ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮಂಗಳವಾರ ತಿಳಿಸಿದೆ.



ಉಪಗ್ರಹ ಚಿತ್ರ

'ಅಂಡಮಾನ್ ನಿಕೋಬಾರ್‌ಗೆ ಹೊಂದಿಕೊಂಡಂತಿರುವ ದಕ್ಷಿಣ ಥಾಯ್ಲೆಂಡ್ ಸಮುದ್ರದಲ್ಲಿ ಬೆಳಿಗ್ಗೆ 8.30ರ ಸುಮಾರಿಗೆ ಕಡಿಮೆ ಒತ್ತಡ ಪ್ರದೇಶ ಸೃಷ್ಟಿಯಾಗಿದ್ದು, ಇದರ ಪರಿಣಾಮ ಮುಂದಿನ 12 ಗಂಟೆಗಳಲ್ಲಿ ಅಂಡಮಾನ್ ನಿಕೋಬಾರ್‌ನಲ್ಲೂ ವಾಯುಭಾರ ಕುಸಿತವಾಗಲಿದೆ. ಇದು ಆಗ್ನೇಯ ಮತ್ತು ಪೂರ್ವ-ಮಧ್ಯ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತಕ್ಕೆ ಕಾರಣವಾಗಲಿದೆ. ಇದರಿಂದಾಗಿ 24 ಗಂಟೆಗಳಲ್ಲಿ ಬಂಗಾಳ ಕೊಲ್ಲಿಯ ಮಧ್ಯ ಭಾಗಗಳಲ್ಲಿ ಚಂಡಮಾರುತವು ತೀವ್ರಗೊಳ್ಳಲಿದೆ' ಎಂದು ಇಲಾಖೆ ಹೇಳಿದೆ.

'ಡಿ.4ರಂದು ಬೆಳಿಗ್ಗೆ ಚಂಡಮಾರುತವು ಉತ್ತರ ಆಂಧ್ರಪ್ರದೇಶ ಮತ್ತು ಒಡಿಶಾದ ಕರಾವಳಿ ಪ್ರದೇಶಗಳನ್ನು ತಲುಪಲಿದೆ. ಇದರಿಂದಾಗಿ ಒಡಿಶಾದ ಹಲವೆಡೆ, ಪಶ್ಚಿಮ ಬಂಗಾಳದ ಕರಾವಳಿ ಜಿಲ್ಲೆಗಳು, ಆಂಧ್ರಪ್ರದೇಶದ ಉತ್ತರ ಕರಾವಳಿಯ ಹಲವೆಡೆ ಭಾರಿ ಮಳೆಯಾಗುವ ಸಾಧ್ಯತೆ ಇದೆ' ಎಂದು ಮುನ್ಸೂಚನೆ ನೀಡಿದೆ.

ಇಡಬ್ಲ್ಯುಎಸ್ ಆದಾಯ ಮಿತಿ: ತ್ರಿಸದಸ್ಯ ಸಮಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಪಡೆಯಲು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ (ಇಡಬ್ಲ್ಯುಎಸ್) ನಿಗದಿಪಡಿಸಿರುವ ವಾರ್ಷಿಕ ₹ 8 ಲಕ್ಷ ಆದಾಯ ಮಿತಿಯನ್ನು ಪರಿಷ್ಕರಿಸಲು ಮೂವರು ಸದಸ್ಯರನ್ನು ಒಳಗೊಂಡ ಸಮಿತಿಯನ್ನು ಕೇಂದ್ರ ಸರ್ಕಾರ ಮಂಗಳವಾರ ರಚಿಸಿದೆ.

ಹಣಕಾಸು ಸಚಿವಾಲಯದ ನಿವೃತ್ತ ಕಾರ್ಯದರ್ಶಿ ಅಜಯಭೂಷಣ್ ಪಾಂಡೆ, ಭಾರತೀಯ ಸಮಾಜವಿಜ್ಞಾನ ಸಂಶೋಧನಾ ಪರಿಷತ್ತಿನ ಸದಸ್ಯ ಕಾರ್ಯದರ್ಶಿ ವಿ.ಕೆ.ಮಲ್ಹೋತ್ರಾ ಹಾಗೂ ಪ್ರಧಾನ ಆರ್ಥಿಕ ಸಲಹೆಗಾರ ಸಂಜಯ್ ಸನ್ಯಾಲ್ ಅವರು ಈ ಸಮಿತಿಯಲ್ಲಿ ಇದ್ದಾರೆ. ಮೂರು ವಾರಗಳ ಒಳಗಾಗಿ ವರದಿ ಸಲ್ಲಿಸುವಂತೆ ಸಮಿತಿಗೆ ಸೂಚಿಸಲಾಗಿದೆ ಎಂದು ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯ ತಿಳಿಸಿದೆ.

'ಆರ್ಥಿಕವಾಗಿ ಹಿಂದುಳಿದ ವರ್ಗವನ್ನು ಗುರುತಿಸಲು ವಿವಿಧ ರಾಜ್ಯಗಳಲ್ಲಿ ಅನುಸರಿಸಲಾಗುತ್ತಿರುವ ವಿಧಾನಗಳನ್ನು ಈ ತ್ರಿಸದಸ್ಯ ಸಮಿತಿ ಪರಿಶೀಲಿಸುವುದು ಹಾಗೂ ಈ ಉದ್ದೇಶಕ್ಕಾಗಿ ಭವಿಷ್ಯದಲ್ಲಿ ಅಳವಡಿಸಿಕೊಳ್ಳಬೇಕಾದ ಮಾನದಂಡಗಳ ಕುರಿತು ಶಿಫಾರಸು ಮಾಡುವುದು' ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

'ಆದಾಯ ಮಿತಿ ಮಾನದಂಡ ಪರಿಷ್ಕರಿಸಲು ಸಮಿತಿ ರಚಿಸಲಾಗುವುದು' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್, ಸೂರ್ಯಕಾಂತ್, ವಿಕ್ರಂ ನಾಥ್ ಅವರಿದ್ದ ಪೀಠಕ್ಕೆ ನ. 25ರಂದು ತಿಳಿಸಿದ್ದರು.

ಅಖಿಲ ಭಾರತ ಕೋಟಾ ಸೀಟುಗಳಿಗೆ ಒಬಿಸಿ ಮತ್ತು ಇಡಬ್ಲ್ಯುಎಸ್ ವರ್ಗದ ಮೀಸಲಾತಿ ಸಿಂಧುತ್ವ ಕುರಿತು ತೀರ್ಮಾನಕೈಗೊಳ್ಳುವವರೆಗೂ ನೀಟ್–ಪಿ.ಜಿ ಕೌನ್ಸೆಲಿಂಗ್ ಮುಂದೂಡಬೇಕು ಎಂದು ಸುಪ್ರೀಂಕೋರ್ಟ್ ಕಳೆದ ಅಕ್ಟೋಬರ್ 25ರಂದು ಕೇಂದ್ರಕ್ಕೆ ನಿರ್ದೇಶಿಸಿತ್ತು.

ಸಂವಿಧಾನದ 15ನೇ ವಿಧಿ ಅನ್ವಯ, ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇ 10ರಷ್ಟು ಮೀಸಲಾತಿ ಘೋಷಿಸಿದ್ದ ಕೇಂದ್ರ ಸರ್ಕಾರ, ಈ ಸೌಲಭ್ಯ ಪಡೆಯಲು 2019ರ ಜನವರಿ 17ರಂದು ಆದಾಯ ಮಿತಿಯನ್ನು ನಿಗದಿ ಮಾಡಿತ್ತು.

ಗಾಂಜಾ ಪೊಟ್ಟಣ, ಚಿಲುಮೆ ಪತ್ತೆ; ಎಫ್‌ಐಆರ್ ದಾಖಲು

ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ಚಟುವಟಿಕೆ ನಡೆಯುತ್ತಿದ್ದ ಮಾಹಿತಿ ಮೇರೆಗೆ ನಗರದ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮೇಲೆ ಸಿಸಿಬಿ ಪೊಲೀಸರು ಮಂಗಳವಾರ ಬೆಳಿಗ್ಗೆ ದಿಢೀರ್ ದಾಳಿ ಮಾಡಿದರು.

ಸಿಸಿಬಿಯ ಇಬ್ಬರು ಡಿಸಿಪಿಗಳ ನೇತೃತ್ವದಲ್ಲಿ ಮೂವರು ಎಸಿಪಿಗಳು ಹಾಗೂ 15 ಇನ್‌ಸ್ಪೆಕ್ಟರ್‌ಗಳು ಏಕಕಾಲದಲ್ಲಿ ಜೈಲಿಗೆ ಪ್ರವೇಶಿಸಿದರು. ಪ್ರತಿಯೊಂದು ಬ್ಯಾರಕ್ ಹಾಗೂ ಕೊಠಡಿಗಳಲ್ಲಿ ತಪಾಸಣೆ ನಡೆಸಿದರು. ಅನುಮಾನ ಬಂದ ಕೈದಿಗಳನ್ನು ವಿಚಾರಣೆ ನಡೆಸಿ, ಮಾಹಿತಿ ಪಡೆದುಕೊಂಡರು.

'ಶಿಕ್ಷೆಗೆ ಗುರಿಯಾಗಿರುವ ಕೈದಿಗಳು ಹಾಗೂ ವಿಚಾರಣಾಧೀನ ಕೈದಿಗಳು ಜೈಲಿನಲ್ಲೇ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗುತ್ತಿದ್ದ ಮಾಹಿತಿ ಇತ್ತು. ಮೊಬೈಲ್ ಬಳಕೆ ಹಾಗೂ ಡ್ರಗ್ಸ್ ಸೇವಿಸುತ್ತಿರುವ ಶಂಕೆಯೂ ಇತ್ತು. ಜೈಲು ಸಿಬ್ಬಂದಿಗೂ ಕೆಲ ಕೈದಿಗಳು ಬೆದರಿಕೆಯೊಡ್ಡುತ್ತಿದ್ದರು. ಕಾರಾಗೃಹ ಅಧಿಕಾರಿಗಳ ನೆರವು ಪಡೆದು ಜೈಲಿನ ಮೇಲೆ ದಾಳಿ ಮಾಡಲಾಯಿತು' ಎಂದು ಸಿಸಿಬಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಗಾಂಜಾ ಪೊಟ್ಟಣ ಹಾಗೂ ಗಾಂಜಾ ಸೇದಲು ಬಳಸುವ ಚಿಲುಮೆ ಬ್ಯಾರಕ್‌ನಲ್ಲಿ ಪತ್ತೆಯಾಗಿವೆ. ಒಂದು ಬ್ಯಾರಕ್‌ನಲ್ಲಿ 30ಕ್ಕೂ ಹೆಚ್ಚು ಜನರಿದ್ದಾರೆ. ಅದರಲ್ಲಿ ಯಾರು ಗಾಂಜಾ ಸೇದುತ್ತಿದ್ದರೆಂಬುದು ಗೊತ್ತಾಗಿಲ್ಲ. ಈ ಬಗ್ಗೆ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ' ಎಂದೂ ತಿಳಿಸಿದರು.

'ಕಾರಾಗೃಹದಲ್ಲಿ ನಡೆಯುತ್ತಿದ್ದ ಅಕ್ರಮದ ಬಗ್ಗೆ ಹಲವರು ಮಾಹಿತಿ ನೀಡಿದ್ದರು. ಹೀಗಾಗಿ, ದಾಳಿಯ ದೃಶ್ಯಗಳನ್ನು ಚಿತ್ರೀಕರಿಸಿಕೊಳ್ಳಲಾಗಿದೆ. ದಾಳಿ ಬಗ್ಗೆ ವರದಿ ಸಿದ್ಧಪಡಿಸಿ ಕ್ರಮ ಜರುಗಿಸಲಾಗುವುದು. ಮುಂದಿನ ದಿನಗಳಲ್ಲೂ ಅನಿರೀಕ್ಷಿತ ದಾಳಿಗಳನ್ನು ನಡೆಸಲಾಗುವುದು' ಎಂದೂ ಹೇಳಿದರು.

ವರ್ತೂರು ಪೊಲೀಸರಿಂದ ದೌರ್ಜನ್ಯ ಆರೋಪ • ಕಮಿಷನರ್‌ಗೆ ದೂರು

'ಆರೋಪ ಹೊರಿಸಿ ಥಳಿತ: ಕೈ ಕಳೆದುಕೊಂಡ ಯುವಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳ್ಳತನ ಆರೋಪ ಹೊರಿಸಿ ಮಗನನ್ನು ಠಾಣೆಗೆ ಎಳೆದೊಯ್ದಿದ್ದ ವರ್ತೂರು ಪೊಲೀಸರು ಮನಬಂದಂತೆ ಥಳಿಸಿದ್ದು, ಇದರಿಂದ ಆತ ಬಲಗೈಯನ್ನೇ ಕಳೆದುಕೊಂಡಿದ್ದಾನೆ' ಎಂದು ಅಮ್ಜದ್ ಖಾನ್ ಎಂಬುವರು ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ದೂರು ನೀಡಿದ್ದು, ಈ ಆರೋಪದ ಬಗ್ಗೆ ವೈಟ್‌ಫೀಲ್ಡ್ ಉಪವಿಭಾಗದ ಎಸಿಪಿ ನೇತೃತ್ವದಲ್ಲಿ ತನಿಖೆ ಆರಂಭವಾಗಿದೆ.

'ರಾಜರೆಡ್ಡಿ ಬಡಾವಣೆಯ ಈದ್ಗಾ ರಸ್ತೆಯ ನಿವಾಸಿ ಅಮ್ಜದ್ ಖಾನ್, ತಮ್ಮ ಮಗ ಸಲ್ಮಾನ್ ಖಾನ್ ಮೇಲೆ ಪೊಲೀಸರು ದೌರ್ಜನ್ಯ ಎಸಗಿರುವುದಾಗಿ ಮೂರು ಪುಟಗಳ ದೂರು ನೀಡಿದ್ದಾರೆ. ಕೆಲ ವೈದ್ಯಕೀಯ ಪ್ರಮಾಣ ಪತ್ರಗಳನ್ನೂ ಲಗತ್ತಿಸಿದ್ದಾರೆ. ಎಲ್ಲವನ್ನೂ ಪರಿಶೀಲಿಸಿರುವ ಕಮಿಷನರ್, ಎಸಿಪಿ ತನಿಖೆಗೆ ಸೂಚನೆ ನೀಡಿದ್ದಾರೆ' ಎಂದು ಪೊಲೀಸ್ ಹಿರಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಹೇಳಿದರು.

ದೂರಿನ ವಿವರ: 'ಮಗ ಸಲ್ಮಾನ್ ಖಾನ್ (22) ಕೋಳಿ ವ್ಯಾಪಾರ ಮಾಡುತ್ತಾನೆ.

ಆಸ್ಪತ್ರೆಯಲ್ಲಿ ಸಲ್ಮಾನ್ ಖಾನ್

ಅ. 27ರಂದು ರಾತ್ರಿ 11.30 ಗಂಟೆಗೆ ಮನೆಗೆ ಅಕ್ರಮವಾಗಿ ಪ್ರವೇಶಿಸಿದ್ದ ವರ್ತೂರು ಠಾಣೆಯ ಅಪರಾಧ ವಿಭಾಗದ ಪೊಲೀಸರು, ಕಳ್ಳತನ ಆರೋಪ ಹೊರಿಸಿ ಮಗನನ್ನು ಠಾಣೆಗೆ ಎಳೆದೊಯ್ದಿದ್ದರು' ಎಂದು ಅಮ್ಜದ್ ಖಾನ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಯಾವುದೇ ಎಫ್‌ಐಆರ್ ಇಲ್ಲದಿದ್ದರೂ ವಿಚಾರಣೆ ನೆಪದಲ್ಲಿ ಮಗನನ್ನು ಸೆಲ್‌ನಲ್ಲಿಟ್ಟು ಹಲ್ಲೆ ಮಾಡಿದ್ದರು. ನಾನು, ಪತ್ನಿ, ಠಾಣೆಗೆ ಹೋಗಿ ವಿಚಾರಿಸಿದರೂ ಮಾಹಿತಿ ನೀಡಿರಲಿಲ್ಲ. ಸೆಲ್‌ನಲ್ಲಿದ್ದ ಮಗನನ್ನು ಮಾತನಾಡಿಸಿದಾಗ, ಕಳ್ಳತನ ಆರೋಪ ಹೊರಿಸಿ ಪೊಲೀಸರ ಥಳಿಸುತ್ತಿದ್ದಾರೆಂದು ಹೇಳಿದ್ದ.'

'ಪೊಲೀಸರ ಹಲ್ಲೆಯಿಂದಾಗಿ ಬಲಗೈಗೆ ತೀವ್ರ ಪೆಟ್ಟು ಬಿದ್ದು, ರಕ್ತ ಹೆಪ್ಪುಗಟ್ಟಿತ್ತು. ವಿಪರೀತ ಜ್ವರ ಕಾಣಿಸಿಕೊಂಡಿತ್ತು. ಆತನನ್ನು ಬಿಡುವಂತೆ ಕೋರಿದಾಗ, ಪೊಲೀಸರು ಹಣ ಕೇಳಿದರು. ಹಣವಿಲ್ಲವೆಂದು ಹೇಳಿದ್ದೆ. ಜ್ವರ ಹೆಚ್ಚಾಗುತ್ತಿದ್ದಂತೆ ಮಗನನ್ನು ಬಿಟ್ಟು ಕಳುಹಿಸಿದರು' ಎಂದೂ ದೂರಿನಲ್ಲಿ ತಿಳಿಸಲಾಗಿದೆ.

'ಎಸ್‌ಡಿಪಿಐ ಒತ್ತಾಯ': 'ಟ್ವೀಟ್ ಮಾಡಿರುವ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಅಪ್ಸರ್ ಕೊಡ್ಲಿಪೇಟೆ, 'ಕಳ್ಳತನ ಆರೋಪ ಹೊರಿಸಿ ಅಮಾಯಕನನ್ನು ಥಳಿಸಿರುವ ಪೊಲೀಸರು, ಕೈಯನ್ನೇ ಕಳೆದುಕೊಳ್ಳುವಂತೆ ಮಾಡಿದ್ದಾರೆ. ಇದು ಪೊಲೀಸ್ ಕಾರ್ಯನಿರ್ವಹಣೆ ಮಾರ್ಗಸೂಚಿಯ ಸ್ಪಷ್ಟ ಉಲ್ಲಂಘನೆ. ತಪ್ಪಿತಸ್ಥ ಪೊಲೀಸರನ್ನು ಅಮಾನತುಗೊಳಿಸಿ, ಅವರ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಕೆಲಸದ ಸ್ಥಳದಲ್ಲಿ ಬಲಗೈಗೆ ಗಾಯ'

'ಕಳ್ಳತನ ಪ್ರಕರಣದಲ್ಲಿ ವಿಚಾರಣೆಗೆಂದು ಸಲ್ಮಾನ್ ಖಾನ್ ಅವರನ್ನು ಠಾಣೆಗೆ ಕರೆಸಲಾಗಿತ್ತು. ಅವರ ಮೇಲೆ ಯಾವುದೇ ಹಲ್ಲೆ ಮಾಡಿಲ್ಲ. ಸುರಕ್ಷಿತವಾಗಿ ಅವರನ್ನು ಮನೆಗೆ ವಾಪಸು ಕಳುಹಿಸಲಾಗಿತ್ತು. ಅದರ ಫೋಟೊಗಳು ನಮ್ಮ ಬಳಿ ಇವೆ' ಎಂಬುದಾಗಿ ವರ್ತೂರು ಠಾಣೆ ಪೊಲೀಸರು, ಎಸಿಪಿ ನೇತೃತ್ವದ ತಂಡಕ್ಕೆ ಹೇಳಿದ್ದಾರೆ' ಎಂದು ಮೂಲಗಳು ಹೇಳಿವೆ.

'ಕೋಳಿ ಮಾರಾಟ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ಸಲ್ಮಾನ್ ಖಾನ್ ಅವರ ಬಲಗೈಗೆ ಗಾಯವಾಗಿದೆ. ನ. 4ರಂದು ಸುರಕ್ಷಾ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ. ಮರುದಿನ, ವೈದೇಹಿ ಆಸ್ಪತ್ರೆಗೂ ಹೋಗಿ ತೋರಿಸಿದ್ದಾರೆ. ಕೈಗೆ ಬಲವಾದ ಗಾಯವಾಗಿರುವುದಾಗಿ ವೈದ್ಯರು ಹೇಳಿದ್ದರಿಂದ, ಹೆಚ್ಚಿನ ಚಿಕಿತ್ಸೆಗಾಗಿ ಹಾಸ್‌ಮ್ಯಾಟ್ ಆಸ್ಪತ್ರೆಗೆ ಹೋಗಿದ್ದರು. ಅಲ್ಲಿಯೇ ಶಸ್ತ್ರಚಿಕಿತ್ಸೆ ನೀಡಿ, ಬಲಗೈ ಕತ್ತರಿಸಲಾಗಿದೆ. ಸ್ವಯಂ ಅವಘಡದಿಂದ ಕೈಗೆ ಗಾಯವಾಗಿರುವ ಬಗ್ಗೆ ವೈದ್ಯರು ನೀಡಿರುವ ದಾಖಲೆಗಳೂ ಇವೆ' ಎಂಬುದಾಗಿಯೂ ಪೊಲೀಸರು ತಿಳಿಸಿದ್ದಾರೆ' ಎಂದೂ ಮೂಲಗಳು ವಿವರಿಸಿವೆ.

ಕೋವಿಡ್: ಮೃತದೇಹಗಳ ಪತ್ತೆ– ವಿಚಾರಣೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಮೃತಪಟ್ಟಿದ್ದ ದುರ್ಗಾ ಸುಮಿತ್ರಾ ಹಾಗೂ ಮುನಿರಾಜು ಅವರ ಮೃತದೇಹಗಳು ಶವಾಗಾರ ಸ್ವಚ್ಛಗೊಳಿಸುವ ವೇಳೆ ಶೈತ್ಯಾಗಾರದಲ್ಲಿ ಪತ್ತೆಯಾಗಿದ್ದು, ಈ ಸಂಬಂಧ ವಿಚಾರಣೆ ನಡೆಸಲು ಅನುಭವಿ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಲಾಗಿದೆ' ಎಂದು ರಾಜಾಜಿನಗರದ ಇಎಸ್‌ಐ ಆಸ್ಪತ್ರೆ ಪ್ರಕಟಣೆ ತಿಳಿಸಿದೆ.

'ಸಮಿತಿಯು ಪ್ರಕರಣದ ಸಮಗ್ರ ತನಿಖೆ ನಡೆಸಿ ಇನ್ನೊಂದು ವಾರದಲ್ಲಿ ವರದಿ ಸಲ್ಲಿಸಲಿದೆ. ವರದಿ ಲಭಿಸಿದ ಬಳಿಕ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದೆ.

'ಇದೇ 27ರ ಬೆಳಿಗ್ಗೆ 10.30ಕ್ಕೆ ಹಳೆಯ ಶವಾಗಾರದಲ್ಲಿ ಮೃತದೇಹಗಳು ಪತ್ತೆಯಾಗಿದ್ದವು. ಕೂಡಲೇ ರಾಜಾಜಿನಗರ ಠಾಣೆಗೆ ಮಾಹಿತಿ ರವಾನಿಸಲಾಗಿತ್ತು. 11 ಗಂಟೆ ಸುಮಾರಿಗೆ ಸ್ಥಳಕ್ಕೆ ಬಂದಿದ್ದ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿದ್ದರು.

ಮೃತದೇಹಗಳನ್ನು ಪ್ಲಾಸ್ಟಿಕ್‌ನಿಂದ ಸಂಪೂರ್ಣವಾಗಿ ಮುಚ್ಚಲಾಗಿತ್ತು. ಅವುಗಳ ಮೇಲೆ ಹೆಸರಿರುವ ಟ್ಯಾಗ್‌ಗಳನ್ನೂ ಹಾಕಲಾಗಿತ್ತು. ಅವುಗಳನ್ನು ಪೊಲೀಸರ ನೇತೃತ್ವದಲ್ಲೇ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ರವಾನಿಸಲಾಗಿತ್ತು. ಇದೇ 29ರಂದು ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರ ಸಮ್ಮುಖದಲ್ಲಿ ಮೃತದೇಹಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲಾಯಿತು. ರಾತ್ರಿ 7 ಗಂಟೆ ಸುಮಾರಿಗೆ ಶವ ಸಂಸ್ಕಾರ ನೆರವೇರಿಸಲಾಗಿದೆ' ಎಂದೂ ವಿವರಿಸಿದೆ.

ನಿಧನ ವಾರ್ತೆ

ಬಿ.ಎಲ್‌. ಲಕ್ಕೇಗೌಡ

ಮಾಗಡಿ (ರಾಮನಗರ): ಭಾರತ್ ಎಜ್ಯುಕೇಶನ್ ಸೊಸೈಟಿ ಸಂಸ್ಥಾಪಕ, ನಿವೃತ್ತ ಜಿಲ್ಲಾಧಿಕಾರಿ ಬಿ.ಎಲ್‌. ಲಕ್ಕೇಗೌಡ (88) ಮಂಗಳವಾರ ಅನಾರೋಗ್ಯದಿಂದ ನಿಧನರಾದರು.

1962ರಲ್ಲಿ ತಹಶೀಲ್ದಾರ್ ಆಗಿ ಸರ್ಕಾರಿ ಸೇವೆ ಆರಂಭಿಸಿದ ಅವರು ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿದ್ದರು. ಕೆಲ ಕಾಲ ಮಂಡ್ಯ ವಿಶೇಷ ಜಿಲ್ಲಾಧಿಕಾರಿ ಆಗಿ ಕಾರ್ಯನಿರ್ವಹಿಸಿದ್ದರು. ನಂತರದಲ್ಲಿ ಭಾರತ್ ವಿದ್ಯಾಸಂಸ್ಥೆ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. ಅವರಿಗೆ ಪುತ್ರಿ ಇದ್ದಾರೆ. ಹುಟ್ಟೂರಾದ ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಬೆಳಗವಾಡಿಯಲ್ಲಿ ಮಂಗಳವಾರ ಸಂಜೆ ಅಂತ್ಯಕ್ರಿಯೆ ನಡೆಯಿತು.



ಚಿತ್ರಾವಳಿ

ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ್ ಜೋಶಿ ಭೇಟಿ ಮಾಡಿ ಕನ್ನಡ ಪುಸ್ತಕ ಕೊಟ್ಟು ಗೌರವಿಸಿದರು. ಹಾವೇರಿಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಬಗ್ಗೆಯೂ ಚರ್ಚಿಸಿದರು

ಎಫ್‌ಕೆಸಿಸಿಐ ವತಿಯಿಂದ ಹಮ್ಮಿಕೊಂಡಿದ್ದ 66 ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಆರೋಗ್ಯ ಅಧಿಕಾರಿ ಡಾ.ಸತ್ಯವತಿ ಅವರನ್ನು ಎಫ್‌ಕೆಸಿಸಿಐ ಅಧ್ಯಕ್ಷ ಡಾ.ಐ.ಎಸ್ ಪ್ರಸಾದ್ ಸನ್ಮಾನಿಸಿದರು. ಗಡಿನಾಡು ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಕಂದಾಯ ಸಚಿವ ಆರ್‌.ಅಶೋಕ, ಎಫ್‌ಕೆಸಿಸಿಐಯ ಕೆ.ವಿ. ರಾಜೇಂದ್ರ ಕುಮಾರ್ ಇದ್ದಾರೆ ಪ್ರಜಾವಾಣಿ ಚಿತ್ರ

ಬಹು ಮಾಧ್ಯಮ ಪ್ರಜಾವಾಣಿ LIVE
ಪ್ರಜಾವಾಣಿ ಕನ್ನಡ ಧ್ವನಿ
Prajavani.net/podcast
ದಿನದ ವಿಶೇಷ: ಸಂಜೆ 4 : ಝಣ ಝಣ ಕಾಂಚಾಣ
ಬೆಳಿಗ್ಗೆ 7 : ವಚನವಾಣಿ,
ಬೆಳಿಗ್ಗೆ 7.30: ದಿನದ ಸೂಕ್ತಿ,
ಬೆಳಿಗ್ಗೆ 8: ಮಧ್ಯಾಹ್ನ 2: ರಾತ್ರಿ 8: ಪ್ರಜಾವಾಣಿ ವಾರ್ತೆ, ಬುಲೆಟಿನ್,
ಬೆಳಿಗ್ಗೆ 9: ಪ್ರಚಲಿತ,
ಬೆಳಿಗ್ಗೆ 9.30: ಸಂಪಾದಕೀಯ
Prajavani.net
Prajavani Prajavani

ಆಯುಷ್ಮಾನ್ ಭಾರತ್ 8.3 ಲಕ್ಷ ಜನರಿಗೆ ಕೋವಿಡ್ ಚಿಕಿತ್ಸೆ

ನವದೆಹಲಿ (ಪಿಟಿಐ): ಎರಡು ವರ್ಷಗಳಲ್ಲಿ 8.3 ಲಕ್ಷ ಜನರು ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯಡಿ (ಎಬಿ-ಪಿಎಂಜೆಎವೈ) ಕೋವಿಡ್‌ಗೆ ಚಿಕಿತ್ಸೆ ಪಡೆದಿದ್ದಾರೆ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ಮಾಹಿತಿ ನೀಡಿದೆ.

ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ (ಎನ್‌ಎಚ್‌ಎ) ಮತ್ತು ರಾಜ್ಯಗಳು ಒದಗಿಸಿರುವ ಅಂಕಿ ಅಂಶಗಳನ್ನು ಆಧರಿಸಿ ಈ ಮಾಹಿತಿ ನೀಡಿರುವುದಾಗಿ ಆರೋಗ್ಯ ಖಾತೆಯ ರಾಜ್ಯ ಸಚಿವೆ ಭಾರತಿ ಪ್ರವೀಣ್ ಪವಾರ್ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಒಟ್ಟಾರೆ 8.3 ಲಕ್ಷ ಜನರ ಪೈಕಿ 4.7 ಲಕ್ಷ ಜನರು ಆಯುಷ್ಮಾನ್ ಯೋಜನೆಯಡಿ ಗುರುತಿಸಲಾಗಿರುವ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದಾರೆ ಎಂದು ಅವರುತಿಳಿಸಿದ್ದಾರೆ.

ಕೋವಿಡ್: ಆರೋಗ್ಯ ಸಚಿವ ಸುಧಾಕರ್ ನೇತೃತ್ವದಲ್ಲಿ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸಭೆ

2 ಡೋಸ್ ಲಸಿಕೆ ಕಡ್ಡಾಯಕ್ಕೆ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲರೂ ಎರಡು ಡೋಸ್ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಬೇಕು. ಎರಡು ಡೋಸ್ ಪಡೆಯದವರಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಸರ್ಕಾರ ಉಚಿತ ಚಿಕಿತ್ಸೆ ನೀಡಬಾರದು ಎಂಬ ಸಲಹೆಯನ್ನು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ನೀಡಿದೆ.

ಡಾ.ಕೆ. ಸುಧಾಕರ್

ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ನೇತೃತ್ವದಲ್ಲಿ ಮಂಗಳವಾರ ನಡೆದ ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಮತ್ತು ತಜ್ಞರ ಸಮಿತಿ ಸಭೆಯಲ್ಲಿ ಈ ಸಲಹೆ ನೀಡಲಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಚಿವರು, 'ಎರಡು ಡೋಸ್ ಲಸಿಕೆ ಪಡೆದವರಿಗಷ್ಟೇ ಉಚಿತ ಚಿಕಿತ್ಸೆ ನೀಡಬೇಕು ಎಂಬ ಸಲಹೆಯನ್ನು ತಾಂತ್ರಿಕ ಸಲಹಾ ಸಮಿತಿಯ ಸದಸ್ಯರು ನೀಡಿದ್ದಾರೆ. ಎರಡು ಡೋಸ್ ಲಸಿಕೆ ಪಡೆಯದವರಿಗೆ ಮಾಲ್, ಚಿತ್ರಮಂದಿರಗಳಿಗೂ ಪ್ರವೇಶ ನೀಡಬಾರದು ಎಂಬ ಸಲಹೆಗಳೂ ಬಂದಿವೆ. ಆದರೆ, ಈ ಕುರಿತು ಚರ್ಚೆಯ ಅಗತ್ಯವಿದೆ' ಎಂದರು.

ಮಾರ್ಗಸೂಚಿಗೆ ಸಮಿತಿ: ಕೋವಿಡ್ ರೋಗಿಗಳಿಗೆ ಏಕರೂಪದ ಚಿಕಿತ್ಸೆ ನೀಡುವ ಮಾರ್ಗಸೂಚಿ ರೂಪಿಸುವುದಕ್ಕಾಗಿ ಬೆಂಗಳೂರು ವೈದ್ಯಕೀಯ ಕಾಲೇಜಿನ ಪ್ರಾಧ್ಯಾಪಕ ಡಾ.ರವಿ ನೇತೃತ್ವದಲ್ಲಿ ಹತ್ತು ಸದಸ್ಯರ ಸಮಿತಿ ರಚಿಸಲಾಗುವುದು. ಸಮಿತಿಯು ಅಧ್ಯಯನ ನಡೆಸಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಲಿದೆ. ಆ ಪ್ರಕಾರವೇ ಏಕರೂಪದಲ್ಲಿ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ವರದಿ ಆಧರಿಸಿ ನಿರ್ಧಾರ: ಸಭೆಗೂ ಮುನ್ನ ಸುದ್ದಿಗಾರರ ಜತೆ ಮಾತನಾಡಿದ ಸಚಿವರು, 'ಓಮೈಕ್ರಾನ್ ತಳಿಯ ವೈರಾಣುವಿನ ಹರಡುವಿಕೆ ಮತ್ತು ಅದರಿಂದ ಆರೋಗ್ಯದ ಮೇಲೆ ಆಗುವ ಹಾನಿ ಕುರಿತು ಈವರೆಗೂ ಅಧ್ಯಯನ ವರದಿ ಪ್ರಕಟವಾಗಿಲ್ಲ. ಡಿಸೆಂಬರ್ 1ರ ವೇಳೆಗೆ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯೂಎಚ್‌ಒ) ಅಧ್ಯಯನ ವರದಿ ಪ್ರಕಟವಾಗುವ ನಿರೀಕ್ಷೆ ಇದೆ. ಆ ಬಳಿಕವೇ ಹೊಸ ಕ್ರಮಗಳ ಕುರಿತು ಯೋಚಿಸಲಾಗುವುದು' ಎಂದರು.

ಶಾಲಾ, ಕಾಲೇಜುಗಳು, ಸಾರ್ವಜನಿಕ ಕಾರ್ಯಕ್ರಮಗಳು ಸೇರಿದಂತೆ ಯಾವುದೇ ಚಟುವಟಿಕೆಯನ್ನು ನಿರ್ಬಂಧಿಸುವ ಪ್ರಸ್ತಾವ ಸದ್ಯಕ್ಕೆ ಇಲ್ಲ. ಕ್ರಿಸ್‌ಮಸ್, ಹೊಸ ವರ್ಷಾಚರಣೆ, ವಿಧಾನಮಂಡಲದ ಬೆಳಗಾವಿ ಅಧಿವೇಶನ ನಡೆಸುವ ವಿಷಯದಲ್ಲಿ ಬದಲಾವಣೆ ಕುರಿತಂತೆ ಡಬ್ಲ್ಯುಎಚ್‌ಒ ವರದಿ ಆಧಾರದಲ್ಲೇ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

15 ನರ್ಸಿಂಗ್ ವಿದ್ಯಾರ್ಥಿಗಳಿಗೆ ಸೋಂಕು

ತುಮಕೂರು: ಕೇರಳದಿಂದ ಬಂದಿರುವ 15 ನರ್ಸಿಂಗ್ ವಿದ್ಯಾರ್ಥಿಗಳಲ್ಲಿ ಮಂಗಳವಾರ ಕೊರೊನಾ ಸೋಂಕು ಪತ್ತೆಯಾಗಿದ್ದು ಎಲ್ಲರನ್ನೂ ಐಸೋಲೇಟ್ ಮಾಡಲಾಗಿದೆ.

ಸಿದ್ಧಗಂಗಾ ನರ್ಸಿಂಗ್ ಕಾಲೇಜಿನಲ್ಲಿ ಎಂಟು ಹಾಗೂ ವರದರಾಜು ಕಾಲೇಜಿನಲ್ಲಿ ಏಳು ವಿದ್ಯಾರ್ಥಿಗಳಿಗೆ ಸೊಂಕು ತಗುಲಿರುವುದು ದೃಢಪಟ್ಟಿದ್ದು, ಎಲ್ಲರೂ ಕೇರಳದಿಂದ ಬಂದವರು.

ಸೋಂಕು ದೃಢಪಟ್ಟ ವಿದ್ಯಾರ್ಥಿಗಳಿದ್ದ ಸಿದ್ಧಗಂಗಾ ನರ್ಸಿಂಗ್ ಕಾಲೇಜು ವಸತಿ ನಿಲಯಕ್ಕೆ ಜಿಲ್ಲಾಧಿಕಾರಿ ವೈ.ಎಸ್.ಪಾಟೀಲ ಭೇಟಿ ನೀಡಿ ಪರಿಶೀಲಿಸಿದರು. 'ಸೋಂಕು ದೃಢಪಟ್ಟ ಕಾಲೇಜನ್ನು ಕಂಟೇನ್ಮೆಂಟ್ ವಲಯವನ್ನಾಗಿ ಮಾಡಬೇಕು.

ನರ್ಸಿಂಗ್ ಪರೀಕ್ಷೆ ನಡೆಯುತ್ತಿರುವುದರಿಂದ ಸೋಂಕು ದೃಢಪಟ್ಟ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕು' ಎಂದು ಸೂಚಿಸಿದರು.

'ವಿವಿಧ ಕಾಲೇಜುಗಳಲ್ಲಿ ಕೇರಳದಿಂದ ಬಂದ ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿದ್ದು, 15 ಮಂದಿಗೆ ದೃಢಪಟ್ಟಿದೆ.

ಈ ವಿದ್ಯಾರ್ಥಿಗಳಿದ್ದ ತರಗತಿಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡಿಸಲಾಗಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗೇಂದ್ರಪ್ಪ ತಿಳಿಸಿದ್ದಾರೆ.

ದಂತ ವಿದ್ಯಾರ್ಥಿಗಳಿಬ್ಬರಿಗೆ ಕೋವಿಡ್ ದೃಢ

ಬೆಳಗಾವಿ: ಓಮೈಕ್ರಾನ್ ಭೀತಿ ನಡುವೆ, ನಗರದ ದಂತ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಗೆ ಮಂಗಳವಾರ ಕೋವಿಡ್ ದೃಢಪಟ್ಟಿದೆ. ಇದು, ಆತಂಕಕ್ಕೆ ಕಾರಣವಾಗಿದೆ. 'ಬಿಹಾರ ಮೂಲದ ಅವರು ಸ್ವಯಂಪ್ರೇರಿತವಾಗಿ ಪರೀಕ್ಷೆಗೆ ಒಳಗಾಗಿದ್ದರು. ಇಬ್ಬರನ್ನೂ ಕ್ವಾರಂಟೈನ್ ಮಾಡಿದ್ದು, ಅವರ ಸಂಪರ್ಕಕ್ಕೆ ಬಂದಿದ್ದವರನ್ನು ತಪಾಸಣೆಗೆ ಒಳಪಡಿಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ರಾಜ್ಯ ಕೋವಿಡ್ ಅಂಕಿ–ಅಂಶ

29,96,148 ▲ ಒಟ್ಟು ಸೋಂಕಿತರು (29,95,857 ನಿನ್ನೆಯ ವಿವರ)

6,416 ▼ ಸಕ್ರಿಯ ಪ್ರಕರಣಗಳು

29,51,492 ▲ ಗುಣಮುಖರಾದವರು

38,211 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	291	▲
ಗುಣಮುಖ	745	▲
ಸಾವು	8	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

'ಎನ್‌ಸಿಬಿಎಸ್‌ಗೆ ಮಾದರಿ ರವಾನೆ'

'ರಾಜ್ಯದಲ್ಲಿ ಕೆಲವೆಡೆ ಗುಂಪು ಗುಂಪಾಗಿ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಅಲ್ಲಿನ ಸೋಂಕಿತರ ಗಂಟಲು ಮತ್ತು ಮೂಗಿನ ದ್ರವದ ಮಾದರಿಗಳನ್ನು ಹೆಚ್ಚಿನ ಅಧ್ಯಯನಕ್ಕಾಗಿ ರಾಷ್ಟ್ರೀಯ ಜೀವವಿಜ್ಞಾನಗಳ ಸಂಸ್ಥೆಗೆ (ಎನ್‌ಸಿಬಿಎಸ್) ರವಾನಿಸಲಾಗಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, 'ಓಮೈಕ್ರಾನ್ ತಳಿಯ ವೈರಾಣು ಕುರಿತು ನಿಗಾ ವಹಿಸಲಾಗಿದೆ. ಡೆಲ್ಟಾ ತಳಿಯ ವೈರಾಣುವಿನಿಂದ ಕೋವಿಡ್ ಕ್ಲಸ್ಟರ್‌ಗಳು ಉಂಟಾಗಿವೆ. ಈ ಬೆಳವಣಿಗೆಯನ್ನು ನಿಯಂತ್ರಿಸಲು ಹೆಚ್ಚಿನ ಅಧ್ಯಯನಕ್ಕಾಗಿ ಮಾದರಿಗಳನ್ನು ಕಳುಹಿಸಲಾಗಿದೆ' ಎಂದರು.


ಜಪಾನ್‌ನ ಟೋಕಿಯೊದಲ್ಲಿರುವ ನರಿಟಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಪ್ರಯಾಣಿಕರು ವಿಮಾನ ನಿಲ್ದಾಣದಲ್ಲಿ ಸ್ಥಾಪಿಸಲಾಗಿರುವ ಕ್ವಾರಂಟೈನ್ ಕೇಂದ್ರದ ಮುಂದೆ ತಮ್ಮ ಸರದಿಗಾಗಿ ಕಾಯುತ್ತಿದ್ದ ದೃಶ್ಯ ಮಂಗಳವಾರ ಕಂಡು ಬಂತು –ಎಎಫ್‌ಪಿ ಚಿತ್ರ

ಓಮೈಕ್ರಾನ್: ಜಪಾನ್, ಫ್ರಾನ್ಸ್‌ನಲ್ಲೂ ಪ್ರಕರಣಗಳು ಪತ್ತೆ

ಲಂಡನ್/ಸಿಂಗಪುರ/ಟೋಕಿಯೊ: ಕೊರೊನಾ ವೈರಸ್‌ನ ಹೊಸ ರೂಪಾಂತರಿ ಓಮೈಕ್ರಾನ್ ಆತಂಕ ಸೃಷ್ಟಿಸಿದ ನಡುವೆಯೇ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಈ ತಳಿಯ ಸೋಂಕಿನ ಪ್ರಕರಣಗಳು ಮಂಗಳವಾರ ವರದಿಯಾಗಿವೆ.

ಕೆಲವು ದೇಶಗಳಲ್ಲಿ ಈ ತಳಿ ಸೋಂಕಿನ ಪ್ರಕರಣಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದ್ದು, ಪ್ರಸರಣ ತಡೆಯಲು ಕೆಲ ದೇಶಗಳು ಮತ್ತಷ್ಟೂ ಕಠಿಣ ನಿರ್ಬಂಧಗಳ ಮೊರೆ ಹೋಗಿವೆ.

ಜಪಾನ್ ಹಾಗೂ ಫ್ರಾನ್ಸ್‌ನಲ್ಲಿ ಓಮಿಕ್ರಾನ್ ತಳಿ ಸೋಂಕಿನ ಮೊದಲ ಪ್ರಕರಣಗಳು ಮಂಗಳವಾರ ವರದಿಯಾಗಿವೆ. ಹಿಂದೂಮಹಾಸಾಗರದಲ್ಲಿರುವ, ಫ್ರಾನ್ಸ್ ಆಡಳಿತಕ್ಕೆ ಒಳಪಟ್ಟಿರುವ ಫ್ರೆಂಚ್ ರಿಯೂನಿಯನ್ ದ್ವೀಪದಲ್ಲಿ ಓಮೈಕ್ರಾನ್ ತಳಿ ಸೋಂಕಿನ ಮೊದಲ ಪ್ರಕರಣ ಪತ್ತೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. 'ಮೊಜಾಂಬಿಕ್ ಹಾಗೂ ದಕ್ಷಿಣ ಆಫ್ರಿಕಾ ಪ್ರವಾಸದ ಬಳಿಕ ದ್ವೀಪಕ್ಕೆ ಹಿಂದಿರುಗಿರುವ 53 ವರ್ಷದ ವ್ಯಕ್ತಿಯಲ್ಲಿ ಸೋಂಕು ದೃಢಪಟ್ಟಿದೆ. ಸೋಂಕಿತನನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ' ಎಂದು ದ್ವೀಪದಲ್ಲಿರುವ ಸಾಂಕ್ರಾಮಿಕ ರೋಗಗಳ ಸಂಶೋಧನಾ ಕೇಂದ್ರದ ಮೈಕ್ರೊಬಯೋಲಾಜಿಸ್ಟ್ ಪ್ಯಾಟ್ರಿಕ್ ಮ್ಯಾವಿನ್‌ಗುಯಿ ಹೇಳಿದ್ದಾರೆ.

'ನಮೀಬಿಯಾಕ್ಕೆ ಭೇಟಿ ನೀಡಿದ್ದ 30 ವರ್ಷದ ವ್ಯಕ್ತಿಯಲ್ಲಿ ಸೋಂಕು ದೃಢಪಟ್ಟಿದೆ. ಸೋಂಕಿತನಿಗೆ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಜಪಾನ್ ಸರ್ಕಾರದ ವಕ್ತಾರ ತಿಳಿಸಿದ್ದಾರೆ.

ನೆದರ್ಲೆಂಡ್ಸ್‌ನಲ್ಲಿಯೂ ಎರಡು ಪ್ರಕರಣಗಳು ಪತ್ತೆಯಾಗಿವೆ. ಬ್ರಿಟನ್‌ನಲ್ಲಿ ಓಮೈಕ್ರಾನ್ ಸೋಂಕಿನ ಪ್ರಕರಣಗಳ ಸಂಖ್ಯೆ 14ಕ್ಕೇರಿದೆ. ಸೋಂಕು ಪ್ರಸರಣ ತಡೆಯುವ ಸಲುವಾಗಿ ಬ್ರಿಟನ್ ಸರ್ಕಾರ ಮಾರುಕಟ್ಟೆಗಳು ಹಾಗೂ ಸಾರ್ವಜನಿಕ ಸಾರಿಗೆಗಳಲ್ಲಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿದೆ.

ಓಮೈಕ್ರಾನ್: ದೆಹಲಿಯಲ್ಲಿ 30,000 ಹಾಸಿಗೆ ಸಜ್ಜು

ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನ ಓಮೈಕ್ರಾನ್ ತಳಿ ಹರಡುವ ಭೀತಿಯಿದ್ದು, ಅದನ್ನು ಎದುರಿಸಲು ಸರ್ಕಾರ ಸಜ್ಜಾಗಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಮಂಗಳವಾರ ಹೇಳಿದ್ದಾರೆ.

ಆಮ್ಲಜನಕ ಸೌಲಭ್ಯವಿರುವ 30,000 ಹಾಸಿಗೆಗಳು ಹಾಗೂ ಆಮ್ಲಜನಕ ಪೂರೈಕೆ ಹಾಗೂ ಸಂಗ್ರಹ ವ್ಯವಸ್ಥೆಯನ್ನು ಒಂದೆರಡು ವಾರಗಳಲ್ಲಿ ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗುವುದು ಎಂದು ಹೇಳಿದ್ದಾರೆ.

ಕೇಜ್ರಿವಾಲ್ ಅವರು ಸರ್ಕಾರದ ವಿವಿಧ ಇಲಾಖೆಗಳ ಜೊತೆ ಸಿದ್ಧತೆ ಪರಿಶೀಲನಾ ಸಭೆ ನಡೆಸಿದರು. 30 ಸಾವಿರ ಹಾಸಿಗೆಗಳಲ್ಲಿ 10,000 ಐಸಿಯು ಹಾಸಿಗೆಗಳು ಸೇರಿವೆ. ಇನ್ನೂ 6,800 ಹಾಸಿಗೆಗಳು ಫೆಬ್ರುವರಿ ಹೊತ್ತಿಗೆ ಸಿದ್ಧವಾಗಲಿವೆ ಎಂದು ಅವರು ಹೇಳಿದರು.

'ಪ್ರತೀ ವಾರ್ಡ್‌ನಲ್ಲಿ 100 ಆಮ್ಲಜನಕ ಸೌಲಭ್ಯವಿರುವ ಹಾಸಿಗೆಗಳನ್ನು ಎರಡು ವಾರದಲ್ಲಿ ಸಿದ್ಧಪಡಿಸಲು ಸಾಧ್ಯವಿದೆ. ಒಟ್ಟು 270 ವಾರ್ಡ್‌ಗಳಿಂದ 27,000 ಹಾಸಿಗೆಗಳು ಸಿದ್ಧವಾಗಲಿವೆ' ಎಂದು ಅವರು ತಿಳಿಸಿದರು.

ಕೋವಿಡ್: 8 ಮಂದಿ ಮರಣ

ಬೆಂಗಳೂರು: ಬೆಂಗಳೂರಿನಲ್ಲಿ 6 ಮಂದಿ ಸೇರಿ ರಾಜ್ಯದಲ್ಲಿ ಒಟ್ಟು 8 ಜನ ಕೋವಿಡ್‌ನಿಂದ ಮಂಗಳವಾರ ಮೃತಪಟ್ಟಿದ್ದಾರೆ. ಹೀಗಾಗಿ ಸಾವಿಗೀಡಾದವರ ಒಟ್ಟು ಸಂಖ್ಯೆ 38,211ಕ್ಕೆ ಏರಿದೆ. ಮರಣ ಪ್ರಮಾಣ ದರವು ಶೇ 2.74ಕ್ಕೆ ಹೆಚ್ಚಿದೆ. ಬೀದರ್ ಹಾಗೂ ಮೈಸೂರಿನಲ್ಲಿ ತಲಾ ಒಂದು ಮರಣ ಪ್ರಕರಣಗಳು ವರದಿಯಾಗಿವೆ. ಒಂದು ದಿನದಲ್ಲಿ 291 ಮಂದಿಗೆ ಸೋಂಕು ತಗುಲಿದ್ದು, ಸೋಂಕಿತರ ಒಟ್ಟು ಸಂಖ್ಯೆ 29.96 ಲಕ್ಷಕ್ಕೆ ಏರಿದೆ. ಸೋಂಕು ದೃಢ ಪ್ರಮಾಣವು ಶೇ 0.47ರಷ್ಟಿದೆ. ಹಿಂದಿನ 24 ಗಂಟೆಗಳಲ್ಲಿ 745 ಜನರಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ 29.51 ಲಕ್ಷ ಮಂದಿ ಚೇತರಿಸಿಕೊಂಡಂತಾಗಿದೆ. ಸಕ್ರಿಯ ಪ್ರಕರಣಗಳು 6,416ಕ್ಕೆ ತಗ್ಗಿವೆ.

ಬೆಂಗಳೂರಿನಲ್ಲಿ ಮಂಗಳವಾರ 185 ಮಂದಿ ಸೋಂಕಿಗೊಳಗಾಗಿದ್ದಾರೆ. ದಕ್ಷಿಣ ಕನ್ನಡ (19) ಹಾಗೂ ಮೈಸೂರಿನಲ್ಲಿ (28) ಇದು ಎರಡಂಕಿಯಷ್ಟಿದೆ. ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಹಾವೇರಿ, ರಾಯಚೂರು, ರಾಮನಗರ, ವಿಜಯಪುರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ. 20 ಜಿಲ್ಲೆಗಳಲ್ಲಿ ಇದು ಒಂದಂಕಿಯಷ್ಟಿದೆ. ಕೋವಿಡ್ ಪರೀಕ್ಷೆಗಳಲ್ಲಿ ಅಲ್ಪ ಹೆಚ್ಚಳವಾಗಿದ್ದು, ಮಂಗಳವಾರ 61,804 ಮಾದರಿಗಳನ್ನು ಪರೀಕ್ಷಿಸಲಾಗಿದೆ. ಬೆಂಗಳೂರಿನಲ್ಲಿ ಗರಿಷ್ಠ (4,833) ಸಕ್ರಿಯ ಪ್ರಕರಣಗಳಿವೆ.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು – 560 064
ವೆಬ್‌ಸೈಟ್: www.rwf.indianrailways.gov.in
आज़ादी का अमृत महोत्सव
ಟೆಂಡರ್ ಪ್ರಕಟಣೆ ಸಂಖ್ಯೆ: ಆರ್‌ಡಬ್ಲ್ಯುಎಫ್/ಡಬ್ಲ್ಯು/21–22/14 ದಿನಾಂಕ: 27.11.2021
ಇ–ಟೆಂಡರ್: ಭಾರತದ ರಾಷ್ಟ್ರಪತಿಯವರ ಪರವಾಗಿ ಉಪ ಮುಖ್ಯ ಇಂಜಿನಿಯರ್‌ರವರು ಆನ್‌ಲೈನ್ ಮುಖಾಂತರ ವೆಬ್‌ಸೈಟ್ http://www.ireps.gov.in (Works) ಮೂಲಕ ಕೆಳಗೆ ತಿಳಿಸಿರುವ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ಸ್ ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ವಿವರಣೆ	ಅಂದಾಜು ಮೌಲ್ಯ ರೂ. ಗಳಲ್ಲಿ	ಮುಕ್ತಾಯದ ದಿನಾಂಕ & ಸಮಯ
1	ಡಬ್ಲ್ಯು.496/ ಆರ್‌ಡಬ್ಲ್ಯುಎಫ್/ ವೈಎನ್‌ಕೆ/975	ಆರ್‌ಡಬ್ಲ್ಯುಎಫ್‌ನ ಪಶ್ಚಿಮ ಕಾಲೋನಿಯಲ್ಲಿ 58 ಘಟಕಗಳ ಟೈಪ್–II ಕ್ವಾರ್ಟರ್ಸ್‌ಗಳಿಗೆ (201–203, 215, 217–220) ಹೆಚ್ಚುವರಿ ಮಲಗುವ ಕೋಣೆ ನಿರ್ಮಾಣ.	17894195.11	28/12/2021 11.00 ಗಂಟೆಯವರೆಗೆ

ಈ ಟೆಂಡರ್ ಸೂಚನೆಯನ್ನು ವೆಬ್‌ಸೈಟ್ "www.rwf.indianrailways.gov.in" ನಲ್ಲಿ ನೋಡಬಹುದು.
ಉಪ ಮುಖ್ಯ ಇಂಜಿನಿಯರ್

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ದಾವಣಗೆರೆ.
ಸಂ:ಕಾಇಂ:ಗ್ರಾ.ಕು.ನೀ&ನೈವಿ:ದಾ:ಜೆ.ಇಂ–1/ದಾ::ಇ.ಪ್ರೊ/787/2021–22/ ದಿನಾಂಕ:.29–11–2021
ಅಲ್ಪಾವಧಿ ಟೆಂಡರ್ ಪ್ರಕಟಣೆ ದ್ವಿ–ಲಕೋಟೆ ಪದ್ಧತಿ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
2020–21ನೇ ಸಾಲಿನ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ ಅನುಮೋದನೆಯಾದ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಮಾರಿಕೊಪ್ಪ ಮತ್ತು ಇತರೆ 17 ಗ್ರಾಮಗಳ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯ ವಾರ್ಷಿಕ ನಿರ್ವಹಣೆ ಕಾಮಗಾರಿಯ ಇ–ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ನೋಂದಾಯಿತ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ಗಳನ್ನು ಕೆ.ಡಬ್ಲ್ಯೂ.–2 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಟೆಂಡರ್ ಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ಪೋರ್ಟಲ್ ಮುಖಾಂತರ ಸಲ್ಲಿಸುವ ಕಡೇ ದಿನಾಂಕ: 13..12.2021ರ ಸಂಜೆ5.00ರ ವರೆಗೆ ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–262126 ಅಥವಾ www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.
ವಾಸಾಇ/ಡಿವಿಜಿ/506/ ಎಂಸಿಎ/2021–22
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ ಮತ್ತು ನೈ ವಿಭಾಗ, ದಾವಣಗೆರೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ಖೇಲೋ ಇಂಡಿಯಾ ಶಾಖೆ
ಸಂಖ್ಯೆ: ಡಿವೈಇಎಸ್/ಖೇಲೋಇಂಡಿಯಾ/03/2021–22 ದಿನಾಂಕ: 30–11–2021
ಪ್ರಕಟಣೆ
ಭಾರತ ಸರ್ಕಾರವು ಖೇಲೋ ಇಂಡಿಯಾ ಯೋಜನೆಯಡಿ **ರಾಜ್ಯ ಉತ್ಕೃಷ್ಟತಾ ಕೇಂದ್ರ (ಈಜು, ಅಥ್ಲೆಟಿಕ್ಸ್ ಮತ್ತು ಶೂಟಿಂಗ್)** ವನ್ನು **ಶ್ರೀ ಜಯಪ್ರಕಾಶ ನಾರಾಯಣ ರಾಷ್ಟ್ರೀಯ ಯುವ ಕೇಂದ್ರ, ವಿದ್ಯಾನಗರ, ಬೆಂಗಳೂರು** ಇಲ್ಲಿ ಮಂಜೂರು ಮಾಡಿದ್ದು, ಈ ಕೇಂದ್ರಕ್ಕೆ ಖೇಲೋ ಇಂಡಿಯಾ ನಿಯಮಗಳನುಸಾರ ಗುತ್ತಿಗೆ ಆಧಾರದ ಮೇಲೆ **Young Professional and Sports Masseur** ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.
ಆಸಕ್ತ ಅಭ್ಯರ್ಥಿಗಳು ನಿಗದಿತ ನಮೂನೆಯ ಅರ್ಜಿಗಳನ್ನು ಜಿಲ್ಲೆಯ **ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಛೇರಿ ಅಥವಾ ಆಯುಕ್ತರ ಕಾರ್ಯಾಲಯ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001** ಈ ವಿಳಾಸದಿಂದ ಪಡೆದುಕೊಂಡು ದಿನಾಂಕ: **18–12–2021 ರಂದು ಸಂಜೆ 5.00 ಘಂಟೆಯೊಳಗೆ** ನೇರವಾಗಿ ಈ ಕಛೇರಿಗೆ ದಾಖಲಾತಿಗಳೊಂದಿಗೆ ಅಥವಾ ಇ–ಮೇಲ್ ವಿಳಾಸ: **dyesdept@gmail.com** ಗೆ ಕಡ್ಡಾಯವಾಗಿ ಸಲ್ಲಿಸುವುದು.
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಯಾವುದೇ ಕಾರಣ ನೀಡದೇ ಸದರಿ ಜಾಹೀರಾತನ್ನು ಹಿಂಪಡೆಯುವ ಅಧಿಕಾರವನ್ನು ಹೊಂದಿರುತ್ತದೆ.
ಸಹಿ/– ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
ವಾಸಾಸಂಇ/ಬೆಂ.ನ/ಅಡ್ವರ್ಟೋರ್/2232/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಧೀನ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
ಭಾರತ ಸರ್ಕಾರ
Azadi Ka Amrit Mahotsav
ದಾಖಲಾತಿ ಅಧಿಸೂಚನೆ
ಈ ಮೂಲಕ ಎಲ್ಲಾ ಸಂಬಂಧಪಟ್ಟವರ ಗಮನಕ್ಕೆ ತರುವುದೇನೆಂದರೆ, ಜವಾಹರ ನವೋದಯ ವಿದ್ಯಾಲಯಗಳಲ್ಲಿ 2022–23ನೇ ಸಾಲಿಗೆ ಜವಾಹರ ನವೋದಯ ವಿದ್ಯಾಲಯ 6ನೇ ತರಗತಿಯ ದಾಖಲಾತಿಗಾಗಿ ಆಯ್ಕೆ ಪರೀಕ್ಷೆಯ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಆಡಳಿತಾತ್ಮಕ ಕಾರಣಗಳಿಂದಾಗಿ 15ನೇ ಡಿಸೆಂಬರ್, 2021 ರವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು **www.navodaya.gov.in** ರ ವೆಬ್‌ಸೈಟ್ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ.
ಪ್ರಕಟಣೆ ನವೋದಯ ವಿದ್ಯಾಲಯ ಸಮಿತಿ

ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಕೈಗಾರಿಕೆ ಖಾಸಗಿ ನಿಯಮಿತ
ಪೋಸ್ಟ್ ಕೆರ್ಕಿಹಳ್ಳಿ, ಬಗನಾಲ್ ಗ್ರಾಮ, ಕೊಪ್ಪಳ್ ತಾಲ್ಲೂಕು, ಮತ್ತು ಜಿಲ್ಲೆ, ಕರ್ನಾಟಕ-538228
ತಿಳುವಳಿಕೆ
ಕರ್ನಾಟಕ ರಾಜ್ಯ, ಕೊಪ್ಪಳ್ ಜಿಲ್ಲೆ ಮತ್ತು ತಾಲ್ಲೂಕಿನ, ಪೋಸ್ಟ್ ಕೆರ್ಕಿಹಳ್ಳಿ, ಚಿಕ್ಕಬಗನಾಲು ಗ್ರಾಮದ ಭೂ ಸಮೀಕ್ಷಾ ಸಂಖ್ಯೆ 79, 84 ಚಿಕ್ಕ ಬಗನಾಲ್ ಮತ್ತು 90/5, 90/7, 90/8, 90/9, 91/6 ಕುನಿಕೇರಿ ಗ್ರಾಮದಲ್ಲಿ, **ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಕೈಗಾರಿಕೆ ಖಾಸಗಿ ನಿಯಮಿತರವರು ಉದ್ದೇಶಿತ ಉಕ್ಕಿನ ಘಟಕದ ಮಾರ್ಪಾಡು ಮತ್ತು ವಿಸ್ತರಣೆ** ಪ್ರತಿ ವರ್ಷಕ್ಕೆ ಈ ಕೆಳಕಂಡ ವಿವರಕ್ಕೆ, ರಾಜ್ಯ ಮಟ್ಟದ ಪರಿಸರ ಪರಿಣಾಮ ನಿರ್ಧಾರಣಾ ಸಮಿತಿ (ಪರಿಸರ ಮತ್ತು ಅರಣ್ಯ ಮಂಡಳಿ, ಭಾರತ ಸರ್ಕಾರದಿಂದ ಸ್ಥಾಪಿಸಲ್ಪಟ್ಟ) ಇವರಿಂದ ಪಡೆದ ಪರಿಸರ ಗಮನಾನುಮತಿಯನ್ನು ಪಡೆದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಕ್ರ.ಸಂ.	ವಿವರ	ಪ್ರಸ್ತುತ	ಸೂಚಿತ
1.	ಶುದ್ಧ ಕಬ್ಬಿಣ	1 x 175 TPD	
2.	ಉಕ್ಕನ್ನು ಕರಗಿಸುವ ಶಾಪ್ (SMS)	–	1 x 20 TPD
3.	ಉದ್ದೇಶಿತ ವಿದ್ಯುತ್ ಘಟಕ (ಅನುಪಯುಕ್ತ ಶಾಖ)	–	**12 MW** (WHRB - 4MW & AFBC - 8MW)

ಪತ್ರ ಸಂಖ್ಯೆ: SEIAA: 32: IND: 2021 **ದಿನಾಂಕ:** 1ನೇ ಅಕ್ಟೋಬರ್ 2013.
ಸದರಿ ಮಂಜೂರಾತಿಯ ಪ್ರತಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರು ರವರ ಕಛೇರಿ ಹಾಗೂ ಪರಿಸರ ಮತ್ತು ಅರಣ್ಯ ಇಲಾಖೆ ಇವರ ಅಂತರ್ಜಾಲವಾದ **http://www.seiaa.kar.nic.in** ನಲ್ಲಿ ಸಾರ್ವಜನಿಕ ವೀಕ್ಷಣೆಗೆ ಲಭ್ಯವಿರುತ್ತದೆ.

ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, 1ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು–560002,
ದೂರವಾಣಿ ಸಂಖ್ಯೆ: 080–22107704/22484516
ವೆಬ್‌ಸೈಟ್: www.kannadapustakapradhikara.com
ಇ–ಮೇಲ್ : kannadappradhikara@gmail.com
ಸಂಖ್ಯೆ : ಕಪುಪ್ರಾ/34/ರಿ.ಪು.ಮೇ/2021–22 ದಿನಾಂಕ : 30.11.2021
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
ಕನ್ನಡ ಪುಸ್ತಕ ಪ್ರಾಧಿಕಾರದಿಂದ ಮೈಸೂರು ಹಾಗೂ ಧಾರವಾಡ ಜಿಲ್ಲೆಯಲ್ಲಿ ಕನ್ನಡ ಪುಸ್ತಕಗಳ ರಿಯಾಯಿತಿ ಮಾರಾಟ ಮೇಳವನ್ನು ನಡೆಸಲು ತಾತ್ಕಾಲಿಕೆ ಮಳಿಗೆ ನಿರ್ಮಿಸುವ ಬಗ್ಗೆ ನೋಂದಾಯಿತ ಸೂಕ್ತ ಸಂಸ್ಥೆ / ವ್ಯಕ್ತಿಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ ರೂ.20,00,000–00 ಗಳು. ಅಲ್ಪಾವಧಿ ಇ–ಟೆಂಡರ್ ದಸ್ತಾವೇಜು ಹಾಗೂ ಇತರೆ ಮಾಹಿತಿಗಳನ್ನು https://eproc.karnataka.gov.in ನಲ್ಲಿ ಪಡಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–560 002, ದೂರವಾಣಿ ಸಂಖ್ಯೆ: 080–22107704/ 22484516 ಹಾಗೂ www.kannadapustakapradhikara.com – ಇಲ್ಲಿ ಸಂಪರ್ಕಿಸುವುದು.
ಸಹಿ/– ಆಡಳಿತಾಧಿಕಾರಿ
ವಾ.ಸಾ.ಸಂ.ಇ/ಬೆಂ.ನಗರ/2235/ಆಕಾರ್/2021–22
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಕೊಪ್ಪಳ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ–583231
ದೂ.ಸಂ: 08539–221660 E-mail:dhokoppal@gmail.com
ಸಂಖ್ಯೆ:ಸಿಬ್ಬಂದಿ(1)/211/2021–22 ದಿನಾಂಕ:29.11.2021
ಪ್ರಕಟಣೆ
ಸರ್ಕಾರದ ಆದೇಶ ಸಂ:ಆಕುಕ:78:ಸಿಜಿಇ:2017 ದಿನಾಂಕ: 12.01.2018ರಲ್ಲಿ ಕೊಪ್ಪಳ ಜಿಲ್ಲೆಗೆ ಹೊಸದಾಗಿ ಮಂಜೂರಾದ 10 ವಿಸ್ತರಣಾ ಕೇಂದ್ರಗಳಿಗೆ ಎಂ.ಬಿ.ಬಿಎಸ್ ವೈದ್ಯರನ್ನು ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನೇಮಕಾತಿ ಮಾಡಲು ದಿನಾಂಕ: 08.12.2021 ರಂದು ಸಂದರ್ಶನ ಕರೆಯಲಾಗಿದೆ.
ಭರ್ತಿ ಮಾಡಬೇಕಾದ ಎಂ.ಬಿ.ಬಿ.ಎಸ್. ವೈದ್ಯರುಗಳ ಹುದ್ದೆಗಳ ಸಂಖ್ಯೆ: 09 (ಹೈ.ಕ–07 ನಾನ್ ಹೈ.ಕ–02) ಸಂಚಿನ ವೇತನ: ಮಾಸಿಕ ಸಂಚಿತ ವೇತನ ರೂ. 45,000/– ವಿದ್ಯಾರ್ಹತೆ: ಎಂ.ಬಿ.ಬಿಎಸ್. ಪದವಿ ಹೊಂದಿದ ವೈದ್ಯರು ಕೆ.ಎಂ.ಸಿ. ಯಿಂದ ನೋಂದಣಿ ಹೊಂದಿರಬೇಕು.
ಕಾರಣ ಆಸಕ್ತಿಯುಳ್ಳ ಅರ್ಹ ಎಂ.ಬಿ.ಬಿ.ಎಸ್. ಅಭ್ಯರ್ಥಿಗಳು ಮೂಲ ದಾಖಲಾತಿಗಳೊಂದಿಗೆ ಒಂದು ದೃಢೀಕೃತ ಝರಾಕ್ಸ್ ಪ್ರತಿ ಹಾಗೂ ಇತ್ತೀಚಿನ 2 ಭಾವಚಿತ್ರಗಳೊಂದಿಗೆ ದಿನಾಂಕ: 08.12.2021 ರಂದು ಬೆಳಿಗ್ಗೆ 11.00 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ ಇಲ್ಲಿ ಸಂದರ್ಶನಕ್ಕೆ ಹಾಜರಾಗಲು ತಿಳಿಸಿದೆ. ನೇಮಕಾತಿಯನ್ನು ಚಾಲ್ತಿ ಇರುವ ನಿಯಮಗಳನುಸಾರವಾಗಿ ರೋಸ್ಟರ್.ಕಂ ಮೇರಿಟ್ ಆಧಾರದ ಮೇಲೆ ಮಾಡಲಾಗುವುದು.
ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಕೊಪ್ಪಳಕ್ಕೆ ಸಂಪರ್ಕಿಸಬಹುದು.
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಧಿಕಾರಿಗಳು ಕೊಪ್ಪಳ.
ಡಿಐಪಿಆರ್/ಕೊಪ್ಪಳ/396/ಎಂಸಿಎ/2021–22

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ತುಮಕೂರು. ದೂ:0816-2252937
ಸಂ:23/ಕಾಪಾಅ/ಗ್ರಾ.ಕು.ನೀ.ನೈವಿ/ತುಮ/ಸ.ಇಂ/1069/2021–22/ ದಿನಾಂಕ:26.11.2021
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 23/2021–22
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈ ವಿಭಾಗ, ತುಮಕೂರು ಇವರು 2021–22 ನೇ ಸಾಲಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.
ತುಮಕೂರು ಜಿಲ್ಲೆ ವ್ಯಾಪ್ತಿಯ ಪಾವಗಡ ತಾಲ್ಲೂಕಿನ 2 ಕಾಮಗಾರಿಗಳಿಗೆ (ಇಂಡೆಂಟ್ ನಂ: 36184, 36185) ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (https://www.eproc. karnataka.gov.in) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು (1) ಭರ್ತಿಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ : **13.12.2021** ಸಂಜೆ 5:00 ಘಂಟೆ ವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **14.12.2021** ಸಂಜೆ 5.30 ಘಂಟೆಯ ನಂತರ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ: **16.12.2021** ಬೆಳಿಗ್ಗೆ 11:00 ಘಂಟೆಯ ನಂತರ.
ಸಹಿ/– ಕಾರ್ಯಪಾಲಕ ಅಭಿಯಂತರರು, ಗ್ರಾ.ಕು,ನೀ ಮತ್ತು ನೈ ವಿಭಾಗ, ತುಮಕೂರು
DIPR/TMK/425/MCA/2021-22

ಕೆಂಗೇರಿ ರಾಬಿನ್ 4ಆಟ
ತಿಪಟೂರು ಗಣೇಶ್ 4ಆಟ
ಬನ್ನೂರು ಇಂದ್ರ 4ಆಟ
ಕೆ.ಎಂ.ದೊಡ್ಡಿ ಸುಮಾ 4ಆಟ
ಕೊಪ್ಪಳ ಶಾರಧ 4ಆಟ
ಹೊಸದುರ್ಗ ಜ್ಯೋತಿ 4ಆಟ
ಹರಿಹರ ಜಯಶ್ರೀ 4ಆಟ
ಹಗರಿಬೊಮ್ಮನಹಳ್ಳಿ ಕೃಷ್ಣ 4ಆಟ
ಶಿರಾಳಕೊಪ್ಪ ರಾಮಕೃಷ್ಣ 4ಆಟ
ಚೆಲ್ಲೂರು ಬಸವೇಶ್ವರ 4ಆಟ
ಬಡವನಹಳ್ಳಿ ಬಾಪುಜಿ 4ಆಟ
ಗುಲ್ಬರ್ಗ ತ್ರಿವೇಣಿ 4ಆಟ
ಸಕಲೇಶಪುರ ತೇಜ್ವಿನಿ 4ಆಟ
ಹಾಗೂರಾಜ್ಯಾದ್ಯಂತ

PVR CINEMAS: FORUM, ORION MALL, VAISHNAVI, VEGA CITY, ARENA, SPRITE, VR MALL, MARKET CITY, REGALIYA
INOX: MANTRI MALL, GARUDA MALL, SWAGATH MALL, CENTRAL MALL, RMZ MALL, LIDO MALL, BROOK FILED, VALUE MALL
Cinépolis: MEENAKSHI MALL, ETA MALL, FUN MALL, ORION EAST
GOPALAN CINEMAS: INNOVATION MALL, ARCH MALL, LEGESSY MALL, SIGNATURE MALL, GRAND MALL, GT WORLD
THE CINEMA: ROCKLINE MALL
CARNIVAL: SEEGEHALLI
KINO CINEMAS

ವಿವಿಧ ಸೇವೆಗಳ ಅರ್ಜಿ ಶುಲ್ಕವನ್ನು ಡಿಜಿಟಲ್ ಪಾವತಿ ಅವಕಾಶಕ್ಕೆ ಶಿಫಾರಸ್ಸು

ಕಂದಾಯ ಇಲಾಖೆ ಸೇವೆ ಆ್ಯಪ್‌ನಲ್ಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂದಾಯ ಇಲಾಖೆಯ ಎಲ್ಲಾ ಸೇವೆಗಳನ್ನು ಮೊಬೈಲ್ ಆ್ಯಪ್ ಮೂಲಕ ನೀಡಬೇಕು ಮತ್ತು ಇಲಾಖೆಯ ವಿವಿಧ ಸೇವೆಗಳ ಅರ್ಜಿ ಶುಲ್ಕವನ್ನು ನಗದು ಪಾವತಿಯ ಬದಲಿಗೆ ಡಿಜಿಟಲ್ ಪಾವತಿಗೆ ಅವಕಾಶ ಕಲ್ಪಿಸಬೇಕು ಎಂದು ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಕಂದಾಯ ಇಲಾಖೆ ಕುರಿತ ವರದಿಯಲ್ಲಿ ಶಿಫಾರಸ್ಸು ಮಾಡಿದೆ.

ಬಳಕೆದಾರರಿಗೆ ಅನುಕೂಲವಾಗುವಂತೆ ಕಂದಾಯ ಇಲಾಖೆಯ ಎಲ್ಲಾ ಸೇವೆಗಳನ್ನು ಬಳಕೆದಾರರಿಗೆ ಮೊಬೈಲ್ ಆ್ಯಪ್ ಮೂಲಕ ಲಭ್ಯವಾಗುವಂತೆ ಕ್ರಮ ವಹಿಸಬೇಕು. ಈ ಸಂಬಂಧ ಇ-ಆಡಳಿತ ಇಲಾಖೆಯು ಮೊಬೈಲ್ ಆ್ಯಪ್ ಅನ್ನು ಪುನರಾಭಿವೃದ್ಧಿಗೊಳಿಸಬೇಕು ಎಂದು ಹೇಳಿದೆ.

ಅಲ್ಲದೆ, ಕಂದಾಯ ಇಲಾಖೆಯ ಎಲ್ಲಾ ಆನ್‌ಲೈನ್ ಸೇವೆಗಳಿಗೂ ಅರ್ಜಿ ಶುಲ್ಕವನ್ನು ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್, ನೆಟ್ ಬ್ಯಾಂಕಿಂಗ್, ಗೂಗಲ್ ಪೇ, ಮೂಲಕ ಪಾವತಿಸಲು ಅವಕಾಶ ಕಲ್ಪಿಸಬೇಕು ಎಂದೂ ಹೇಳಿದೆ.

ಜಾತಿ ಪ್ರಮಾಣಪತ್ರ: ದೋಷ ತಿದ್ದುವ ಅಧಿಕಾರ ತಹಶೀಲ್ದಾರ್‌ಗೆ

ಜಾತಿ ಪ್ರಮಾಣಪತ್ರ/ ಆದಾಯ ಪ್ರಮಾಣಪತ್ರಗಳಲ್ಲಿ ಹೆಸರು, ವಿಳಾಸಗಳಲ್ಲಿರುವ (ಜಾತಿ ಮತ್ತು ಆದಾಯ ವಿವರಗಳನ್ನು ಬಿಟ್ಟು) ಕಾಗುಣಿತ ದೋಷಗಳನ್ನು ತಿದ್ದುವ ಅಧಿಕಾರ ತಹಶೀಲ್ದಾರ್ ದರ್ಜೆ–2 ರವರಿಗೆ ನೀಡುವಂತೆ ಆಯೋಗ ಶಿಫಾರಸು ಮಾಡಿದೆ.

ಪಡಿತರ ಚೀಟಿ, ಆಧಾರ್, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ, ಮತದಾರರ ಗುರುತಿನ ಚೀಟಿ, ವಿಳಾಸದ ಪುರಾವೆಯಂತಹ ಪ್ರಮಾಣ ಪತ್ರಗಳಿಗೆ ಅಟಲ್ ಜನಸ್ನೇಹಿ ಕೇಂದ್ರಗಳ ಮೂಲಕ ಅರ್ಜಿ ಸಲ್ಲಿಸಿದ ತಕ್ಷಣವೇ ಸ್ವಯಂ ಚಾಲಿತವಾಗಿ ಭರ್ತಿಯಾಗುವಂತೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಬೇಕು ಎಂದೂ ಸೂಚಿಸಿದೆ.

ಪ್ರಮುಖ ಶಿಫಾರಸ್ಸುಗಳು:

- ಬೆಂಗಳೂರು ಒನ್ ರೀತಿಯಲ್ಲೇ ನಾಗರಿಕರಿಗೆ ಸುಲಭವಾಗಿ ಸೇವೆ ಒದಗಿಸಲು 'ಗ್ರಾಮ ಒನ್' ವ್ಯವಸ್ಥೆಯನ್ನು ಕಲ್ಪಿಸಬೇಕು. ಇದಕ್ಕೆ ಸಂಬಂಧಿಸಿದಂತೆ ನಿರ್ವಾಹಕರು ಅಥವಾ ದತ್ತಾಂಶ ನಮೂದಿಸುವ ಆಪರೇಟರ್‌ಗಳಿಗೆ ತರಬೇತಿ ನೀಡಬೇಕು.
- ಅಟಲ್‌ಜೀ ಸ್ನೇಹಿ ಕೇಂದ್ರಗಳಲ್ಲಿ (ಎಜೆಎಸ್‌ಕೆ) ನಾಗರಿಕರಿಗಾಗಿ ಏಕಗವಾಕ್ಷಿ ಸೇವಾ ಸೌಲಭ್ಯ ನೀಡಬೇಕು. ಎಲ್ಲಾ ಸರ್ಕಾರಿ ನಾಗರಿಕ ಆನ್‌ಲೈನ್ ಸೇವೆಗಳನ್ನು ಎಜೆಎಸ್‌ಕೆ ಕೇಂದ್ರಗಳಲ್ಲಿ ಒದಗಿಸಲು ತಗಲುವ ವೆಚ್ಚಕ್ಕೆ ಅರ್ಜಿದಾರರಿಗೆ ₹25 ಶುಲ್ಕ ವಿಧಿಸಬಹುದು. ಈಗಾಗಲೇ ಬಳಕೆದಾರರ ಶುಲ್ಕ ₹25 ಇದೆ. ಇದರಿಂದ ₹50 ಆಗಲಿದೆ.
- ಕಂದಾಯ ಇಲಾಖೆಯ ಎಲ್ಲ ಪ್ರಮಾಣ ಪತ್ರಗಳ ವಿತರಣೆಗಾಗಿ 'ಇ-ಕ್ಷಣ' ವ್ಯವಸ್ಥೆಯನ್ನು ಜಾರಿಗೊಳಿಸಿ, ಇ-ಕ್ಷಣವನ್ನು ಕಡ್ಡಾಯವಾಗಿ ಬಳಕೆ ಮಾಡಬೇಕು.
- ಕಂದಾಯ ಇಲಾಖೆಗೆ ಸಂಬಂಧಿಸಿದ ಎಲ್ಲಾ ಪಿಂಚಣಿ ಸೇವೆಗಳನ್ನೂ 'ನವೋದಯ' ಆ್ಯಪ್ ಅಡಿ ತರಬೇಕು. ನಂತರ ವಿವಿಧ ಇಲಾಖೆಗಳ ಎಲ್ಲಾ ಪಿಂಚಣಿ ಯೋಜನೆಗಳನ್ನು (ಕಂದಾಯೇತರ ಸೇರಿ) ನವೋದಯ ಆ್ಯಪ್ ಅಡಿ ತರಲು ಕ್ರಮಕೈಗೊಳ್ಳಬೇಕು.
- ಅರ್ಜಿದಾರರ ಅರ್ಜಿಯ ವಸ್ತುಸ್ಥಿತಿ, ಅನುಮೋದನೆ, ನಿರಾಕರಣೆ ಮತ್ತು ಅಗತ್ಯವಿರುವ ಹೆಚ್ಚುವರಿ ದಾಖಲೆಗಳ ಕುರಿತು ಎಸ್‌ಎಂಎಸ್ ಸೌಲಭ್ಯ ಅಥವಾ ದೂರವಾಣಿ ಕರೆ ಸೌಲಭ್ಯ ಕಲ್ಪಿಸಬೇಕು. ಮೊಬೈಲ್ ಆ್ಯಪ್ ಅಥವಾ ಡಿಜಿಲಾಕರ್ ಮೂಲಕ ಪ್ರಮಾಣ ಪತ್ರ ಡೌನ್‌ಲೋಡ್ ಮಾಡಿಕೊಳ್ಳಲು ತಂತ್ರಾಂಶದಲ್ಲಿ ಅವಕಾಶ ನೀಡುವುದು. ಪ್ರಮಾಣ ಪತ್ರಗಳ ಸಾಫ್ಟ್ ಪ್ರತಿಯನ್ನು ಇ-ಮೇಲ್ ಮೂಲಕ ಪಿಡಿಎಫ್ ರೂಪದಲ್ಲಿ ಅರ್ಜಿದಾರರು ಮೊಬೈಲ್ ಸಂಖ್ಯೆಗೆ ಎಸ್‌ಎಂಎಸ್‌ಗೆ ಜೋಡಿಸಿ ಕಳುಹಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕು.

ಆನೆ ನಡೆದದ್ದೇ ದಾರಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆನೇಕಲ್ ತಾಲ್ಲೂಕಿನ ಕಾಳನಾಯಕನಹಳ್ಳಿ ಸಮೀಪ ಮಂಗಳವಾರ ರಸ್ತೆ ದಾಟುತ್ತಿರುವ ಕಾಡಾನೆಗಳ ಹಿಂಡು.

ಸಂಕ್ಷಿಪ್ತ ಸುದ್ದಿ

ಸಾಫ್ಟ್‌ವೇರ್ ಹ್ಯಾಕ್ ಮಾಡಿ ಬಿಟ್ ಕಾಯಿನ್‌ಗಾಗಿ ಬೇಡಿಕೆ!

ಮೈಸೂರು: ಖಾಸಗಿ ಆಸ್ಪತ್ರೆಯೊಂದರ ಸರ್ವರ್ ಅನ್ನು ಹ್ಯಾಕ್ ಮಾಡಿ, ಬಿಟ್‌ಕಾಯಿನ್ ರೂಪದಲ್ಲಿ ಹಣ ನೀಡಲು ಹ್ಯಾಕರ್‌ಗಳು ಬ್ಲಾಕ್‌ಮೇಲ್ ಮಾಡಿರುವ ಕುರಿತು ಇಲ್ಲಿನ ನಗರ ಸೈಬರ್, ಆರ್ಥಿಕ ಮತ್ತು ಮಾದಕದ್ರವ್ಯ ಅಪರಾಧಗಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹ್ಯಾಕರ್‌ಗಳು ಮೊದಲಿಗೆ ಸರ್ವರ್ ಅನ್ನು ಹ್ಯಾಕ್ ಮಾಡಿ ದತ್ತಾಂಶ ತಿರುಚಿದರು. ಬಿಟ್‌ಕಾಯಿನ್ ರೂಪದಲ್ಲಿ ಹಣ ನೀಡಿದರೆ ತಿರುಚಿದ ದತ್ತಾಂಶಗಳನ್ನು ಮೊದಲಿನ ಸ್ಥಿತಿಗೆ ತರಲಾಗುವುದು ಎಂದು ಇ-ಮೇಲ್ ಕಳುಹಿಸಿದರು. ಆದರೆ, ದತ್ತಾಂಶಗಳನ್ನು ಆಸ್ಪತ್ರೆಯವರು ಹಾರ್ಡ್‌ಡಿಸ್ಕ್‌ನಲ್ಲಿ ಇರಿಸಿಕೊಂಡಿದ್ದರಿಂದ ನಷ್ಟವಾಗಿಲ್ಲ.

'ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ' ಹ್ಯಾಕರ್‌ಗಳ ಇ-ಮೇಲ್ ಐಡಿಯ ಡೊಮೈನ್ ಪತ್ತೆ ಹಚ್ಚುವ ಕಾರ್ಯ ನಡೆದಿದೆ' ಎಂದು ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ತಿಳಿಸಿದರು.

ಜಮೀನಿನ ಎನ್‌ಒಸಿಗೆ ಆಗ್ರಹ, ಆತ್ಮಾಹುತಿ ಬೆದರಿಕೆ!

ಬೆಳಗಾವಿ: 'ಸೇನೆಯಲ್ಲಿ ಕರ್ತವ್ಯದಲ್ಲಿದ್ದಾಗ ಮಗ ಹುತಾತ್ಮನಾಗಿದ್ದಾನೆ. ಸರ್ಕಾರ 20 ವರ್ಷದ ಹಿಂದೆ ನೀಡಿದ್ದ 2 ಎಕರೆ ಜಮೀನಿನ ಎನ್‌ಒಸಿ ಕೊಡಲು ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್ ಅಲೆದಾಡಿಸುತ್ತಿದ್ದಾರೆ' ಎಂದು ಆರೋಪಿಸಿ ಯೋಧನ ತಂದೆ ನಿಪ್ಪಾಣಿ ತಾಲ್ಲೂಕಿನ ಕುರ್ಲಿ ಗ್ರಾಮದ ವಸಂತರಾವ್ ದೇಸಾಯಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿ ಆತ್ಮಾಹುತಿ ಬೆದರಿಕೆ ಹಾಕಿದರು.

'5 ವರ್ಷಗಳಿಂದ ಹಲವು ಬಾರಿ ಅರ್ಜಿ ಸಲ್ಲಿಸಿದ್ದೇವೆ. ಆದರೆ, ಸಿಕ್ಕಿಲ್ಲ. ಈಗಲೂ ಸಿಗದಿದ್ದರೆ ಕುಟುಂಬದೊಂದಿಗೆ ಸಜೀವ ದಹನ ಮಾಡಿಕೊಳ್ಳಬೇಕಾಗುತ್ತದೆ' ಎಂದು ಬೆದರಿಕೆ ಹಾಕಿದರು.

'ಮಗ ಸಂಜಯ 18ನೇ ವಯಸ್ಸಿಗೆ ಸೇನೆ ಸೇರಿದ್ದ. 1991ರಲ್ಲಿ ಹುತಾತ್ಮನಾದ. ಸರ್ಕಾರ 2002ರಲ್ಲಿ ಸೌಂದಲಗಾ ಗ್ರಾಮದಲ್ಲಿ 2 ಎಕರೆ ಜಮೀನು ಪರಿಹಾರವಾಗಿ ನೀಡಿದೆ. 15 ವರ್ಷಗಳ ಕಾಲ ಮಾರಾಟಕ್ಕೆ ಅವಕಾಶ ಇರುವುದಿಲ್ಲ. ಆ ಅವಧಿ ಮುಗಿದು 5 ವರ್ಷಗಳಾದರೂ ಇನ್ನೂ ಕೊಡುತ್ತಿಲ್ಲ' ಎಂದು ಆರೋಪಿಸಿದರು.

ಮಂತ್ರಾಲಯ, ಉತ್ತರಾದಿ ಮಠಗಳಿಗೆ ಚಾಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರತಿಬಾರಿಯೂ ಕೋರ್ಟ್ ಆದೇಶ ಪಡೆದೇ ಪೂಜೆ, ಆರಾಧನೆ ನಡೆಸಲು ಮುಂದಾಗುವ ನೀವು ಕೋರ್ಟ್ ಎಂದರೆ ಏನೆಂದುಕೊಂಡಿದ್ದೀರಿ' ಎಂದು ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠ ಹಾಗೂ ಉತ್ತರಾದಿ ಮಠವನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಡಿಸೆಂಬರ್ 2, 3 ಮತ್ತು 4ರಂದು ನಡೆಯಲಿರುವ ಮಠದ ಪೂರ್ವ ಯತಿ ವರೇಣ್ಯ ಪದ್ಮನಾಭ ತೀರ್ಥರ ಆರಾಧನೆಯನ್ನು, 'ಯಾರು ಮೊದಲು ನಡೆಸಬೇಕು' ಎಂಬ ತಕರಾರಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಧ್ಯಂತರ ಆದೇಶ ನೀಡಿದೆ.

ವಿಚಾರಣೆ ವೇಳೆ ಉಭಯ ಮಠಗಳ ವ್ಯಾಜ್ಯಕರ್ತರನ್ನು ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, 'ಸಂವಿಧಾನದ 226ನೇ ವಿಧಿಯ ಉಪಯೋಗ ಆಗಬೇಕಿರುವುದು ಈ ನೆಲದ ಕೃಷಿಕ, ಕಮ್ಮಾರ, ಚಮ್ಮಾರ, ಗಾಣಿಗ, ಸಿಂಪಿಗರಂತಹ ಶೋಷಿತ ಸಮುದಾಯಗಳಿಗೇ ಹೊರತು ನಿಮ್ಮಂತಹವರ ಈ ರೀತಿಯ ವ್ಯಾಜ್ಯಗ-

ಳಿಗಲ್ಲ' ಎಂದು ಚಾಟಿ ಬೀಸಿದೆ.

'ಎರಡೂ ಮಠಗಳಿಗೆ ಮಹಾನ್ ಪರಂಪರೆ ಇದೆ. ಆದರೆ ಇಬ್ಬರೂ ಪ್ರತಿಬಾರಿ ಕೋರ್ಟ್ ಆದೇಶ ಪಡೆದೇ ಆರಾಧನೆ ಮಾಡುವುದನ್ನು ನೋಡಿದರೆ ನೀವು ಮಠ ನಡೆಸುತ್ತಿದ್ದೀರೊ ಅಥವಾ ಯಾವುದಾದರೂ ಕಾಲೇಜು ನಡೆಸುತ್ತಿದ್ದೀರೊ ಎಂಬ ಜಿಜ್ಞಾಸೆ ಉಂಟಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದೆ.

'ನಿಮ್ಮ ಈ ವ್ಯಾಜ್ಯದ ನಡವಳಿಕೆ ಸಹನೀಯವಲ್ಲ. ಅಂತೆಯೇ ಈ ರೀತಿಯ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವುದೂ ತರವಲ್ಲ. ಆದಷ್ಟು ಬೇಗ ಎರಡೂ ಮಠಗಳ ವ್ಯವಸ್ಥಾಪನಾ ಮಂಡಳಿಯವರು ಕೋರ್ಟ್ ಬಳಿಯ ಯಾವುದಾದರೂ ಮರದ ನೆರಳಲ್ಲಿ ಕುಳಿತು ಇದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳಿ..!" ಎಂದು ನ್ಯಾಯಪೀಠ ತಾಕೀತು ಮಾಡಿದೆ.

ಮುಖ್ಯಾಂಶಗಳು

- ಉಭಯ ಮಠಗಳ ನಿರಂತರ ವ್ಯಾಜ್ಯ
- ಶಾಶ್ವತ ಪರಿಹಾರಕ್ಕೆ ಕೋರ್ಟ್ ಸಲಹೆ

ಹೈಕೋರ್ಟ್‌ಗೆ ಪ್ರದತ್ತವಾದ ಸಂವಿಧಾನದ 226ನೇ ವಿಧಿಯ ಅವಕಾಶವನ್ನು ಮಠಗಳು ಈ ರೀತಿ ಬಳಸಿಕೊಂಡರೆ ಶೋಷಿತರ ಪಾಡೇನು?
ಕೃಷ್ಣ ಎಸ್.ದೀಕ್ಷಿತ್, ನ್ಯಾಯಮೂರ್ತಿ

ಏನಿದು ವ್ಯಾಜ್ಯ?: 'ನವ ವೃಂದಾವನದ 14 ಎಕರೆ 7 ಗುಂಟೆ ಜಮೀನಿನ ಡಿಕ್ರಿ ನಮ್ಮ ಪರವಾಗಿದೆ. ಆದ್ದರಿಂದ, ಮಂತ್ರಾಲಯದ ಪೀಠಾಧಿಪತಿಗಳು ಈ ಪ್ರದೇಶದ ಮೇಲೆ ಯಾವುದೇ ಹಕ್ಕು ಸಾಧಿಸಲು ಸಾಧ್ಯವಿಲ್ಲ' ಎಂಬುದು ಉತ್ತರಾದಿ ಮಠದ ವಾದ.

ಇದಕ್ಕೆ ಪ್ರತಿಯಾಗಿ, 'ವಿವಾದಿತ ಸ್ಥಿರಾಸ್ತಿಯ ಭೂ ದಾಖಲೆಗಳು ಸುಳ್ಳು ಮಾಹಿತಿಯಿಂದ ಕೂಡಿವೆ' ಎಂಬುದು ಮಂತ್ರಾಲಯ ಪೀಠಾಧಿಪತಿಗಳ ಪ್ರತಿವಾದ.

ಉತ್ತರಾದಿ ಮಠದ ಪಾಲಿಗೆ ಅಗ್ರಪೂಜೆ

ಕೊಪ್ಪಳ ಜಿಲ್ಲೆ ಆನೆಗೊಂದಿಯಲ್ಲಿರುವ ನವ ವೃಂದಾವನದಲ್ಲಿ 2021ರ ಡಿ.2ರಿಂದ ಆರಂಭವಾಗಲಿರುವ ಪದ್ಮನಾಭ ತೀರ್ಥರ 697ನೇ ಆರಾಧನಾ ಮಹೋತ್ಸವದ, 'ಅಗ್ರಪೂಜೆಯನ್ನು ಉತ್ತರಾದಿ ಮಠದವರು ನಡೆಸಬೇಕು ಮತ್ತು ಉತ್ತರಾರ್ಧದ ಒಂದೂವರೆ ದಿವಸವನ್ನು ರಾಘವೇಂದ್ರ ಸ್ವಾಮಿ ಮಠದವರು ನಡೆಸಬೇಕು' ಎಂದು ನ್ಯಾಯಪೀಠ ಮಧ್ಯಂತರ ಆದೇಶದಲ್ಲಿ ತಿಳಿಸಿದೆ. ಪದ್ಮನಾಭ ತೀರ್ಥರು ಮಧ್ವಾಚಾರ್ಯರ ಮೊದಲನೇ ಶಿಷ್ಯರಾಗಿದ್ದವರು.

ಬೀದರ್: ಅತ್ತ ಪ್ರತಿಭಟನೆ; ಇತ್ತ ಸಮರ್ಥನೆ

ಮಕ್ಕಳಿಗೆ ಮೊಟ್ಟೆ ವಿತರಣೆಗೆ ತಕರಾರು

ಪ್ರಜಾವಾಣಿ ವಾರ್ತೆ

ಬೀದರ್: ಅನುದಾನಿತ, ಸರ್ಕಾರಿ ಶಾಲೆಗಳ 1 ರಿಂದ 8ನೇ ತರಗತಿಯವರೆಗಿನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮೊಟ್ಟೆ ಕೊಡುವ ಸರ್ಕಾರದ ಆದೇಶಕ್ಕೆ ಜಿಲ್ಲೆಯಲ್ಲಿ ಪರ-ವಿರೋಧ ಅಭಿಪ್ರಾಯ ವ್ಯಕ್ತವಾಗಿದೆ.

'ಸರ್ಕಾರವು ಆದೇಶ ಹಿಂಪಡೆಯಬೇಕು' ಎಂದು ಒತ್ತಾಯಿಸಿ ಮಂಗಳವಾರ ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭಾ ಮತ್ತು ಅಕ್ಕನಾಗಲಾಂಬಿಕಾ ಮಹಿಳಾ ಗಣ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

'ಮೊಟ್ಟೆ ಸಸ್ಯಾಹಾರ, ಮಾಂಸಾಹಾರ ಅಲ್ಲ. ಅದು ಪೌಷ್ಟಿಕಾಂಶಗಳಿಂದ ತುಂಬಿದ ದ್ರವ. ಮೊಟ್ಟೆಗೆ ಧರ್ಮ, ಜಾತಿ ಲೇಪನ ಮಾಡಬಾರದು' ಆರ್‌ಪಿಐ, ಭಾರತೀಯ ವಿದ್ಯಾರ್ಥಿ ಸಂಘ ಸೇರಿ ವಿವಿಧ ಸಂಘಟನೆಗಳು ಕೋರಿವೆ.

ಪ್ರತಿಭಟನೆ: 'ಕೋಳಿಮೊಟ್ಟೆಯಿಂದ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತದೆ. ಮಕ್ಕಳಲ್ಲಿ ಪೌಷ್ಟಿಕತೆ ಹೆಚ್ಚಿಸುವ ಕಳಕಳಿ ಇದ್ದರೆ ಹಣ್ಣು, ದ್ವಿದಳ ಧಾನ್ಯಗಳು, ಮೊಳಕೆ ಕಾಳು ಮುಂತಾದವನ್ನು ನೀಡುವ ವ್ಯವಸ್ಥೆ ಮಾಡಬೇಕು' ಎಂದು ಬಸವ ಮಂಟಪದ ಪ್ರಧಾನ ಸಂಚಾಲಕಿ ಮಾತೆ ಸತ್ಯಾದೇವಿ ಒತ್ತಾಯಿಸಿದರು.

ರಾಷ್ಟ್ರೀಯ ಬಸವ ದಳದ ಅಧ್ಯಕ್ಷ ಬಸವರಾಜ ಧನ್ನೂರ ಅವರು, '2007ರಲ್ಲಿ ಸರ್ಕಾರ ಹೋರಾಟಕ್ಕೆ ಮಣಿದು ನಿರ್ಧಾರ ಕೈಬಿಟ್ಟಿತ್ತು.ಈಗ ಮುಖ್ಯಮಂತ್ರಿ ಬೊಮ್ಮಾಯಿ ಅವರು ಈ ನಿರ್ಧಾರ ಕೈಗೊಂಡಿದ್ದು ಸರಿಯಲ್ಲ' ಎಂದರು.

ಸೂಕ್ತ ನಿರ್ಧಾರ: ಆರ್‌ಪಿಐ (ಅಂಬೇಡ್ಕರ್) ಜಿಲ್ಲಾ ಘಟಕದ ಅಧ್ಯಕ್ಷ ಮಹೇಶ ಗೋರನಾಳಕರ್ ಅವರು, 'ಅಂಗನವಾಡಿ ಕೇಂದ್ರಗಳಲ್ಲಿ ಈಗಲೂ ಮೊಟ್ಟೆ ವಿತರಿಸಲಾಗುತ್ತಿದೆ. ಮಾತೃಪೂರ್ಣ ಯೋಜನೆಯಡಿ ಗರ್ಭಿಣಿಯರಿಗೆ ಮೊಟ್ಟೆ ವಿತರಿಸಲಾಗುತ್ತಿದೆ. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಸರ್ಕಾರ ಸೂಕ್ತ ನಿರ್ಣಯ ಕೈಗೊಂಡಿದೆ' ಎಂದಿದ್ದಾರೆ.

ಮುಖ್ಯಾಂಶಗಳು

- ಮೊಟ್ಟೆ ಕೊಡುವ ಸರ್ಕಾರದ ಆದೇಶಕ್ಕೆ ಜಿಲ್ಲೆಯಲ್ಲಿ ಪರ–ವಿರೋಧ ಅಭಿಪ್ರಾಯ
- ಲಿಂಗಾಯತ ಧರ್ಮ ಮಹಾ ಸಭಾ, ಅಕ್ಕನಾಗಲಾಂಬಿಕಾ ಮಹಿಳಾ ಗಣ ವಿರೋಧ
- ಮೊಟ್ಟೆ ಸಸ್ಯಾಹಾರ, ಮಾಂಸಾಹಾರ ಅಲ್ಲ– ವಿದ್ಯಾರ್ಥಿ ಸಂಘ

ಬೆಂಗಳೂರು ಉತ್ತರ ವಿವಿ: ನಿರಂಜನ ವಾನಳ್ಳಿ ಕುಲಪತಿ

ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ಪ್ರೊ.ನಿರಂಜನ ವಾನಳ್ಳಿ ಅವರು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಕಗೊಂಡಿದ್ದಾರೆ.

ರಾಜ್ಯಪಾಲ ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಯೂ ಆಗಿರುವ ಥಾವರಚಂದ್ ಗೆಹಲೋತ್ ಅವರು ಮಂಗಳವಾರ ನೇಮಕಾತಿ ಆದೇಶ ಹೊರಡಿಸಿದ್ದಾರೆ. ಅವರು ಮುಂದಿನ

ನಿರಂಜನ ವಾನಳ್ಳಿ

ನಾಲ್ಕು ವರ್ಷ ಅಥವಾ 67 ವರ್ಷ ವಯೋಮಿತಿ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೂ ಈ ಹುದ್ದೆಯಲ್ಲಿ ಇರಲಿದ್ದಾರೆ. ಉತ್ತರ ಕನ್ನಡ ಜಿಲ್ಲೆಯ ವಾನಳ್ಳಿಯಲ್ಲಿ ಜನಿಸಿದ ನಿರಂಜನ ಅವರು 30ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ.

ಕುಕ್ಕೆ: ಇಂದಿನಿಂದ ಚಂಪಾಷಷ್ಠಿ ಮಹೋತ್ಸವ

ಸುಬ್ರಹ್ಮಣ್ಯ: ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವಾರ್ಷಿಕ ಜಾತ್ರೆ ಚಂಪಾಷಷ್ಠಿ ಮಹೋತ್ಸವ ಡಿ.1ರಿಂದ 15ರವರೆಗೆ ನಡೆಯಲಿದೆ. ಜಾತ್ರೆ ಅಂಗವಾಗಿ ಡಿ.1ರಿಂದ ಡಿ.15ರವರೆಗೆ ಕ್ಷೇತ್ರದಲ್ಲಿ ಸರ್ಪ ಸಂಸ್ಕಾರ ಸೇವೆ ನಡೆಯುವುದಿಲ್ಲ' ಎಂದು ಪ್ರಕಟಣೆ ತಿಳಿಸಿದೆ.

₹1,100 ಕೋಟಿ ಪರಿಹಾರಕ್ಕೆ ಮನವಿ:ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಈಚೆಗೆ ಬಿದ್ದ ಮಳೆಯಿಂದ ಉಂಟಾಗಿರುವ ಹಾನಿಯ ಪರಿಹಾರಕ್ಕಾಗಿ ಕೇಂದ್ರದಿಂದ ₹1,100 ಕೋಟಿ ನೆರವು ಕೇಳಲು ತೀರ್ಮಾನಿಸಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಪರಿಹಾರ ಕೋರಿ ಕೇಂದ್ರಕ್ಕೆ ಸಲ್ಲಿಸಬೇಕಾಗಿರುವ ವರದಿ ತಯಾರಾಗಿದೆ. ಅಲ್ಲದೆ, ಎನ್‌ಡಿಆರ್‌ಎಫ್ ನಿಧಿ ಅಡಿ ಪರಿಹಾರ ಕೇಳಲು ಇನ್ನು 3- 4 ದಿನಗಳಲ್ಲಿ ಮನವಿ ಪತ್ರ ಸಿದ್ಧವಾಗಲಿದೆ ಎಂದು ಮಂಗಳವಾರ ಅವರು ಸುದ್ದಿಗಾರರಿಗೆ ಹೇಳಿದರು.

ರಾಜ್ಯದಲ್ಲಿ ನವೆಂಬರ್‌ನಲ್ಲಿ 142 ಮಿ.ಮೀ ಮಳೆಯಾಗಿದೆ. ವಾಡಿಕೆಗಿಂತ ಶೇ 263 ರಷ್ಟು ಅಧಿಕ ಮಳೆಯಾಗಿದೆ. ವಾಡಿಕೆಯಂತೆ 39 ಮಿ.ಮೀ ಮಳೆ ಆಗಬೇಕಿತ್ತು ಎಂದು ಅವರು ವಿವರಿಸಿದರು.

ಮಳೆಯಿಂದ ಉಂಟಾದ ಬೆಳೆ ಹಾನಿಗೆ ಸಂಬಂಧಿಸಿದಂತೆ ಈವರೆಗೆ ಒಟ್ಟು 4.61 ಲಕ್ಷ ರೈತರಿಗೆ ₹318.87 ಕೋಟಿ ಪರಿಹಾರವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ ಎಂದು ಅಶೋಕ ಹೇಳಿದರು.

ಬೆಳೆ ಹಾನಿಯ ಪರಿಹಾರ ಪಾವತಿಗೆ ಇದೇ ಮೊದಲ ಬಾರಿಗೆ ಹೊಸ ತಂತ್ರಾಂಶದ ಅಳವಡಿಸಿಕೊಳ್ಳಲಾಗಿದೆ. ಇದರಿಂದಾಗಿ ಹಾನಿಗೆ ಸಂಬಂಧಿಸಿದಂತೆ ಮಾಹಿತಿ ನಮೂದಿಸಿದ ಬಳಿಕ ತ್ವರಿತವಾಗಿ ರೈತರ ಖಾತೆಗಳಿಗೇ ನೇರವಾಗಿ ಹಣವನ್ನು ವರ್ಗಾವಣೆ ಮಾಡಲಾಗುತ್ತಿದೆ ಎಂದರು.

ಮಂಗಳವಾರ ಒಂದೇ ದಿನ 1.61 ಲಕ್ಷ ರೈತರಿಗೆ ₹92.30 ಕೋಟಿ ಹಣವನ್ನು ಬಿಡುಗಡೆ ಮಾಡಲಾಗಿದೆ. ರೈತರ ಬ್ಯಾಂಕ್ ಖಾತೆಗಳಿಗೇ ನೇರವಾಗಿ ಹಣ ಜಮೆ ಮಾಡುವುದರಿಂದ, ಮಧ್ಯವರ್ತಿಗಳ ಆಟ ನಡೆಯುವುದಿಲ್ಲ. ಹಿಂದೆ ಮೂರು ತಿಂಗಳಿಗೆ ಒಮ್ಮೆ ಮಾತ್ರ ಪರಿಹಾರ ಹಣ ಬಿಡುಗಡೆ ಮಾಡಲಾಗುತ್ತಿತ್ತು. ಈಗ ಎರಡು– ಮೂರು ದಿನಗಳಿಗೊಮ್ಮೆ ತಂತ್ರಾಂಶದಲ್ಲಿ ನಮೂದಿಸಿ ತಕ್ಷಣವೇ ಪರಿಹಾರ ಬಿಡುಗಡೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ ಎಂದರು.

ಮಳೆಯಿಂದ ಆದ ನಷ್ಟ

ಜೀವಹಾನಿ	26
ಬೆಳೆಹಾನಿ	5.81 ಲಕ್ಷ ಹೆಕ್ಟೇರ್
ಕೆಟ್ಟು ಹೋದ ರಸ್ತೆಗಳು	2,339

(ಪ್ರಾಥಮಿಕ ಮಾಹಿತಿ ಪ್ರಕಾರ)

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.80	6,392	6,828
ಹಾರಂಗಿ	2,859	2,857.36	513	600
ಕಬಿನಿ	2284.00	2,283.74	1,100	700
ಹೇಮಾವತಿ	2,922	2,913.84	1,838	1,040
ಲಿಂಗನಮಕ್ಕಿ	1,819	1,812.50	2,750	-
ಸೂಪಾ (ಮೀ)	564	554.89	164	1,027
ಮಾಣಿ	594	586.48	113	-
ತುಂಗಭದ್ರಾ	1,633	1,632.99	17,912	17,672
ಮಲಪ್ರಭಾ	2079.5	2,077.15	1,344	569
ಘಟಪ್ರಭಾ	2175	2,165.78	179	179
ಭದ್ರಾ	186	185.11	1,212	1,212
ಆಲಮಟ್ಟಿ (ಮೀ)	519.6	518.54	5,800	580
ನಾರಾಯಣಪುರ (ಮೀ)	492.25	492.11	1,885	120

* ನೆಲಮಟ್ಟದಿಂದ

ಮೂರು ತಿಂಗಳ ಬಳಿಕ 'ಮೃತವ್ಯಕ್ತಿ' ಪ್ರತ್ಯಕ್ಷ!

ಕೊಡಿಗೇನಹಳ್ಳಿ (ತುಮಕೂರು): ಮೃತಪಟ್ಟಿದ್ದಾರೆ ಎಂದು ಕುಟುಂಬದವರು ನಂಬಿದ್ದ ವ್ಯಕ್ತಿಯೊಬ್ಬರು ಮೂರು ತಿಂಗಳ ಬಳಿಕ ಮಂಗಳವಾರ ದಿಢೀರ್ ಪ್ರತ್ಯಕ್ಷರಾಗಿ ಎಲ್ಲರಿಗೂ ಅಚ್ಚರಿ ಮೂಡಿಸಿದರು!

ಚಿಕ್ಕಮಾಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪ್ರೇಮಲತಾ ಅವರ ತಂದೆ ನಾಗರಾಜಪ್ಪ (55) ಅವರನ್ನು ಮಾನಸಿಕ ಅಸ್ವಸ್ಥತೆ ಕಾರಣಕ್ಕೆ ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಾಗರಾಜಪ್ಪ ಮೃತಪಟ್ಟಿದ್ದಾರೆ ಎಂದು ಮೂರು ತಿಂಗಳ ಹಿಂದೆ ಆಸ್ಪತ್ರೆಯ ಸಿಬ್ಬಂದಿ ಶವವೊಂದನ್ನು ಕುಟುಂಬಕ್ಕೆ ಹಸ್ತಾಂತರಿಸಿದ್ದರು. ಕುಟುಂಬದವರು ಶವಸಂಸ್ಕಾರವನ್ನೂ ನೆರವೇರಿಸಿದ್ದರು.

ಉದ್ಯೋಗ ವಾಣಿ

PES INSTITUTIONS

ಪಿಇಎಸ್ ಇನ್‌ಸ್ಟಿಟ್ಯೂಷನ್ಸ್

ಹನುಮಂತನಗರ ಕ್ಯಾಂಪಸ್, ಬೆಂಗಳೂರು – 560050

ಪಿಇಎಸ್ ಇನ್‌ಸ್ಟಿಟ್ಯೂಷನ್ಸ್, ಹನುಮಂತನಗರ ಕ್ಯಾಂಪಸ್, ಬೆಂಗಳೂರಿನಲ್ಲಿರುವ ವಿದ್ಯಾರ್ಥಿಗಳ ದ್ವಿಚಕ್ರ ವಾಹನಗಳ ನಿಲುಗಡೆಯನ್ನು (Two Wheeler Parking) ನೋಡಿಕೊಳ್ಳಲು ವೃತ್ತಿನಿರತ ಹಾಗೂ ಅನುಭವವುಳ್ಳವರಿಂದ ಅರ್ಜಿಯನ್ನು ಕರೆಯಲಾಗಿದೆ. ಆಸಕ್ತಿಯುಳ್ಳವರು ತಕ್ಷಣವೇ ತಮ್ಮ ಅರ್ಜಿಗಳನ್ನು ಈ ಕೆಳಕಂಡ ವಿಳಾಸಕ್ಕೆ ಕಳಿಸತಕ್ಕದ್ದು ಅಥವಾ ಖುದ್ದಾಗಿ ಬಂದು ಸಂಪರ್ಕಿಸಬಹುದು.

ಸ್ಥಾಪಕ – ಕಾರ್ಯದರ್ಶಿಗಳು,

ವಿಳಾಸ
ಸ್ಥಾಪಕ – ಕಾರ್ಯದರ್ಶಿಗಳು, ಪಿಇಎಸ್ ಇನ್‌ಸ್ಟಿಟ್ಯೂಷನ್ಸ್,
ಹನುಮಂತನಗರ, ಬಿಎಸ್‌ಕೆ 1ನೇ ಹಂತ, ಬೆಂಗಳೂರು–560050.

ಶಾಸಕ ರಮೇಶ ಸಿ.ಡಿ: ಅಂತಿಮ ವರದಿಗೆ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಸಚಿವ ರಮೇಶ ಜಾರಕಿಹೊಳಿ ಸಿ.ಡಿ ಬಹಿರಂಗ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸಿರುವ ತನಿಖೆಯನ್ನು ಅನುಮೋದಿಸಲಾಗಿದೆ' ಎಂದು ಎಸ್‌ಐಟಿ ಹೈಕೋರ್ಟ್‌ಗೆ ಮಾಹಿತಿ ನೀಡಿದೆ.

ಎಸ್‌ಐಟಿ ರಚನೆಯ ಸಿಂಧುತ್ವ ಪ್ರಶ್ನಿಸಿ ಸಂತ್ರಸ್ತೆ, ವಕೀಲೆ ಗೀತಾ ಮಿಶ್ರಾ ಹಾಗೂ ಇತರರು ಸಲ್ಲಿಸಿರುವ ಪ್ರತ್ಯೇಕ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಎಸ್‌ಐಟಿ ಪರ ಹಾಜರಾಗಿದ್ದ ವಕೀಲ ಪಿ.ಪ್ರಸನ್ನ ಕುಮಾರ್, 'ಎಸ್‌ಐಟಿ ತನಿಖಾ ವರದಿಗೆ ಸೌಮೇಂದು ಮುಖರ್ಜಿ ಅನುಮೋದನೆ ನೀಡಿದ್ದಾರೆ. ವರದಿಗೆ ಒಪ್ಪಿಗೆ ನೀಡಿ 2021ರ ನವೆಂಬರ್ 26ರಂದು ಆರು ಪುಟಗಳ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಹೈಕೋರ್ಟ್‌ಗೆ ಸಲ್ಲಿಸಿದ್ದಾರೆ' ಎಂದು ತಿಳಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ವಿಚಾರಣಾ ನ್ಯಾಯಾಲಯಕ್ಕೆ ತನಿಖಾ ವರದಿ ಸಲ್ಲಿಸಲು ಹೈಕೋರ್ಟ್ ನೀಡಿರುವ ನಿರ್ಬಂಧದ ಆದೇಶವನ್ನು ತೆರವುಗೊಳಿಸಲು ಕೋರಿ ಎಸ್‌ಐಟಿ ಸೂಕ್ತ ಅರ್ಜಿ ಸಲ್ಲಿಸಲಿ. ಅದನ್ನು ಪರಿಶೀಲಿಸಲಾಗುವುದು ಹಾಗೂ ಎಲ್ಲರ ವಾದ ಆಲಿಸಲಾಗುವುದು' ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ಇಂದಿರಾ ಜೈಸಿಂಗ್ ಆಕ್ಷೇಪ: ವಿಚಾರಣೆಗೂ ಮುನ್ನ, ಸಂತ್ರಸ್ತೆ ಪರ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ವಿಚಾರಣಾ ನ್ಯಾಯಾಲಯಕ್ಕೆ ತನಿಖಾ ವರದಿ ಸಲ್ಲಿಸಲು ಅನುಮತಿ ನೀಡುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಎಸ್‌ಐಟಿ ತನಿಖೆ ಸಿಆರ್‌ಪಿಸಿ ನಿಯಮಗಳಿಗೆ ಅನುಸಾರವಾಗಿ ನಡೆದಿಲ್ಲ. ಆರು ತಿಂಗಳ ಹಿಂದೆಯೇ ಎಫ್‌ಐಆರ್ ದಾಖಲಿಸಿದ್ದರೂ ಆರೋಪಿಯನ್ನು ಬಂಧಿಸಿಲ್ಲ. ಇದು ಹಿಂದಿನ ಗೃಹ ಸಚಿವರು ನೇಮಿಸಿದ ಎಸ್‌ಐಟಿ. ಅಷ್ಟಕ್ಕೂ, ಎಸ್‌ಐಟಿ ರಚಿಸುವ ಅಧಿಕಾರ ಗೃಹ ಸಚಿವರಿಗೆ ಇದೆಯೇ ಎಂಬುದೇ ಮೊದಲ ಪ್ರಶ್ನೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಸಿಆರ್‌ಪಿಸಿ ಪ್ರಕಾರ ತನಿಖೆ ಪೂರ್ಣಗೊಂಡಿರುವುದರಿಂದ ಎಸ್‌ಐಟಿಯು ತನ್ನ ವರದಿಯನ್ನು ವಿಚಾರಣಾಧೀನ ನ್ಯಾಯಾಲಯಕ್ಕೆ ಸಲ್ಲಿಸಬೇಕು. ವಿಚಾರಣಾ ನ್ಯಾಯಾಲಯದಲ್ಲಿ ಆರೋಪಿ ಮತ್ತು ದೂರುದಾರರು ಬೇಕಿದ್ದರೆ ಈ ವರದಿಯನ್ನು ಪ್ರಶ್ನಿಸಬಹುದು' ಎಂದು ಹೇಳಿತು.

ಇದನ್ನು ಒಪ್ಪದ ಇಂದಿರಾ ಜೈಸಿಂಗ್, 'ಎಸ್‌ಐಟಿ ರಚನೆಯನ್ನು ವಿಚಾರಣಾ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದಿಲ್ಲ. ಎಸ್‌ಐಟಿ ರಚನೆಯ ಸಾಂವಿಧಾನಿಕ ಸಿಂಧುತ್ವ ನಿರ್ಧಾರವಾಗುವ ತನಕ ವಿಚಾರಣಾಧೀನ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗದು' ಎಂದು ಆಕ್ಷೇಪಿಸಿದರು.

ಆನ್‌ಲೈನ್ ವಿಚಾರಣೆ ವೇಳೆ ಅರೆನಗ್ನ ಸ್ಥಿತಿಯಲ್ಲಿ ಕಾಣಿಸಿಕೊಂಡ ವ್ಯಕ್ತಿಗೆ ನೋಟಿಸ್

ಬೆಂಗಳೂರು: ಮಾಜಿ ಸಚಿವ ರಮೇಶ ಜಾರಕಿಹೊಳಿ ಸಿಡಿ ಪ್ರಕರಣ ಕುರಿತಂತೆ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆಸುತ್ತಿದ್ದ ವಿಚಾರಣೆ ವೇಳೆ ಅರೆನಗ್ನ ಸ್ಥಿತಿಯಲ್ಲಿ ಕಾಣಿಸಿಕೊಂಡ 'ಶ್ರೀಧರ್ ಭಟ್ ಎಸ್‌ಡಿಎಂಸಿ ಉಜಿರೆ' ಎಂಬುವರಿಗೆ ನೋಟಿಸ್ ಜಾರಿಗೊಳಿಸಲು ನ್ಯಾಯಪೀಠ ಆದೇಶಿಸಿದೆ.

ಸಿಡಿ ಪ್ರಕರಣದ ತನಿಖೆಗೆ ಎಸ್‌ಐಟಿ ರಚನೆ ಮಾಡಿದ ಕ್ರಮ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ಬೆಳಗಿನ ಕಲಾಪದಲ್ಲಿ ವಿಚಾರಣೆ ನಡೆಸಿತು. ಈ ವೇಳೆ 'ಶ್ರೀಧರ್ ಭಟ್ ಎಸ್‌ಡಿಎಂಸಿ ಉಜಿರೆ' ಎಂಬ ಹೆಸರಿನಲ್ಲಿ ವರ್ಚುವಲ್ ಮೂಲಕ ವಿಚಾರಣೆಗೆ ಲಾಗಿನ್ ಆಗಿದ್ದ ವ್ಯಕ್ತಿಯೊಬ್ಬರು ಅರೆನಗ್ನ ಸ್ಥಿತಿಯಲ್ಲಿ ಪರದೆ ಮೇಲೆ ಕಾಣಿಸಿಕೊಂಡಿದ್ದರು. ಇದನ್ನು ಸಿಡಿ ಪ್ರಕರಣದ ಸಂತ್ರಸ್ತೆಯ ಪರ ವಾದ ಮಂಡಿಸುತ್ತಿದ್ದ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ನ್ಯಾಯಪೀಠದ ಗಮನಕ್ಕೆ ತಂದರು.

'ಸಿರಿವೆನ್ನೆಲ': ಸಿನಿಮಾ ಸಾಹಿತ್ಯದ ಬೆಳದಿಂಗಳು

ಸಿನಿಮಾ ಸಾಹಿತ್ಯ ಎಂದರೆ ಅರ್ಥವಿಲ್ಲದ ಶಬ್ದಗಳು, ಟ್ಯೂನಿನ ತಾಳಕ್ಕೋ ನಾದಕ್ಕೋ ಬಲವಂತವಾಗಿ ಪೋಣಿಸಿದ ಪದಗಳು ಎಂಬ ಟೀಕೆ ಇದೆ. ಈ ಅಭಿಪ್ರಾಯವನ್ನು ಸುಳ್ಳಾಗಿಸಿ, ಸಿನಿಮಾ ಸಾಹಿತ್ಯಕ್ಕೂ ಶುದ್ಧ ಸಾಹಿತ್ಯಕ್ಕೂ ವ್ಯತ್ಯಾಸ ಇಲ್ಲ ಎಂದು ತಮ್ಮ ಹಾಡುಗಳ ಮೂಲಕ ನಿರೂಪಿಸಿದವರು ತೆಲುಗು ಸಿನಿಮಾ ಗೀತರಚನಕಾರ 'ಸಿರಿವೆನ್ನೆಲ' ಸೀತಾರಾಮ ಶಾಸ್ತ್ರಿ. ಹೀಗೆ ಸಿನಿಮಾ ಹಾಡುಗಳಲ್ಲಿ ಘನವಾದ ಸಾಹಿತ್ಯವನ್ನು ಒದಗಿಸಿದ ದೇವುಲಪಲ್ಲಿ ಕೃಷ್ಣಶಾಸ್ತ್ರಿ, ವೇಟೂರಿ ಸುಂದರ ರಾಮಮೂರ್ತಿ, ಸಿ. ನಾರಾಯಣ ರೆಡ್ಡಿ, ಆತ್ರೇಯ ಇಂಥ ಧೀಮಂತರ ಸಾಲಿಗೆ ಸೇರಿದವರು 'ಸಿರಿವೆನ್ನೆಲ'.

ಕಲಾತಪಸ್ವಿಯೆಂದೇ ಖ್ಯಾತರಾದ ಕೆ. ವಿಶ್ವನಾಥ್ ಅವರ 'ಸಿರಿವೆನ್ನೆಲ' (1986) ಸಿನಿಮಾಕ್ಕೆಂದು ಸೀತಾರಾಮ ಶಾಸ್ತ್ರಿ ಬರೆದ ಹಾಡುಗಳು ಎಷ್ಟು ಜನಪ್ರಿಯವಾಯಿತೆಂದರೆ ಅವರ ಹೆಸರಿನ ಜೊತೆಗೆ ಸಿನಿಮಾ ಹೆಸರೂ ಸೇರಿಕೊಂಡು ಅವರು 'ಸಿರಿವೆನ್ನೆಲ ಸೀತಾರಾಮ ಶಾಸ್ತ್ರಿ' ಎಂದೇ ಪ್ರಸಿದ್ಧರಾದರು. ಈ ಸಿನಿಮಾಕ್ಕೆ ಅವರಿಗೆ 'ನಂದಿ' ಪ್ರಶಸ್ತಿ ಕೂಡ ಸಂದಿತು. ಅವರಿಗೆ ಒಟ್ಟು 11 ನಂದಿ ಪ್ರಶಸ್ತಿ ಬಂದಿರುವುದು ಅವರ ಸಾಹಿತ್ಯದ ಶಕ್ತಿಗೂ ಜನಪ್ರಿಯತೆಗೂ ಸಾಕ್ಷಿಯಾಗಿದೆ. ಕೆ. ವಿಶ್ವನಾಥ್, ಎಸ್.ಪಿ. ಬಾಲಸುಬ್ರಹ್ಮಣ್ಯಂ ಮತ್ತು ಸಿರಿವೆನ್ನೆಲ – ಈ ಮೂವರ ಸಾಂಗತ್ಯ ತೆಲುಗು ಸಿನಿಮಾ ಸಂಗೀತದಲ್ಲಿ ರಸಪ್ರವಾಹವನ್ನೇ ಹರಿಸಿತು.

ಸ್ವರ್ಣಕಮಲಂ, ಶುಭಲಗ್ನಂ, ರುದ್ರವೀಣ, ಶ್ರುತಿಲಯಲು, ಗಾಯಂ, ಗಮ್ಯಂ– ಹೀಗೆ ಹಲವು ಚಿತ್ರಗಳ ಅವರ ಹಾಡುಗಳು ಸಿನಿಮಾ ರಸಿಕರ ಮನಸ್ಸನ್ನು ಆರ್ದ್ರಗೊಳಿಸಿವೆ. 'ಸಿರಿವೆನ್ನೆಲ'ದಲ್ಲಿ ಶಿವನನ್ನು ಕುರಿತು ಅವರು ಬರೆದಿರುವ ನಿಂದಾಸ್ತುತಿಯೊಂದು ಸೀತಾರಾಮಶಾಸ್ತ್ರಿಗಳ ಕವಿತಾಶಕ್ತಿಗೆ ಶ್ರೇಷ್ಠ ಉದಾಹರಣೆಯಾಗಿದೆ. 'ಶಿವನೇ ಜಗತ್ತಿನ ಮೊದಲ ಭಿಕ್ಷುಕ; ಅಂಥವನನ್ನು ನಾವು ಯಾವ ವರ ಕೇಳುವುದು?' ಹೀಗೆ ಆರಂಭವಾಗುವ ಹಾಡಿನಲ್ಲಿ ಶಿವನ ಸೃಷ್ಟಿಯ ವೈರುಧ್ಯಗಳನ್ನು ವಿವರಿಸುತ್ತ, ಅವನ ಲೀಲೆಯನ್ನು ಅರ್ಥಮಾಡಿಕೊಳ್ಳುವುದು ಸುಲಭವಲ್ಲ ಎಂದು ಧ್ವನಿಪೂರ್ಣವಾಗಿ ರಚಿಸಿರುವ ಆ ಹಾಡು ಅಪೂರ್ವ ಕಾವ್ಯಗುಣವನ್ನು ಹೊಂದಿದೆ. ಶೃಂಗಾರ, ಭಕ್ತಿ, ಶೋಕ, ಹಾಸ್ಯ, ಜೀವನೋತ್ಸಾಹ, ಸಾಮಾಜಿಕ ಕಾಳಜಿ – ಹೀಗೆ ಎಲ್ಲ ರಸ-ಭಾವಗಳಲ್ಲಿ ಸುಮಾರು ಮೂರು ಸಾವಿರಕ್ಕೂ ಹೆಚ್ಚು ಅರ್ಥಗರ್ಭಿತ ಗೀತೆಗಳನ್ನು ರಚಿಸಿರುವ 'ಸಿರಿವೆನ್ನೆಲ' ತೆಲುಗು ಸಿನಿಮಾ ಸಾಹಿತ್ಯದ ಶ್ರೇಷ್ಠ ಕವಿ.

ತೆಲುಗು ಚಿತ್ರ ಗೀತರಚನೆಕಾರ ಸೀತಾರಾಮ ಶಾಸ್ತ್ರಿ ನಿಧನ

ಹೈದರಾಬಾದ್ (ಪಿಟಿಐ): ತೆಲುಗು ಚಿತ್ರರಂಗದ ಪ್ರಸಿದ್ಧ ಗೀತರಚನೆಕಾರ, ಪದ್ಮಶ್ರೀ ಪುರಸ್ಕೃತ 'ಸಿರಿವೆನ್ನೆಲ' ಸೀತಾರಾಮ ಶಾಸ್ತ್ರಿ (66) ಅವರು ಶ್ವಾಸಕೋಶ ಕ್ಯಾನ್ಸರ್ ಸಂಬಂಧಿ ತೊಂದರೆಗಳಿಂದ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ನಿಧನರಾದರು.

ನ್ಯುಮೋನಿಯಾದಿಂದ ಬಳಲುತ್ತಿದ್ದ ಅವರನ್ನು ನ.24ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು.

TNPL TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu
Ph: 04324-277001 (10 Lines). Email: purchase.recycle@tnpl.co.in

NOTICE INVITING TENDER

Tender No.	Material Description	Due date
212223 001931	Procurement of 250 ± 5% MT Old News Paper (English + Language) from Karnataka for TNPL Unit - 2, Manaparai, Trichy District.	09.12.2021

Detailed Terms & conditions, Tender fee, EMD etc., are available in tender document at our websites: www.tnpl.com / www.tenders.tn.gov.in

DIPR/3731/Tender/2021 TNPL - Maker of bagasse based eco-friendly Paper

"சோதனை கடந்து சுதந்திரம் அடைந்தோம், சாதனை புரிந்து சரித்திரம் படைப்போம்."

II Om Sri Manjunathaya Namaha II
Shri Dharmasthala Manjunatheshwara Educational Society (R), Ujire
President: Dr. D. Veerendra Heggade

APPOINTMENTS

Applications are invited for the following posts at **SDM Institute of Technology, Ujire.**

POSTS	QUALIFICATION
Professors/ Associate/ Asst. Professors in Computer Science/ Information Science	Qualification and experience as per AICTE norms.
Professors/ Associate Professors in Electronics & Communication Engg.	
Asst. Prof. in English (M.A in English)	

Interested candidates may send their resume with a recent passport size photo within 5 days from the date of this notification to: Principal, SDM Institute of Technology, Ujire – 574 240 or email to: office@sdmit.in

SECRETARY

Discover your true potential with Club Mahindra

ClubMahindra

Mahindra Holidays & Resorts India Ltd. is a leading name in the Indian Leisure and Hospitality sector, is a part of the globally renowned Mahindra Group.

We are looking for:
- **Relationship Manager (10 Nos.)**, with 1 to 5 years of experience
  Education: Graduate & above.
- **Team Manager (4 Nos.)**, with 6+ years of experience.
  Education: Graduate & above.

Requirement : Very good command on English and Kannada. Past sales experience. (Preferably Direct Sales)
Location : Bengaluru

Interested candidates, please call at **91485 91006** or share your details at **priyanka.sh@mahindraholidays.com**

❦ ಸುಭಾಷಿತ ❦

ಪ್ರೇಮ ಮತ್ತು ದಯೆ ಮೂಲಕ ಇತರರ ಹೃದಯಗಳನ್ನು ಗೆಲ್ಲಿರಿ. ಅದೇ ನಿಜವಾದ ಗೆಲುವು.

-ಶಿವಾನಂದ ಸರಸ್ವತಿ

ಅಭಿವ್ಯಕ್ತಿ ಸ್ವಾತಂತ್ರ್ಯ ನಲುಗದಿರಲಿ ಸಂವಾದ– ಭಿನ್ನಮತಕ್ಕೆ ವಿರೋಧ ಸಲ್ಲ

ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಯಾಗಬಹುದೆನ್ನುವ ಬೆಂಗಳೂರು ಪೊಲೀಸರ ಊಹೆಯ ಆಧಾರದ ಮೇಲೆ ಮುನವ್ವರ್ ಫಾರೂಕಿ ಅವರ ಸ್ಟ್ಯಾಂಡ್ ಅಪ್ ಕಾಮಿಡಿ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ. ಉದ್ದೇಶಿತ ಈ ಕಾರ್ಯಕ್ರಮ ರದ್ದಾಗಲು ಕಾರಣವಾಗಿರುವ ಪೊಲೀಸರ ನಡವಳಿಕೆಯೇ ಒಂದು ಪ್ರಹಸನದಂತಿದೆ. ಶಾಂತಿ–ಸೌಹಾರ್ದಕ್ಕೆ ಧಕ್ಕೆಯುಂಟಾಗುವ ಆತಂಕ ಎದುರಾದಾಗ ರಕ್ಷಣೆ ನೀಡಬೇಕಾದ ಪೊಲೀಸರು, ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡಿರುವುದರ ಹಿಂದೆ ಹೊಣೆಗೇಡಿತನ ಹಾಗೂ ರಾಜಕೀಯ ಪೂರ್ವಗ್ರಹ ಸ್ಪಷ್ಟವಾಗಿದೆ. ಸಾರ್ವಜನಿಕ ಸೌಹಾರ್ದಕ್ಕೆ ಯಾರಿಂದಲಾದರೂ ಭಂಗ ಉಂಟಾಗಬಹುದು ಎನ್ನುವ ಅನುಮಾನ ಉಂಟಾದಾಗ, ಆತಂಕಕ್ಕೆ ಕಾರಣ ಆಗುವವರ ಮೇಲೆ ಪೊಲೀಸರು ಕ್ರಮ ಕೈಗೊಳ್ಳಬೇಕು. ಸಾಂವಿಧಾನಿಕ ಕರ್ತವ್ಯವನ್ನು ನಿರ್ವಹಿಸುವ ಬದಲು, ಸಂವಿಧಾನವೇ ಕಲ್ಪಿಸಿರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸವನ್ನು ಪರೋಕ್ಷವಾಗಿ ಮಾಡಲು ಪೊಲೀಸ್ ಇಲಾಖೆಗೆ ಹೆಚ್ಚು ಉತ್ಸಾಹ ಇದ್ದಂತೆ ತೋರುತ್ತದೆ. ಬೆಂಗಳೂರು ಕಾರ್ಯಕ್ರಮ ರದ್ದಾಗಿರುವುದರ ಬಗ್ಗೆ, 'ದ್ವೇಷ ಗೆದ್ದಿದೆ. ಕಲಾವಿದ ಸೋತಿದ್ದಾನೆ' ಎಂದು ಮುನವ್ವರ್ ಟ್ವೀಟ್ ಮಾಡಿದ್ದಾರೆ. ಅವರ ಮಾತಿನ ಜೊತೆಗೆ, ಬೆಂಗಳೂರು ಪೊಲೀಸರು ತಮ್ಮ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ ಎನ್ನುವ ಮಾತನ್ನೂ ವಿಷಾದದಿಂದ ಸೇರಿಸಬೇಕಾಗಿದೆ. ನಿರ್ದಿಷ್ಟ ವ್ಯಕ್ತಿ ಅಥವಾ ಕಾರ್ಯಕ್ರಮದಿಂದ ಧಾರ್ಮಿಕ ಭಾವನೆಗಳಿಗೆ ಗಾಸಿಯಾಗುತ್ತದೆ ಎನ್ನುವುದನ್ನು ನಿರ್ಧರಿಸುವುದು ಯಾವುದೋ ಸಂಘಟನೆ ಅಥವಾ ಪೊಲೀಸರಿಗೆ ಸೇರಿದ ಕೆಲಸವಲ್ಲ. ನ್ಯಾಯಾಲಯಗಳಿಗೆ ಸಂಬಂಧಿಸಿದ ಹೊಣೆಗಾರಿಕೆಯನ್ನು ಇತರರು ಮಾಡಲು ಹೊರಡುವುದು ಕಾನೂನು ಉಲ್ಲಂಘನೆಯೇ ಆಗುತ್ತದೆ.

ಆರೋಗ್ಯಕರ ಸಮಾಜದಲ್ಲಿ ವಿಮರ್ಶೆ, ಟೀಕೆ, ಭಿನ್ನಾಭಿಪ್ರಾಯಕ್ಕೆ ಮುಕ್ತ ಅವಕಾಶ ಇರಬೇಕು. ವಿನೋದಪ್ರಜ್ಞೆ, ಸಂವಾದಗಳಿಗೆ ಅವಕಾಶವಿಲ್ಲದ ಸಮಾಜ ಕೊಳೆಯತೊಡಗುತ್ತದೆ

'ಡೊಂಗ್ರಿ ಟು ನೋವೇರ್' ಹೆಸರಿನಲ್ಲಿ ನಡೆಯಬೇಕಾಗಿದ್ದ ಮುನವ್ವರ್ ಅವರ ಕಾರ್ಯಕ್ರಮದ ಟಿಕೆಟ್‌ಗಳನ್ನು 600 ಮಂದಿ ಕಾಯ್ದಿರಿಸಿದ್ದರು. 'ಮುನವ್ವರ್ ಅವರು ಹಿಂದೂ ವಿರೋಧಿ ಆಗಿದ್ದಾರೆ. ಅವರ ಕಾರ್ಯಕ್ರಮಕ್ಕೆ ಅವಕಾಶ ಮಾಡಿಕೊಡಬಾರದು' ಎಂದು ಹಿಂದೂ ಜನಜಾಗೃತಿ ಸಮಿತಿ ಸದಸ್ಯರು ಬೆಂಗಳೂರು ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ್ದರು. ಆ ದೂರಿನ ಅನ್ವಯ ಕಾರ್ಯಕ್ರಮದ ಆಯೋಜಕರಿಗೆ ನೋಟಿಸ್ ನೀಡಿದ್ದ ಪೊಲೀಸರು, ಉದ್ದೇಶಿತ ಈ ಕಾರ್ಯಕ್ರಮದಿಂದ ಕಾನೂನು, ಸುವ್ಯವಸ್ಥೆಗೆ ಧಕ್ಕೆ ಆಗಬಹುದು ಎಂಬ ಕಾರಣ ಮುಂದೊಡ್ಡಿ ರದ್ದುಪಡಿಸುವಂತೆ 'ಸಲಹೆ' ಮಾಡಿದ್ದರು. ಈ ಸಲಹೆಯನ್ನು ನಿರ್ಲಕ್ಷಿಸುವ ಧೈರ್ಯ ತೋರಲಾರದೆ ಆಯೋಜಕರು ಕಾರ್ಯಕ್ರಮವನ್ನು ರದ್ದುಪಡಿಸಿದರು. 'ನಿಯಮಾನುಸಾರ ಅನುಮತಿ ಪಡೆದು ಕಾರ್ಯಕ್ರಮ ಆಯೋಜಿಸಿದ್ದರೂ ಪೊಲೀಸರು ಏಕಾಏಕಿ ನೋಟಿಸ್ ನೀಡಿದ್ದಾರೆ. ಅನಗತ್ಯ ಗೊಂದಲ ಬೇಡವೆಂದು ಕಾರ್ಯಕ್ರಮ ರದ್ದುಪಡಿಸಿದ್ದೇವೆ' ಎಂದು ಆಯೋಜಕರು ಹೇಳಿದ್ದಾರೆ. 'ಕಾರ್ಯಕ್ರಮವನ್ನು ರದ್ದುಪಡಿಸಿರುವುದು ನ್ಯಾಯಸಮ್ಮತವಲ್ಲ. ದಿಢೀರ್ ರದ್ದುಪಡಿಸಿರುವುದರ ಹಿಂದೆ ಯಾರದೋ ಬೆದರಿಕೆ ಇರುವಂತಿದೆ' ಎಂದು ಮುನವ್ವರ್ ಪ್ರತಿಕ್ರಿಯಿಸಿದ್ದಾರೆ. ಬಲಪಂಥೀಯ ಸಂಘಟನೆಗಳ ವಿರೋಧವನ್ನು ಮುನವ್ವರ್ ಒಂದು ವರ್ಷದಿಂದ ನಿರಂತರವಾಗಿ ಎದುರಿಸುತ್ತಿದ್ದಾರೆ. ಹಿಂದೂ ದೇವರುಗಳಿಗೆ ಅವಹೇಳನ ಮಾಡಿದ ಆರೋಪದ ಮೇರೆಗೆ ಮಧ್ಯಪ್ರದೇಶ ಪೊಲೀಸರಿಂದ ಬಂಧನಕ್ಕೊಳಗಾಗಿ, 37 ದಿನಗಳ ಕಾಲ ಜೈಲಿನಲ್ಲಿದ್ದರು. ಹಿಂದುತ್ವ ಸಂಘಟನೆಗಳ ದೂರಿನ ಆಧಾರದ ಮೇಲೆ ಬಂಧನಕ್ಕೊಳಗಾಗಿದ್ದ ಮುನವ್ವರ್ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದೆ. ಮಧ್ಯಪ್ರದೇಶದ ಘಟನೆಯ ನಂತರ ಅವರು ದೇಶದಲ್ಲಿ ಮತ್ತೆಲ್ಲೂ ಪ್ರದರ್ಶನ ನೀಡದಂತೆ ಮಾಡುವ ಪ್ರಯತ್ನಗಳು ನಡೆದಿವೆ. ಕೆಲವರ ಬೆದರಿಕೆಗಳಿಂದಾಗಿ ಎರಡು ತಿಂಗಳ ಅವಧಿಯಲ್ಲಿ ಹನ್ನೆರಡು ಕಾರ್ಯಕ್ರಮಗಳು ರದ್ದಾಗಿವೆ ಎಂದು ಮುನವ್ವರ್ ಹೇಳಿದ್ದಾರೆ. ಇವೆಲ್ಲ ಬೆಳವಣಿಗೆಗಳು, ಭಿನ್ನಾಭಿಪ್ರಾಯಗಳನ್ನು ಹೊಂದಿರುವವರು ಹಾಗೂ ವಿಮರ್ಶಕರನ್ನು ಹತ್ತಿಕ್ಕುವ ಪ್ರಯತ್ನಗಳು ದೇಶದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿರುವುದಕ್ಕೆ ಉದಾಹರಣೆಯಾಗಿವೆ. ಭಿನ್ನಮತ ಹೊಂದಿರುವವರು ಮುಸ್ಲಿಂ ಆಗಿದ್ದರಂತೂ ಅವರನ್ನು ಕುಗ್ಗಿಸುವ ಎಲ್ಲ ಪ್ರಯತ್ನಗಳೂ ನಡೆಯುತ್ತಿವೆ. ಆರೋಗ್ಯಕರ ಸಮಾಜದಲ್ಲಿ ವಿಮರ್ಶೆಗೆ, ಟೀಕೆಗೆ, ಭಿನ್ನಾಭಿಪ್ರಾಯಕ್ಕೆ ಮುಕ್ತ ಅವಕಾಶ ಇರಬೇಕು. ವಿನೋದಪ್ರಜ್ಞೆ, ಸಂವಾದಗಳಿಗೆ ಅವಕಾಶವಿಲ್ಲದ ಸಮಾಜ ಕೊಳೆಯತೊಡಗುತ್ತದೆ.

ಪ್ರಸಿದ್ಧ ಸ್ಟ್ಯಾಂಡ್ ಅಪ್ ಕಮಿಡಿಯನ್ ವೀರ್ ದಾಸ್ ಅವರು ಕೂಡ ಇತ್ತೀಚೆಗೆ ಹಿಂದುತ್ವವಾದಿಗಳ ವಿರೋಧ ಎದುರಿಸಿದ್ದರು. ಅವರು ಅಮೆರಿಕದಲ್ಲಿ ನೀಡಿದ ಕಾರ್ಯಕ್ರಮದಲ್ಲಿ 'ಎರಡು ರೀತಿಯ ಭಾರತ'ಗಳ ಅಸ್ತಿತ್ವದ ಬಗ್ಗೆ ಮಾರ್ಮಿಕವಾಗಿ ಮಾತನಾಡಿದ್ದಕ್ಕೆ ವಿರೋಧ ವ್ಯಕ್ತವಾಗಿತ್ತು. ರೈತರ ಹೋರಾಟ, ಅತ್ಯಾಚಾರ ಪ್ರಕರಣಗಳು, ಕೊರೊನಾ ವಿರುದ್ಧದ ಹೋರಾಟ ಸೇರಿದಂತೆ ಪ್ರಚಲಿತ ವಿದ್ಯಮಾನಗಳ ಬಗ್ಗೆ ಭಾರತದಲ್ಲಿ ವಿರೋಧಾಭಾಸದ ಮನಃಸ್ಥಿತಿ ಇದೆ ಎಂದು ವಿಡಂಬಿಸಿದ್ದರು. ಇಂಥ ಕಲಾವಿದರಿಗೆ ಎದುರಾಗುವ ವಿರೋಧಗಳು ಸಮಾಜದಲ್ಲಿ ಬೆಳೆಯುತ್ತಿರುವ ಅಸಹನೆಯನ್ನು ವಿಶ್ವದ ಎದುರು ಅನಾವರಣಗೊಳಿಸುತ್ತವೆಯೇ ಹೊರತು, ರಚನಾತ್ಮಕ ಬೆಳವಣಿಗೆಗೆ ಯಾವುದೇ ಕೊಡುಗೆ ನೀಡುವುದಿಲ್ಲ. ಸಮಾಜವನ್ನು ಒಡೆಯುವ ಹಾಗೂ ಭಾರತದ ಬಹುತ್ವಕ್ಕೆ ಧಕ್ಕೆಯುಂಟು ಮಾಡುವ ಕೊಳಕು ಮಾತುಗಳನ್ನು ರಾಜಕಾರಣಿಗಳು ನಿರಂತರವಾಗಿ ಆಡುತ್ತಲೇ ಇದ್ದಾರೆ. ಸರ್ಕಾರದ ಭಾಗವಾಗಿ ಇರುವವರೇ ತಮ್ಮನ್ನು ನಿರ್ದಿಷ್ಟ ಕೋಮಿನೊಂದಿಗೆ ಗುರುತಿಸಿಕೊಳ್ಳಲು ಹಿಂಜರಿಯುತ್ತಿಲ್ಲ. ಅಧಿಕಾರದಲ್ಲಿ ಇರುವವರ ಒಡಕು ಮಾತು–ನಡವಳಿಕೆಗಳ ಬಗ್ಗೆ ಮೂಕಪ್ರೇಕ್ಷಕನಂತಿರುವ ವ್ಯವಸ್ಥೆ, ಕಲಾವಿದರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಹಾಕಲು ಪ್ರಯತ್ನಿಸುತ್ತಿರುವುದು ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾದುದು. ಆರೋಗ್ಯಕರ ಸಮಾಜಕ್ಕಾಗಿ ಹಂಬಲಿಸುವವರು ಹಾಗೂ ಪ್ರಜಾಪ್ರಭುತ್ವದ ಬಗ್ಗೆ ಕಾಳಜಿಯುಳ್ಳವರು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನಗಳನ್ನು ಗಂಭೀರವಾಗಿ ಪರಿಗಣಿಸಬೇಕು. ಸಂವಿಧಾನದ ಆಶಯಗಳಿಗೆ ವಿರುದ್ಧವಾದ ಯಾವುದೇ ಮಾತು–ಕೃತಿಯ ವಿರುದ್ಧ ಕ್ರಮ ಕೈಗೊಳ್ಳುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು. ಮುನವ್ವರ್ ಅವರ ಕಾರ್ಯಕ್ರಮದ ಬಗ್ಗೆ ಪೂರ್ವಗ್ರಹದಿಂದ ನಡೆದುಕೊಂಡಿರುವ ಪೊಲೀಸ್ ಅಧಿಕಾರಿಗಳ ಮೇಲೆಯೂ ಕ್ರಮ ಜರುಗಿಸಬೇಕು.

ದಿನದ ಟ್ವೀಟ್

ತ್ಯಾಗದ ಫಲ

ಪರಾಗ್ ಅಗರ್‌ವಾಲ್ ಅವರು ಟ್ವಿಟರ್ ಸಿಇಒ ಆಗಿರುವುದು, ಭಾರತೀಯರು ಹಲವಾರು ಬಹುರಾಷ್ಟ್ರೀಯ ಕಂಪನಿಗಳ ಮುಖ್ಯಸ್ಥರಾಗಿ ಆಯ್ಕೆಯಾಗುತ್ತಿರುವುದಕ್ಕೆ ಶಿಕ್ಷಣ, ಬುದ್ಧಿವಂತಿಕೆ, ಕೆಲಸದಲ್ಲಿನ ತತ್ವಾದರ್ಶ ಇತ್ಯಾದಿ ಕಾರಣ ಎಂದೆಲ್ಲ ವಿಶ್ಲೇಷಿಸಲು ಅನುವು ಮಾಡಿದೆ. ಆದರೆ ಇಂತಹ ಯಶಸ್ಸಿನ ಹಿಂದಿರುವ ಒಂದು ಮಹಾನ್‌ಶಕ್ತಿಯನ್ನು ನಾವು ಪ್ರಸ್ತಾಪಿಸುವುದೇ ಇಲ್ಲ– ಅದೆಂದರೆ, ತಮ್ಮ ಮಕ್ಕಳಿಗಾಗಿ ಸ್ವಂತ ಕನಸುಗಳನ್ನೇ ತ್ಯಾಗ ಮಾಡುವ ಮಧ್ಯಮ ವರ್ಗದ ಭಾರತೀಯ ಪೋಷಕರು.

ಗೌರವ್ ಆರ್ಯ, ನಿವೃತ್ತ ಮೇಜರ್, ಪತ್ರಕರ್ತ

ಕಿಡಿನುಡಿ

'ಆಯುಷ್ಮಾನ್ ಭಾರತ್' ವಿಮೆಯನ್ನು ಜಗತ್ತಿನ ಅತಿದೊಡ್ಡ ಆರೋಗ್ಯ ರಕ್ಷಾಕವಚ ಎಂದು ಬಿಜೆಪಿ ಸರ್ಕಾರ ಮೀಸೆ ತಿರುವುತ್ತಿದೆ. ಕೋವಿಡ್ ಚಿಕಿತ್ಸೆ ಪಡೆಯಲು ಈ ವಿಮೆ ನೆರವಾಗಿಲ್ಲ, ಚಿಕಿತ್ಸೆಗೆ ಭರಿಸಿದ ಹಣ ವಾಪಸ್ ಬರಲಿಲ್ಲ, ಸಾಂಕ್ರಾಮಿಕದ ಸಂದರ್ಭದಲ್ಲಿ ಇದರಿಂದಾದ ಉಪಯೋಗವಾದ್ರೂ ಏನು? ಇದೊಂಥರಾ ಊಟಕ್ಕಿಲ್ಲದ ಉಪ್ಪಿನಕಾಯಂತೆ.

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 1-12-1996

• ಭಿನ್ನಮತ ಗುರುತಿಸಲು ಪಟೇಲ್ ನಿರಾಕರಣೆ

ನವದೆಹಲಿ, ನ. 30 (ಯುಎನ್‌ಐ)– ಕರ್ನಾಟಕದ ಆಡಳಿತ ಜನತಾದಳದಲ್ಲಿ ಭಿನ್ನಮತ ಇದೆ ಎಂಬುದನ್ನು ಒಪ್ಪಲು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಸಿದ್ಧರಿರಲಿಲ್ಲ.

ಜನತಾದಳದ ಸೂರಜ್‌ಕುಂಡ್ ಶಿಬಿರದಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಆಗಮಿಸಿರುವ ಪಟೇಲ್, 'ಅವರಿಗೆ ಮಾನ್ಯತೆ ನೀಡಲು ತಿರಸ್ಕರಿಸುತ್ತೇನೆ' ಎಂದರು.

ನಾಯಕತ್ವದ ಬಗ್ಗೆ ಭಿನ್ನಮತೀಯರು ದೂರುತ್ತಿರುವ ಪತ್ರಿಕಾ ವರದಿಗಳನ್ನು ಪಕ್ಷದ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ದೃಢಪಡಿಸಿರುವ ಬಗ್ಗೆಯೂ ಪ್ರತಿಕ್ರಿಯೆ ನೀಡಲು ಅವರು ನಿರಾಕರಿಸಿದರು.

50 ವರ್ಷಗಳ ಹಿಂದೆ

ಬುಧವಾರ, 1-12-1971

• ವಾಪಸಾಗಬೇಕಾದದ್ದು ಪಾಕ್ ಪಡೆಯೇ ವಿನಾ ಭಾರತದ್ದಲ್ಲ: ಇಂದಿರಾ

ನವದೆಹಲಿ, ನ. 30– ಗಡಿ ಪ್ರದೇಶಗಳಿಂದ ಭಾರತದ ಪಡೆಗಳನ್ನು ವಾಪಸ್ ಕರೆಸಿಕೊಳ್ಳುವ ಸಾಧ್ಯತೆಯನ್ನು ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಅವರು ರಾಜ್ಯಸಭೆಯಲ್ಲಿ ಇಂದು ಖಚಿತವಾಗಿ ತಳ್ಳಿಹಾಕಿದರು.

'ವಾಪಸಾಗಬೇಕಾಗಿರುವುದು ಬಾಂಗ್ಲಾ ದೇಶದಿಂದ ಪಾಕಿಸ್ತಾನಿ ಪಡೆಗಳು' ಎಂದು ಅವರು ಹರ್ಷೋದ್ಗಾರಗಳ ಮಧ್ಯೆ ನುಡಿದರು. 'ಪಾಕಿಸ್ತಾನದ ಪಡೆಗಳು ಬಾಂಗ್ಲಾ ದೇಶದಲ್ಲಿ ಇರುವುದರಿಂದ ಭಾರತದ ರಕ್ಷಣೆಗೆ ಅವು ಬೆದರಿಕೆ ಒಡ್ಡಿವೆ' ಎಂದರು.

ಪ್ರಧಾನಿ ಕಾರ್ಯಾಲಯದ ಪ್ರಧಾನ ಕಾರ್ಯದರ್ಶಿಯಾಗಿದ್ದ ಹಕ್ಸರ್ ಅವರನ್ನು ಸ್ಮರಿಸಲು ಹತ್ತಾರು ಕಾರಣಗಳಿವೆ

ಇಂದಿರಾ ಬೆನ್ನಿಗಿದ್ದ 'ಚಾಣಕ್ಯ'



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಬಾಂಗ್ಲಾ ವಿಮೋಚನಾ ಯುದ್ಧಕ್ಕೆ 50 ತುಂಬಿರುವ ಈ ಸಂದರ್ಭದಲ್ಲಿ, ಅಂದು ಭಾರತದ ನೇತೃತ್ವ ವಹಿಸಿದ್ದ ಪ್ರಧಾನಿ ಇಂದಿರಾ ಗಾಂಧಿ ಅವರನ್ನು ಮತ್ತು ಸೇನೆಯ ನಾಯಕತ್ವ ವಹಿಸಿದ್ದ ಮಾಣೆಕ್ ಷಾ ಅವರನ್ನು ಸಹಜವಾಗಿಯೇ ನೆನಪು ಮಾಡಿಕೊಳ್ಳಲಾಗುತ್ತಿದೆ. ಆದರೆ ನೆನೆಯಲೇಬೇಕಾದ ಮತ್ತೊಂದು ಹೆಸರಿದೆ. ಅದು ಪರಮೇಶ್ವರ ನಾರಾಯಣ ಹಕ್ಸರ್.

ಇಪ್ಪತ್ತು ವರ್ಷಗಳ ಕಾಲ ಭಾರತೀಯ ವಿದೇಶಾಂಗ ಸೇವೆಯಲ್ಲಿ ಕಾರ್ಯನಿರ್ವಹಿಸಿದ ಹಕ್ಸರ್, 1967ರಲ್ಲಿ ಪ್ರಧಾನಮಂತ್ರಿ ಕಾರ್ಯಾಲಯದ ಕಾರ್ಯದರ್ಶಿಯಾಗಿ ನೇಮಕವಾದವರು. ತಂದೆಯ ಒಡನಾಟದಲ್ಲಿ ರಾಜಕೀಯ ಪಟ್ಟುಗಳನ್ನು ಇಂದಿರಾ ಕಲಿತಿದ್ದರಾದರೂ ಆಡಳಿತಾತ್ಮಕವಾಗಿ ಅವರನ್ನು ಸಜ್ಜುಗೊಳಿಸಿದವರು ಪಿ.ಎನ್.ಹಕ್ಸರ್. ಬಳಿಕ ಪ್ರಧಾನ ಕಾರ್ಯದರ್ಶಿಯಾಗಿ ಅವರು ಆ ಹುದ್ದೆಯಲ್ಲಿದ್ದಷ್ಟು ಕಾಲ ಇಂದಿರಾ ಅವರ ಛಾಯೆಯಂತೆ ಇದ್ದರು. ಬಾಂಗ್ಲಾ ವಿಮೋಚನಾ ಯುದ್ಧದ ಸಂದರ್ಭದಲ್ಲಿ ಇಂದಿರಾ ಅವರ ಬೆನ್ನಿಗೆ ನಿಂತು ಕಾರ್ಯತಂತ್ರ ಹೆಣೆದರು. ಇಡಬೇಕಾದ ಹೆಜ್ಜೆ ಹಾಗೂ ಮಾಡಬಾರದ ತಪ್ಪುಗಳ ಬಗ್ಗೆ ಪ್ರಧಾನಿಯನ್ನು ಎಚ್ಚರಿಸಿದರು. ಯಾವುದೇ ನಿರ್ಧಾರ ತೆಗೆದುಕೊಳ್ಳುವ ಮೊದಲು ಹಕ್ಸರ್ ಅವರತ್ತ ಇಂದಿರಾ ನೋಡುತ್ತಿದ್ದರು.

ಬಾಂಗ್ಲಾ ಬಿಕ್ಕಟ್ಟಿನ ತೀವ್ರತೆ ಅರಿತಿದ್ದ ಹಕ್ಸರ್, ಬಾಂಗ್ಲಾ ದೇಶವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಗುರುತಿಸುವುದರ ಸಾಧಕ ಬಾಧಕಗಳನ್ನು ಅಂದಾಜಿಸಲು 1971ರ ಮಾರ್ಚ್ 2ರಂದು ಐದು ಜನರ ಸಮಿತಿಯೊಂದನ್ನು ನೇಮಿಸಿದ್ದರು. ಆಗಿನ್ನೂ ಬಿಕ್ಕಟ್ಟು ತೀವ್ರತೆ ಪಡೆದುಕೊಂಡಿರಲಿಲ್ಲ. ಮಾರ್ಚ್ 25ರಂದು ಪಾಕಿಸ್ತಾನದ ಸೇನೆ ಪೂರ್ವ ಪಾಕಿಸ್ತಾನೀಯರ ಮೇಲೆರಗಿತು. ಜನಾಂಗೀಯ ಹತ್ಯೆ ನಡೆಯಿತು. ವಲಸೆ ಸಮಸ್ಯೆಯನ್ನು ಭಾರತ ಎದುರಿಸಬೇಕಾಯಿತು. ಕೂಡಲೇ ಭಾರತ ಮಧ್ಯಪ್ರವೇಶಿಸಬೇಕು ಮತ್ತು ಸೇನಾ ಕಾರ್ಯಾಚರಣೆ ನಡೆಸಬೇಕು ಎಂದು ವಿರೋಧ ಪಕ್ಷಗಳು ಒತ್ತಾಯಿಸಿದವು.

ಆದರೆ ಮತ್ತೊಂದು ರಾಷ್ಟ್ರದ ವಿಷಯದಲ್ಲಿ ಮಧ್ಯಪ್ರವೇಶಿಸಬೇಕಾದರೆ ರಾಜಕೀಯ, ಸೇನೆ ಮತ್ತು ರಾಜತಾಂತ್ರಿಕ ಸಿದ್ಧತೆ ಅತ್ಯಗತ್ಯ ಎಂಬುದು ಹಕ್ಸರ್ ನಿಲುವಾಗಿತ್ತು. ಸೇನಾ ಕ್ರಮಕ್ಕೆ ಮುಂದಾದರೆ, ಅದನ್ನು ಜಗತ್ತು ಭಾರತ– ಪಾಕಿಸ್ತಾನದ ನಡುವಿನ ಬಿಕ್ಕಟ್ಟು ಎಂದು ನೋಡುತ್ತದೆ. ಅಂತರರಾಷ್ಟ್ರೀಯ ಸಮುದಾಯದ ಬೆಂಬಲ ಭಾರತಕ್ಕೆ ಲಭ್ಯವಾಗುವುದಿಲ್ಲ. ಬಾಂಗ್ಲಾದಲ್ಲಿ ಆಂತರಿಕ ದಂಗೆ ಉಂಟಾಗದೇ ಭಾರತ ಹೊರಗಿನಿಂದ ಸೇನಾ ಕಾರ್ಯಾಚರಣೆ ನಡೆಸಿದರೆ ಉದ್ದೇಶ ಸಾಧಿಸಲು ಸಾಧ್ಯವಿಲ್ಲ ಎಂಬುದು ಹಕ್ಸರ್ ಅವರಿಗೆ ಮನವರಿಕೆಯಾಗಿತ್ತು. ಅದಕ್ಕೆ ಪೂರಕವಾಗಿ, 'ಪರಿಸ್ಥಿತಿ ನಮಗೆ ಅನುಕೂಲಕರವಾಗಿಲ್ಲ ಮತ್ತು ಸೇನೆ ಸನ್ನದ್ಧವಾಗಲು ಸಮಯ ಬೇಕು' ಎಂದು ಸೇನಾಧಿಕಾರಿ ಮಾಣೆಕ್ ಷಾ ಅಭಿಪ್ರಾಯಪಟ್ಟಿದ್ದರು. ಹಕ್ಸರ್ ಬೇರೆಯದೇ ಕಾರ್ಯತಂತ್ರ ಹೆಣೆದರು.

ಅದಾಗಲೇ ಬಾಂಗ್ಲಾದೇಶದ ಗಡಿಪಾರುಗೊಂಡ ಸರ್ಕಾರದ ಪ್ರಧಾನಿಯಾಗಿ ತಾಜುದ್ದೀನ್ ಪ್ರಮಾಣವಚನ ಸ್ವೀಕರಿಸಿದ್ದರು. ಅವರು ಸಹಾಯ ಕೋರಿ ಇಂದಿರಾ ಅವರನ್ನು ಭೇಟಿಯಾಗಲು ಬಂದಾಗ, ಎರಡು ಸಂಗತಿಗಳ ಕುರಿತು ಸ್ಪಷ್ಟನೆ ಪಡೆದುಕೊಳ್ಳಲು ಇಂದಿರಾ ಅವರಿಗೆ ಹಕ್ಸರ್ ತಿಳಿಸಿದ್ದರು. ಮೊದಲನೆಯದು, ಬಾಂಗ್ಲಾ ವಿಮೋಚನೆ ಕುರಿತ ಕ್ರಿಯಾ ಯೋಜನೆಗೆ ತಾಜುದ್ದೀನ್ ನೇತೃತ್ವದ ಸರ್ಕಾರದ ಸಂಪೂರ್ಣ ಒಪ್ಪಿಗೆ ಇದೆಯೇ? ಎರಡನೆಯದು, ಪೂರ್ವ ಪಾಕಿಸ್ತಾನದಲ್ಲಿ ಸಕ್ರಿಯವಾಗಿರುವ ಇತರ ಪಕ್ಷಗಳು ಬಾಂಗ್ಲಾ ವಿಮೋಚನಾ ಹೋರಾಟದಲ್ಲಿ ಯಾವ ಪಾತ್ರ ವಹಿಸುತ್ತವೆ ಎಂಬುದು. ಬಾಂಗ್ಲಾ ವಿಮೋಚನೆಗೆ ಒಮ್ಮತದ ಕಾರ್ಯತಂತ್ರ ಅಗತ್ಯ ಮತ್ತು ಅದು ಕೇವಲ ಒಂದು ಪಕ್ಷದ ಬೇಡಿಕೆಯಲ್ಲ ಎಂದಾದರೆ ಮಾತ್ರ ಭಾರತ ಮುಂದಡಿಯಿಡಬೇಕು ಎಂಬುದು ಹಕ್ಸರ್ ನಿಲುವಾಗಿತ್ತು.

ಭಾರತದ ಸೇನೆ ಮಧ್ಯಪ್ರವೇಶಿಸಲು ಬೇಕಾದ ಭೂಮಿಕೆ ಸಿದ್ಧಪಡಿಸಲು ಭಾರತ ಮುಂದಾಯಿತು. ಪಾಕಿಸ್ತಾನದ ಸೇನೆ ದಿಕ್ಕುತಪ್ಪುವಂತೆ ಮತ್ತು ಗಾಸಿಗೊಳ್ಳುವಂತೆ ಮಾಡಲು ಗೆರಿಲ್ಲಾ ಮಾದರಿಯ ಪ್ರತಿರೋಧಕ್ಕೆ ಮುಕ್ತಿವಾಹಿನಿಯ ಹೋರಾಟಗಾರರನ್ನು ಸನ್ನದ್ಧಗೊಳಿಸಬೇಕು ಎಂಬ ನಿರ್ಣಯವನ್ನು ತೆಗೆದುಕೊಂಡಿತು. ಕನಿಷ್ಠ 6 ತಿಂಗಳವರೆಗೆ ಗೆರಿಲ್ಲಾ ಪಡೆಗಳ ಪ್ರತಿರೋಧವನ್ನು ಚಾಲ್ತಿಯಲ್ಲಿಡುವ ಉದ್ದೇಶದಿಂದ 'ಮುಕ್ತಿವಾಹಿನಿ'ಯ ಕಾಲಾಳುಗಳಿಗೆ ಎಲ್ಲ ರೀತಿಯ ನೆರವು ನೀಡಲು ಹಕ್ಸರ್ ಮತ್ತು 'ರಾ' ಮುಖ್ಯಸ್ಥ ಕಾವೋ ಮುಂದಾದರು. ಜೊತೆಗೆ ಅಂತರರಾಷ್ಟ್ರೀಯ ಸಮುದಾಯವು ಭಾರತದ ಪರ ಇರುವಂತೆ ನೋಡಿಕೊಳ್ಳಬೇಕಿತ್ತು.

ಮೇ 14ರಂದು ಇಂದಿರಾ ಗಾಂಧಿ, 39 ರಾಷ್ಟ್ರಗಳ ನಾಯಕರಿಗೆ ಪತ್ರ ಬರೆದು ಪರಿಸ್ಥಿತಿ ವಿವರಿಸಿದರು. 'ಪ್ರತಿದಿನ 50 ಸಾವಿರ ವಲಸಿಗರು ಭಾರತಕ್ಕೆ ಬರುತ್ತಿದ್ದಾರೆ ಮತ್ತು ಇದರಿಂದಾಗಿ ಭಾರತದ ಭದ್ರತೆಗೆ ಅಪಾಯ ಒದಗಿದೆ. ಈ ಪರಿಸ್ಥಿತಿಯನ್ನು ನಿರ್ವಹಿಸುವ ಕುರಿತು ನಿಮ್ಮ ಸಲಹೆಯನ್ನು ಭಾರತ ಎದುರು ನೋಡುತ್ತದೆ' ಎಂಬುದನ್ನು ಮುಖ್ಯವಾಗಿ ಪ್ರಸ್ತಾಪಿಸಬೇಕು ಎಂಬ ಸಲಹೆ ಹಕ್ಸರ್ ಅವರದ್ದಾಗಿತ್ತು.

ಸೋವಿಯತ್ ಜೊತೆಗೆ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಮೊದಲಿಗೆ ಹಕ್ಸರ್ ಎರಡು ಮನಸ್ಸಿನವರಾಗಿದ್ದರು. ಆದರೆ ಜುಲೈ ತಿಂಗಳಿನಲ್ಲಿ ಇಸ್ಲಾಮಾಬಾದ್ ಭೇಟಿಯ ಬಳಿಕ ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಹೆನ್ರಿ ಕಿಸ್ಸಿಂಜರ್ ರಹಸ್ಯವಾಗಿ ಚೀನಾಕ್ಕೆ ಭೇಟಿ ಕೊಟ್ಟಾಗ ಹಕ್ಸರ್ ಮತ್ತು ತಂಡ ಜಾಗೃತವಾಯಿತು. ಆಗಸ್ಟ್ 9ರಂದು ಭಾರತ ಮತ್ತು ಸೋವಿಯತ್ ನಡುವೆ 'ಸ್ನೇಹ ಮತ್ತು ಸಹಕಾರ' ಒಪ್ಪಂದ ಏರ್ಪಟ್ಟಿತು. ಈ ಒಪ್ಪಂದ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ನಿರ್ಣಾಯಕ ಎನಿಸಿತು



ಅಂತೂ ಡಿಸೆಂಬರ್ ವೇಳೆಗೆ ಕಾಲ ಪಕ್ವಗೊಂಡಿತ್ತು. ಡಿಸೆಂಬರ್ 3ರಂದು ಭಾರತದ ಮೇಲೆ ಪಾಕಿಸ್ತಾನ ದಾಳಿ ಮಾಡಿತು. ಡಿಸೆಂಬರ್ 16ರ ಹೊತ್ತಿಗೆ ಕದನವಿರಾಮ ಘೋಷಿಸಿ ಪಾಕಿಸ್ತಾನದ ಸೇನೆ ಮಂಡಿಯೂರಿತು. ಭಾರತದ ಕಾರ್ಯತಂತ್ರ ಯಶಸ್ವಿಯಾಯಿತು. ಗೆಲುವು ಇಂದಿರಾ ಅವರ ಮುಡಿಯೇರಿತು. 1972ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಏರ್ಪಟ್ಟ 'ಶಿಮ್ಲಾ ಒಪ್ಪಂದ'ದ ರೂವಾರಿಯಾಗಿ ಕೂಡ ಹಕ್ಸರ್ ಇದ್ದರು. ಯುದ್ಧ ಕೈದಿಗಳನ್ನು ಬಿಟ್ಟುಕೊಟ್ಟ ಮತ್ತು ಗಡಿ ನಿಯಂತ್ರಣ ರೇಖೆಯ ಕುರಿತು ಮೃದು ಧೋರಣೆ ತಳೆದ ಕಾರಣದಿಂದ, ಯುದ್ಧಭೂಮಿಯಲ್ಲಿ ವಿಜಯ ಸಾಧಿಸಿದರೂ ಮಾತುಕತೆಯ ಮೇಜಿನಲ್ಲಿ ಭಾರತ ಕೈಚೆಲ್ಲಿತು ಎಂಬ ಟೀಕೆಗೆ ಹಕ್ಸರ್ ಮತ್ತು ತಂಡ ಗುರಿಯಾಯಿತು.

ಇಂದಿರಾ ಗಾಂಧಿಯವರ ಮಾಧ್ಯಮ ಸಲಹೆಗಾರರಾಗಿದ್ದ ಕನ್ನಡಿಗ ಎಚ್.ವೈ.ಶಾರದಾ ಪ್ರಸಾದ್ ಅವರು ಹಕ್ಸರ್ ಅವರ ಕುರಿತು ಹೀಗೆ ಬರೆದಿದ್ದರು: 'ಹಕ್ಸರ್ ಅವರಲ್ಲಿ ಅಪ್ರತಿಮ ಬುದ್ಧಿಶಕ್ತಿಯಿತ್ತು. ಮನವೊಲಿಸುವ ವಾಕ್ಚಾತುರ್ಯ ಅವರಿಗೆ ಸಿದ್ಧಿಸಿತ್ತು. ವಾಲ್ಮೀಕಿ, ವಾಲ್ಟೈರ್, ಲೆನಿನ್ ಮತ್ತು ಸಾತ್ರೆಯನ್ನು ಉಲ್ಲೇಖಿಸಬಲ್ಲ ವ್ಯಾಪಕ ಓದು ಅವರದ್ದಾಗಿತ್ತು. ಯಾವುದೇ ವಿಷಯದಲ್ಲಿ ನಿರ್ಧಾರಕ್ಕೆ ಬರುವಾಗ ಅವರು ಒಂದು ಪ್ರಶ್ನೆಯನ್ನು ಹಾಕಿಕೊಳ್ಳುತ್ತಿದ್ದರು. ಇದು ನೈತಿಕವಾಗಿ ಸರಿಯೇ ಎಂಬುದು ಆ ಪ್ರಶ್ನೆಯಾಗಿರುತ್ತಿತ್ತು. ಅವರಲ್ಲಿ ನ್ಯೂನತೆ ಇರಲಿಲ್ಲವೆಂದಲ್ಲ, ಎಡಪಂಥೀಯ ಚಿಂತನೆಗಳತ್ತ ಒಲವು ಹೊಂದಿದ್ದ ಅವರು ಸರ್ಕಾರದ ನಿರ್ಧಾರಗಳ ಮೇಲೆ ಅದು ಪ್ರಭಾವ ಬೀರಲು ಅನುವು ಮಾಡಿಕೊಟ್ಟರು'.

ಹಲವು ವರ್ಷಗಳ ಕಾಲ ಭಾರತದ ರಾಯಭಾರಿಯಾಗಿದ್ದರು. ಪ್ರಧಾನಿ ಕಾರ್ಯಾಲಯದ ಪ್ರಧಾನ ಕಾರ್ಯದರ್ಶಿಯಾಗಿ ನಿವೃತ್ತರಾದ ಹಕ್ಸರ್, 700 ರೂಪಾಯಿಯ ನಿವೃತ್ತಿ ವೇತನ ಪಡೆಯುತ್ತಿದ್ದರು. ನಿವೃತ್ತಿಯ ಬಳಿಕ ಅವರಿಗೆ ಪದ್ಮವಿಭೂಷಣ ಪ್ರಶಸ್ತಿ ಘೋಷಿಸಿದಾಗ 'ವೃತ್ತಿಯ ಭಾಗವಾಗಿ ಮಾಡಿದ ಕೆಲಸಗಳಿಗೆ ಪ್ರಶಸ್ತಿಯನ್ನು ಸ್ವೀಕರಿಸುವುದು ಮುಜುಗರದ ಸಂಗತಿ' ಎಂದು ಆ ಉನ್ನತ ಪ್ರಶಸ್ತಿಯನ್ನು ನಿರಾಕರಿಸಿದ್ದರು.

ಇಂದಿರಾ ಅವರು ರಾಜಕೀಯವಾಗಿ ದೃಢ ಹೆಜ್ಜೆಗಳನ್ನು ಇಡುವಾಗ ಹಕ್ಸರ್ ಒಬ್ಬ ನಂಬಿಕಸ್ಥ ಸಲಹೆಗಾರನಾಗಿ ಅವರ ಜೊತೆಗಿದ್ದರು. ಭಾರತದ ಬೇಹುಗಾರಿಕಾ ಸಂಸ್ಥೆ 'ರಾ' ರೂಪುಗೊಂಡಿದ್ದರ ಹಿಂದೆ ಹಕ್ಸರ್ ಮುಂಗಾಣ್ಕೆ ಇತ್ತು. ಬ್ಯಾಂಕುಗಳ ರಾಷ್ಟ್ರೀಕರಣ, ರಾಜಧನ ರದ್ದತಿ ಕ್ರಮದ ಹಿಂದೆ ಹಕ್ಸರ್ ಸಲಹೆಯಿತ್ತು. ಸಂಜಯ್ ಗಾಂಧಿ ಮುಖ್ಯಭೂಮಿಕೆಗೆ ಬಂದ ಮೇಲೆ ಇಂದಿರಾ ಅವರಿಂದ ಹಕ್ಸರ್ ದೂರವಾದರು. ಆ ಬಳಿಕ ಇಂದಿರಾ ಗಾಂಧಿ ಎಡವಿದ್ದೇ ಹೆಚ್ಚು. ಹೀಗೆ ಹಕ್ಸರ್ ಅವರನ್ನು ನೆನಪು ಮಾಡಿಕೊಳ್ಳಲು ಹತ್ತಾರು ಕಾರಣಗಳಿವೆ. ಬಾಂಗ್ಲಾ ವಿಮೋಚನಾ ಯುದ್ಧ ಆ ಪೈಕಿ ಮಹತ್ವದ್ದು.

ಚುರುಮುರಿ

ಮೇಲ್ಮನೆ ಮೇಲಾಟ

• ಮಣ್ಣೆರಾಜು

'ಕೊರೊನಾ ಸೋಂಕಿನ ಹಳೆ ತಳಿಯ ಅವಾಂತರವೇ ಮುಗಿದಿಲ್ಲ, ಈಗ ಹೊಸ ತಳಿ ದಾಳಿಗೆ ಕಾಯ್ತಿದೆಯಂತೆ. ಇನ್ನೇನು ಗ್ರಹಚಾರ ಕಾದಿದೆಯೋ...' ಸುಮಿ ಕಳವಳಗೊಂಡಳು.

'ಪಾಪ, ಕಾಯಿಲೆಗಳಿಗೆ ನಮ್ಮನ್ನು ಬಿಟ್ಟರೆ ಇನ್ನಾರು ದಿಕ್ಕು? ನೆಂಟರು ಬಂದಂತೆ ಕಾಯಿಲೆಗಳೂ ಬರುತ್ತಿರುತ್ತವೆ. ಬರಬಾರದು ಅಂತ ಮನೆಬಾಗಿಲು ಹಾಕಿ ಅವಾಯ್ಡ್ ಮಾಡಲಾಗುತ್ತಾ?' ಎಂದ ಶಂಕ್ರಿ.

'ದೇವರಿಗೆ ಹರಕೆ ಮಾಡಿಕೊಂಡ್ರೆ, ಕಷಾಯ ಕುಡಿದ್ರೆ ಜ್ವರ, ಕೆಮ್ಮು, ನೆಗಡಿಯಂಥ ಫ್ಯಾಮಿಲಿ ಕಾಯಿಲೆಗಳು ವಾಸಿಯಾಗುತ್ತವೆ. ಫಾರಿನ್ ಕಾಯಿಲೆಗಳು ದೇವರು-ದಿಂಡರು, ಕಷಾಯಕ್ಕೆ ಕೇರ್ ಮಾಡಲ್ಲ'.

'ಮಕ್ಕಳಿಗೆ ಪರೀಕ್ಷಾ ಜ್ವರ, ರಾಜಕಾರಣಿಗಳಿಗೆ ಎಲೆಕ್ಷನ್ ಜ್ವರ ಅನ್ನುವ ಸೀಜನ್ ಕಾಯಿಲೆಗಳೂ ನಮ್ಮಲ್ಲಿವೆ'.

'ಹೌದೂರೀ, ಚುನಾವಣೆ ಟೈಂನಲ್ಲಿ ಕಾಂಗ್ರೆಸ್‌ನವರಿಗೆ ಜೆಡಿಎಸ್ ಜ್ವರ ಶುರುವಾಗುತ್ತೆ. ಜ್ವರ ಬಾಧೆಯ ಕಾಂಗ್ರೆಸ್ ನಾಯಕರಲ್ಲಿ ತಿಂದದ್ದು ಜೀರ್ಣ ಆಗೋಲ್ಲ, ಕಣ್ಣಿಗೆ ನಿದ್ದೆ ಹತ್ತೋಲ್ಲ ಅಂತ ಕುಮಾರಣ್ಣ ರೋಗಲಕ್ಷಣ ವಿವರಿಸಿದ್ದಾರೆ'.

'ಮೇಲ್ಮನೆ ಚುನಾವಣೆಯಲ್ಲೂ ನಾಯಕರ ಬೈದಾಟದ ಕಾಯಿಲೆ ಮುಂದುವರಿದಿದೆ. ಈ ಚುನಾವಣೆಯಲ್ಲಿ ಎಲ್ಲ ಪಕ್ಷಗಳೂ ಕುಟುಂಬದ ಸದಸ್ಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ನೀಡಿ ಕುಟುಂಬ ಕಲ್ಯಾಣಕ್ಕೆ ಆದ್ಯತೆ ನೀಡಿದ್ದಾವಂತೆ'.

'ಸಮರ್ಥ ಅಭ್ಯರ್ಥಿಗಳು ಸಿಗದಿದ್ದಾಗ ನಾಯಕರು ತಮ್ಮ ಕುಟುಂಬದ ಸಾಮರ್ಥ್ಯವನ್ನೇ ಚುನಾವಣೆಯಲ್ಲಿ ಪಣಕ್ಕಿಡಬೇಕಾಗುತ್ತದೆ'.

'ಸ್ಥಳೀಯ ಸಂಸ್ಥೆಗಳಲ್ಲಿ ಫಿಫ್ಟಿ ಪರ್ಸೆಂಟ್ ಮಹಿಳಾ ಮತದಾರರಿದ್ದರೂ ರಾಜಕೀಯ ಪಕ್ಷಗಳು ಫೀಮೇಲ್ ಅಭ್ಯರ್ಥಿಗಳನ್ನು ಕಡೆಗಣಿಸಿ, ಮೇಲ್ ಕ್ಯಾಂಡಿಡೇಟ್‌ಗಳಿಗೆ ಅವಕಾಶ ನೀಡಿ ಮೇಲ್ಮನೆಯನ್ನು ಮೇಲ್ ಮನೆ ಮಾಡಲು ಹೊರಟಿವೆ ಅನ್ನೋದು ನನ್ನ ಆಕ್ಷೇಪ'.

'ಮೇಲ್ಮನೆ ಮೆಟ್ಟಿಲು ಹತ್ತುವುದು ಮಹಿಳೆಯರಿಗೆ ಕಷ್ಟ ಆಗಬಹುದು ಅಂತ ಹೀಗೆ ಮಾಡಿರಬಹುದು'.

'ನಿಜಾರೀ, ಹಿಮಾಲಯ ಪರ್ವತ ಹತ್ತಿರುವ ಮಹಿಳೆಯರಿಗೆ ಮೇಲ್ಮನೆ ಹತ್ತೋದು ಕಷ್ಟ ಆಗಿಬಿಟ್ಟಿದೆ...' ಎಂದು ಸುಮಿ ಸಿಡುಕಿದಳು.

ಸಂಗತ

ಎಚ್‌ಐವಿ: ಘೋಷವಾಕ್ಯಕ್ಕೆ ಬದ್ಧರಾಗೋಣ

ಸಂಯಮ, ನಿಯಂತ್ರಣ ಮತ್ತು ಮುನ್ನೆಚ್ಚರಿಕೆಯೇ ಮೂಗುದಾರ

• ಗೌರಿ ಚಂದ್ರಕೇಸರಿ

ಮತ್ತೊಂದು 'ಏಡ್ಸ್ ದಿನ'ವನ್ನು (ಡಿಸೆಂಬರ್ 1) ಆಚರಿಸುತ್ತಿದ್ದೇವೆ. ಡಿಸೆಂಬರ್ ತಿಂಗಳಿಡೀ ಏಡ್ಸ್ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಜಾಥಾ, ಕರಪತ್ರ, ಬೀದಿನಾಟಕ ಸೇರಿದಂತೆ ಈ ರೋಗದ ತೀವ್ರತೆಯ ಬಗ್ಗೆ ಜನರಲ್ಲಿ ಅರಿವನ್ನು ಉಂಟುಮಾಡುವ ಅನೇಕ ಕಾರ್ಯಕ್ರಮಗಳಿಗೆ ಕೋಟಿಗಟ್ಟಲೆ ಹಣ ವ್ಯಯವಾಗುತ್ತದೆ. ಇದಲ್ಲದೆ ದೂರದರ್ಶನ, ರೇಡಿಯೊ, ಗೋಡೆಬರಹಗಳ ಮೂಲಕ ವರ್ಷವಿಡೀ ಎಚ್‌ಐವಿ ಸೋಂಕಿನ ಕುರಿತಂತೆ ಸರ್ಕಾರವು ಜನರಲ್ಲಿ ಅರಿವು ಮೂಡಿಸುವ ಪ್ರಯತ್ನವನ್ನು ಮಾಡುತ್ತಲೇ ಇದೆ. ಆದರೂ ಎಚ್‌ಐವಿ ಕುರಿತಂತೆ ನಾವು ಎಷ್ಟರ ಮಟ್ಟಿಗೆ ಜಾಗೃತರಾಗಿದ್ದೇವೆ?

ಮಾನವನ ನಡವಳಿಕೆಗೆ ಸಂಬಂಧಪಟ್ಟ ಕಾಯಿಲೆ ಎಚ್‌ಐವಿ. ಮನೋನಿಗ್ರಹ, ಸಂಯಮದಿಂದ ಇದ್ದಲ್ಲಿ ಎಚ್‌ಐವಿ ಹತ್ತಿರ ಸುಳಿಯಲಾರದು. ಆಧುನಿಕತೆಯ ಭರಾಟೆಗೆ ಸಿಲುಕಿ ಜೀವನಮೌಲ್ಯಗಳು ಗಾಳಿಗೆ ತೂರಲ್ಪಡುತ್ತಿವೆ. ಭವಿಷ್ಯದ ಸುಖಕ್ಕಿಂತ ಕ್ಷಣಿಕ ಸುಖಕ್ಕೆ ಮನುಷ್ಯ ಮಹತ್ವ ಕೊಡುತ್ತಿದ್ದಾನೆ. ಬಾಳಿ ಬದುಕಬೇಕಾದ ಜೀವನವನ್ನು ಕೈಯ್ಯಾರೆ ಮೊಟಕುಗೊಳಿಸಿಕೊಳ್ಳುತ್ತಿದ್ದಾನೆ. 'ಸೋಂಕನ್ನು ಸೊನ್ನೆಗೆ ತರೋಣ' ಎಂಬ, ಹಿಂದೆ ಹೇಳಿದ ಘೋಷವಾಕ್ಯ ಅರ್ಥವನ್ನು ಕಳೆದುಕೊಂಡು ಕೆಲವರು ಜೀವನವನ್ನೇ ಸೊನ್ನೆಯಾಗಿಸಿಕೊಳ್ಳುತ್ತಿದ್ದಾರೆ.

'ಬದುಕಿರಿ, ಬದುಕಲು ಬಿಡಿ' ಎಂಬ ಮಾತು ಎಷ್ಟೊಂದು ಅರ್ಥಪೂರ್ಣವಾಗಿದೆ! ತಾನು ಬದುಕುವುದಲ್ಲದೆ ಇನ್ನೊಬ್ಬರನ್ನೂ ಬದುಕಲು ಬಿಡುವುದು ಮಾನವೀಯತೆಯ ಜೊತೆಗೆ ಕರ್ತವ್ಯವನ್ನೂ ಸೂಚಿಸುತ್ತದೆ. ಆದರೆ ಕೆಲವರು ತಮ್ಮ ಆರೋಗ್ಯಕ್ಕೆ ಸಂಚಕಾರ ತಂದುಕೊಳ್ಳುವುದಲ್ಲದೆ ತಮ್ಮನ್ನು ನಂಬಿದವರಲ್ಲೂ ಅಭದ್ರತೆ ಭಾವ ಉಂಟಾಗುವಂತೆ ಮಾಡುತ್ತಾರೆ.

ಆರೋಗ್ಯ ಭಾಗ್ಯದ ಮುಂದೆ ಇನ್ನಾವ ಭಾಗ್ಯವೂ ದೊಡ್ಡದಲ್ಲ. ಹೇಳದೇ ಕೇಳದೇ ಎದುರಾಗುವ ಅಪಘಾತಗಳು, ಕೆಲವು ರೋಗಗಳನ್ನು ತಡೆಯಲು ಸಾಧ್ಯವಿಲ್ಲ. ಆದರೆ ನಮ್ಮ ಅಂಕೆಯಲ್ಲಿರುವ ಎಚ್‌ಐವಿ ಸೋಂಕನ್ನು ಪಡೆದುಕೊಳ್ಳದೇ ಇರಲು ಸಾಧ್ಯವಿದೆ. ಸಂಯಮ, ನಿಯಂತ್ರಣ, ಮುನ್ನೆಚ್ಚರಿಕೆಗಳೆಂಬ ಮೂಗುದಾರ ನಮ್ಮ ಕೈಯಲ್ಲಿದ್ದರೆ ಬದುಕಿನ ಬಂಡಿ ಅಪಘಾತಗಳಿಗೆ ಎಡೆ ಮಾಡಿಕೊಡದು.

ಎಚ್‌ಐವಿ ಕೇವಲ ವ್ಯಕ್ತಿಯೊಬ್ಬನ ಆರೋಗ್ಯಕ್ಕೆ ಸಂಬಂಧಪಟ್ಟದ್ದಲ್ಲ. ಅದು ಆತನ ಕುಟುಂಬದ ಮೇಲೂ ಪರಿಣಾಮವನ್ನು ಬೀರುವಂತಹದ್ದು. ಸೋಂಕಿತ ವ್ಯಕ್ತಿಯ ಖರ್ಚು- ವೆಚ್ಚ, ದೈಹಿಕ, ಮಾನಸಿಕ ಸಮಸ್ಯೆಗಳು, ಚಿಕಿತ್ಸೆಗಾಗಿ ಆಸ್ಪತ್ರೆಯೊಂದಿಗೆ ನಿರಂತರ ಸಂಪರ್ಕ... ಹೀಗೆ ಬದುಕಿನಲ್ಲಿ ಅನೇಕ ಸಮಸ್ಯೆಗಳನ್ನು ಹುಟ್ಟುಹಾಕುತ್ತದೆ. ಈ ಸೋಂಕು ಬರದಂತೆ ತಡೆಯಲು ಮುನ್ನೆಚ್ಚರಿಕೆಯೊಂದೇ ಮದ್ದು.

ಈ ಹಿಂದೆ ಇದ್ದ ಎಚ್‌ಐವಿ ಸೋಂಕಿನ ಪ್ರಮಾಣ ಇತ್ತೀಚೆಗೆ ಇಳಿಮುಖವಾಗಿದ್ದರೂ ಅರಿವು ಮೂಡಿಸಲು ಎಷ್ಟೆಲ್ಲ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೂ ಹೊಸದಾಗಿ ಸೋಂಕನ್ನು ಪಡೆದ ವ್ಯಕ್ತಿಗಳು ಪತ್ತೆಯಾಗುತ್ತಲೇ ಇದ್ದಾರೆ. ವಿಷಾದದ ಸಂಗತಿ ಎಂದರೆ, ಸುಶಿಕ್ಷಿತರೂ ಇದರಿಂದ ಹೊರತಾಗದಿರುವುದು. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರದ ಹಾಗೂ ಸ್ವಯಂಸೇವಾ ಸಂಸ್ಥೆಗಳ ಕಾರ್ಯಕರ್ತರು ಈ ಸೋಂಕಿನ ವಿರುದ್ಧ ವರ್ಷವಿಡೀ ಕಾರ್ಯತತ್ಪರರಾಗಿದ್ದಾರೆ. ಆದರೆ ಅಂದುಕೊಂಡ ಮಟ್ಟದಲ್ಲಿ ಎಚ್‌ಐವಿ ನಿಯಂತ್ರಣ ಸಾಧ್ಯವಾಗಿಲ್ಲ.

ಸೋಂಕನ್ನು ತಡೆಗಟ್ಟುವ ಕಾರ್ಯಕ್ರಮದಲ್ಲಿ ಆಗಾಗ ಕೊರತೆಗಳು ಕೇಳಿಬರುತ್ತಲೇ ಇರುತ್ತವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಪರೀಕ್ಷಾ ಕಿಟ್‌ಗಳು ಇಲ್ಲದೆ ಇರುವುದು, ಸೋಂಕಿತರಿಗೆ ವರದಾನವಾಗಿರುವ ಎಆರ್‌ಟಿ ಮಾತ್ರೆಗಳ ಕೊರತೆಯಂತಹ ಸಮಸ್ಯೆಗಳು ಆಗಾಗ ತಲೆದೋರುತ್ತಲೇ ಇರುತ್ತವೆ. ಸೋಂಕಿತ ವ್ಯಕ್ತಿಯ ಸಿ.ಡಿ4 ಮಟ್ಟ 350ಕ್ಕಿಂತ ಕಡಿಮೆ ಇದ್ದಾಗ ಆತ ಜೀವನವಿಡೀ ಎಆರ್‌ಟಿ ಚಿಕಿತ್ಸೆಯನ್ನು ಪಡೆಯಬೇಕೆಂದು ಸಲಹೆಯನ್ನು ನೀಡಲಾಗುತ್ತದೆ. ಆದರೆ ಈ ಮಾತ್ರೆಗಳು ಆಗಾಗ ಆಸ್ಪತ್ರೆಗಳಲ್ಲಿ ಲಭ್ಯವಿರದೇ ಸೋಂಕಿತರು ಪರದಾಡಬೇಕಾಗುತ್ತದೆ. ಇಂತಹ ವೈರುಧ್ಯದ ಪರಿಸ್ಥಿತಿಗಳಿಂದ ಸೋಂಕಿತರು ಆಪ್ತ ಸಮಾಲೋಚನೆಯಲ್ಲಿ ಪಡೆದ ಆತ್ಮವಿಶ್ವಾಸವನ್ನು ಕಳೆದುಕೊಳ್ಳುವಂತೆ ಆಗುತ್ತದೆ. ಬದುಕಿನಲ್ಲಿರುವ ಒಂದು ಆಶಾಕಿರಣವೂ ಅವರಿಂದ ದೂರವಾದಂತೆ ಆಗುತ್ತದೆ. ಇಂತಹ ಪರಿಸ್ಥಿತಿ ತಲೆದೋರದಂತೆ ನೋಡಿಕೊಳ್ಳುವ ದಿಸೆಯಲ್ಲಿ ಸರ್ಕಾರ ಗಮನ ಹರಿಸಬೇಕಾದದ್ದು ಅತ್ಯವಶ್ಯವಾಗಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಆಪ್ತ ಸಮಾಲೋಚಕರು ಸುಮಾರು ಇಪ್ಪತ್ತು ವರ್ಷಗಳಿಂದ ಎಚ್‌ಐವಿಯನ್ನು ನಿಯಂತ್ರಣಕ್ಕೆ ತರುವ ಸಲುವಾಗಿ ಶ್ರಮಿಸುತ್ತಿದ್ದಾರೆ. ಆದರೆ ಅವರಿನ್ನೂ ದಿನಗೂಲಿ ನೌಕರರಾಗಿಯೇ ಸೇವೆ ಸಲ್ಲಿಸುತ್ತಿದ್ದಾರೆ. ಸದಾ ಕ್ಷಯ ಹಾಗೂ ಎಚ್‌ಐವಿ ಸೋಂಕಿತರ ಸಂಪರ್ಕಕ್ಕೆ ಬರುವ ಇವರಿಗೆ ಸೂಕ್ತವಾದ ಸೌಲಭ್ಯಗಳ ಕೊರತೆ ಇದೆ. ಒಂದು ರೀತಿಯಲ್ಲಿ ಆಪ್ತ ಸಮಾಲೋಚಕರದು ಹಗ್ಗದ ಮೇಲಿನ ನಡಿಗೆಯಂತೆ ಆಗಿದೆ. ಆರೋಗ್ಯ ಇಲಾಖೆ ಈ ಬಗ್ಗೆಯೂ ಗಮನ ಹರಿಸುವ ಅವಶ್ಯಕತೆ ಇದೆ.

ದಿನಾಚರಣೆಯ ಈ ವರ್ಷದ ಘೋಷವಾಕ್ಯ 'ಅಸಮಾನತೆಗಳನ್ನು ಕೊನೆಗೊಳಿಸಿ, ಏಡ್ಸ್ ಅನ್ನು ಕೊನೆಗೊಳಿಸಿ' ಎಂಬುದಾಗಿದೆ. ಈ ವಿಷಯದಲ್ಲಿ ನಮ್ಮ ನಮ್ಮ ಜವಾಬ್ದಾರಿ, ಕರ್ತವ್ಯಗಳನ್ನು ಅರಿತು ನಡೆದುಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ವಾಚಕರ ವಾಣಿ

ಚರ್ಚೆ ಬೇಡವಾದರೆ ಸಂಸತ್ ಯಾಕೆ?

ಕೃಷಿ ಕ್ಷೇತ್ರದ ಮೂರು ಕಾಯ್ದೆಗಳನ್ನು ಹಿಂದಕ್ಕೆ ಪಡೆಯುವ ಮಸೂದೆಗೆ ಸಂಸತ್ತು ಆತುರದಲ್ಲಿ ಅನುಮೋದನೆಯ ಮುದ್ರೆ ಒತ್ತಿರುವುದು ಸರಿಯಲ್ಲ. ಕಾಯ್ದೆಗಳನ್ನು ವಾಪಸ್ ಪಡೆಯಲಾಗುವುದೆಂದು ಪ್ರಧಾನಿ ಪ್ರಕಟಿಸಿದ ಮೇಲೆ, ಅದಕ್ಕೆ ಸಂಬಂಧಿಸಿದ ಮಸೂದೆಯನ್ನು ಸಂಸತ್ತಿನಲ್ಲಿ ಅಧಿಕೃತವಾಗಿ ಅನುಮೋದಿಸುವುದು ಒಂದು ಔಪಚಾರಿಕ ಆಗಿತ್ತಷ್ಟೇ. ಹೀಗಿರುವಾಗ, ಅದಕ್ಕೂ ತರಾತುರಿಯಲ್ಲಿ ಒಪ್ಪಿಗೆ ಪಡೆಯುವುದು, ಚರ್ಚೆಗೆ ಅವಕಾಶ ನಿರಾಕರಿಸುವುದು ಸರ್ಕಾರದ ಸರ್ವಾಧಿಕಾರಿ ಧೋರಣೆಗೆ ಕನ್ನಡಿ. ದೇಶದ ಅನೇಕ ತುರ್ತು ವಿಷಯಗಳ ಬಗೆಗೆ ಸರ್ಕಾರದ ಗಮನ ಸೆಳೆದು, ಗಂಭೀರವಾದ ಚರ್ಚೆಗಳನ್ನು ನಡೆಸುವುದಕ್ಕಾಗಿಯೇ ಸಂಸತ್ತಿನ ಅಧಿವೇಶನ ಕರೆಯುವುದು.

ಇಂತಹ ಪ್ರಮುಖ ವಿಷಯದ ಮೇಲೆ ಚರ್ಚೆಗೆ ವಿರೋಧ ಪಕ್ಷಗಳ ಪ್ರಮುಖರಿಗೂ ಅಭಿಪ್ರಾಯ ಮಂಡನೆಗೆ ಅವಕಾಶ ಕೊಡದಿದ್ದರೆ ಸಂಸತ್ತಿನ ಅಗತ್ಯವಾದರೂ ಇದೆಯೇ? ಸಂಸತ್ತಿನ ಎಲ್ಲ ಸದಸ್ಯರೂ ಎಲ್ಲ ವಿಷಯಗಳಲ್ಲೂ ಪ್ರಬುದ್ಧರಲ್ಲದಿದ್ದರೂ ವಿಷಯಗಳ ಪರ–ವಿರುದ್ಧ ಭಿನ್ನ, ಭಿನ್ನ ಅಭಿಪ್ರಾಯಗಳ ವಾಗ್ಝರಿ ಸಂಸತ್ತಿಗೇ ಕೀರ್ತಿದಾಯಕ.

ಪ್ರಜಾಪ್ರಭುತ್ವದ ಅಸ್ತಿತ್ವಕ್ಕೆ ದಾರಿದೀಪವಾಗಿರುವ ಇಂಗ್ಲೆಂಡಿನ ಎರಡೂ ಸದನಗಳ ಚರ್ಚೆಗಳು ಎಲ್ಲರಿಗೂ ಮಾದರಿ. ಅಲ್ಲಿನ ಚರ್ಚೆಗಳು, ಪ್ರಬುದ್ಧರ ವಿಷಯ ಮಂಡನೆಗಳು ಒಂದು ದಿಕ್ಸೂಚಿ. ಇಲ್ಲಿ, ಸಂಸತ್ತಿನಲ್ಲಿನ ಚರ್ಚೆಗಳಿಗೆ ವಿ.ಕೆ.ಕೃಷ್ಣ ಮೆನನ್, ಆಚಾರ್ಯ ಕೃಪಲಾನಿ, ಎನ್.ಜಿ.ರಂಗಾ, ಮೀನೂ ಮಸಾನಿ, ಲೋಹಿಯಾ, ಹೇಮ್ ಬರುವಾ, ಹಿರೇನ್ ಮುಖರ್ಜಿ, ವಾಜಪೇಯಿ ಅಂತಹವರುಗಳ ಕೊಡುಗೆ ಅಪಾರ. ಇದಕ್ಕೆ ಕಾರಣ, ಅವರು ಮಾತನಾಡುವುದಕ್ಕೆ ಸಿಕ್ಕ ಅವಕಾಶ. ಜೊತೆಗೆ, ಚರ್ಚೆಗಳೂ ಬರಲಿರುವ ಪೀಳಿಗೆಗೆ ಆದರ್ಶ. ಸಂಸತ್ತು ಮತ್ತು ವಿಧಾನಮಂಡಲಗಳು ಅನೇಕರ ವಿದ್ವತ್ತು ಪ್ರಕಾಶಿಸುವುದರ ದ್ಯೋತಕ. ಪ್ರಜಾಪ್ರಭುತ್ವಕ್ಕೆ, ಸಂವಿಧಾನಕ್ಕೆ ಮೆರುಗು ಕೊಡುವುದೇ ಶಾಸನಸಭೆಗಳ ಮುಕ್ತ, ಪ್ರಬುದ್ಧ ಚರ್ಚೆಗಳು. ಇವುಗಳಿಗೆ ಅವಕಾಶ ಇರದಿದ್ದರೆ ಸಂಸತ್ತಿನ ಕಲಾಪಗಳು ಬರಡು. ಇದನ್ನು ಸಂಸತ್ತಿನ ಹಿರಿಯರೇ ಗ್ರಹಿಸದಿರುವುದು ವಿಷಾದಕರ.

ಕೆ.ಎನ್.ಭಗವಾನ್, ಬೆಂಗಳೂರು

ಕನ್ನಡದ ಹರಿಕಾರನ ನಿರ್ಲಕ್ಷ್ಯ ಸಲ್ಲದು

ಮೊನ್ನೆ ಭಾನುವಾರ ಹಾವೇರಿ ಜಿಲ್ಲೆಯ ಗಳಗನಾಥ ಮತ್ತು ಚೌಡದಾನಪುರ ಕ್ಷೇತ್ರಗಳ ದರ್ಶನ ಮಾಡಿದೆವು. ಚೌಡದಾನಪುರದಲ್ಲಿ ಶ್ರೀ ಮುಕ್ತಿನಾಥೇಶ್ವರ ಮತ್ತು ಗಳಗನಾಥದಲ್ಲಿ ಶ್ರೀ ಗಳಗೇಶ್ವರ ದೇವರ, ಚಾಲುಕ್ಯರ ಕಾಲದಲ್ಲಿ ನಿರ್ಮಿಸಿದ ಸುಂದರ ದೇವಾಲಯಗಳಿವೆ. ಈ ಗುಡಿಗಳಲ್ಲಿ ಚಿತ್ತಾಕರ್ಷಕ ಮೂರ್ತಿಗಳು, ಕುಸುರಿ ಕೆತ್ತನೆಯ ಕೌಶಲ ಬಹಳ ಶ್ರೀಮಂತವಾಗಿವೆ. ಆದರೆ ಇಂಥ ಸುಂದರ ಶಿಲ್ಪಕಲೆಯ ವಿವರಣೆ ನೀಡಲು ಯಾವ ಗೈಡ್ ಇಲ್ಲಿಲ್ಲ ಅಥವಾ ಸ್ಥಳ ಪುರಾಣದ ಪುಸ್ತಕಗಳಿಲ್ಲ. ಸುಮ್ಮನೆ ನೋಡಿ ಒಂದೆರಡು ಫೋಟೊ ಕ್ಲಿಕ್ಕಿಸಿಕೊಂಡು ಬಂದೆವು.

ಆದರೆ ದುಃಖದ ಸಂಗತಿ ಎಂದರೆ, ಪಂಡಿತ ಗಳಗನಾಥರ ಕುರಿತು ಈ ಗ್ರಾಮದಲ್ಲಿ ಒಂದು ಪ್ರತಿಮೆಯೂ ನಮಗೆ ಕಾಣಿಸಲಿಲ್ಲ. ಗಳಗನಾಥರು ಕನ್ನಡದ ಮೊದಲ ಕಾದಂಬರಿಕಾರರು! ತಾವೇ ಬರೆದು, ಮುದ್ರಿಸಿದ ಪುಸ್ತಕಗಳನ್ನು ತಲೆಯ ಮೇಲೆ ಹೊತ್ತು ಕಾಲ್ನಡಿಗೆಯಲ್ಲಿ ಊರೂರು ಅಲೆದು ಪುಸ್ತಕಗಳನ್ನು ಮಾರಿದರು ಎಂದು ಕೇಳಿದ್ದೇವೆ. ಅದು ಕೂಡ 1914ರಲ್ಲಿ! 'ಧರ್ಮ ರಹಸ್ಯ' ಎಂಬ ಅವರ ಗ್ರಂಥವು ಬುದ್ಧನ ಕಾಲಕ್ಕೆ ಸಂಬಂಧಿಸಿದೆ.

ಕನ್ನಡದ ಅಂಥ ಹರಿಕಾರ ಇಂದು ಎಂಥ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ ಎಂಬುದನ್ನು ನೋಡಿದರೆ ಬೇಸರವಾಗುತ್ತದೆ. ಇಂದು ಹಾವೇರಿ ಜಿಲ್ಲೆಯಲ್ಲಿ ಅವರ ನೆನಪೂ ಇಲ್ಲದಂತಾಗಿದೆ. ನಮ್ಮ ಸಾಹಿತ್ಯ ಪರಿಷತ್ತು ಇತ್ತ ಗಮನಹರಿಸಿ ಅವರ ಕೊಡುಗೆ ಏನು ಎಂಬುದನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡಬೇಕು. ಜನಪ್ರತಿನಿಧಿಗಳೂ ಮನಸ್ಸು ಮಾಡಿ, ತಮ್ಮ ಜಿಲ್ಲೆಗೆ ಸೇರಿದ ಗಳಗನಾಥರಂಥ ಮಹಾತ್ಮರ ಕೊಡುಗೆಯನ್ನು ಇಂದಿನ ಯುವಪೀಳಿಗೆಗೆ ತಿಳಿಸಲು ಮುಂದಾಗಬೇಕು.

ಮುರುಗೇಶ್ ಹನಗೋಡಿಮಠ, ಬ್ಯಾಡಗಿ

ತಾಳ್ಮೆ ಕದಡುವ ಹೇಳಿಕೆ ಬೇಡ

'ಪಾದ್ರಿಗಳು, ಕ್ರೈಸ್ತ ಧರ್ಮಗುರುಗಳು ಬಾಯಿ ಮುಚ್ಚಿಕೊಂಡು, ತಮ್ಮ ಪಾಡಿಗೆ ಚರ್ಚುಗಳಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದರೆ ಸರಿ. ಹಿಂದೂಗಳ ಮತಾಂತರ ನಿಲ್ಲಿಸದಿದ್ದರೆ, ಸಿಕ್ಕ ಸಿಕ್ಕಲ್ಲಿ ಒದೆಯಬೇಕಾಗುತ್ತದೆ' ಎಂಬ ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಅವರ ಹೇಳಿಕೆ (ಪ್ರ.ವಾ., ನ. 26) ಕ್ರೈಸ್ತರ ಭಾವನೆಗಳನ್ನು ಬಡಿದೆಬ್ಬಿಸುವಂತಿದೆ. ಮತಾಂತರದ ಬಗ್ಗೆ ಹೇಳಿಕೆ ನೀಡುವುದರ ಜೊತೆಗೆ ಅವರು ಮತಾಂತರಗೊಂಡವರ ವಿವರಗಳನ್ನು ಸಹ ನೀಡಬೇಕಿತ್ತು. ಬಲವಂತವಾಗಿ ಮತಾಂತರಗೊಳಿಸಿದವರ ಮೇಲೆ ಕ್ರಮ ಜರುಗಿಸಬಹುದಿತ್ತು. ಅವರ ಹೇಳಿಕೆಗೊಂದು ಬೆಲೆಯೂ ಇರುತ್ತಿತ್ತು. ಆದರೆ ಆಧಾರವಿಲ್ಲದೆ, ಬಾಯಿಗೆ ಬಂದಂತೆ ನೀಡುವ ಹೇಳಿಕೆಗಳಿಂದ ಯಾವ ಪ್ರಯೋಜನವೂ ಇಲ್ಲ.

ಕೆಲವರು ಭಾವಿಸಿರುವಂತೆ ಮತಾಂತರಗೊಳಿಸುವುದು, ಮತಾಂತರ ಹೊಂದುವುದು ಅಷ್ಟು ಸುಲಭವಲ್ಲ. ಕಾರಣವಿಲ್ಲದೆ ಸುಮ್ಮನೆ ಯಾರೂ ಮತಾಂತರ ಹೊಂದುವುದಿಲ್ಲ. ಮತಾಂತರಗೊಳ್ಳಲು ಎರಡು ಪ್ರಮುಖ ಕಾರಣಗಳಿವೆ. ಹಣ ಅಥವಾ ಸವಲತ್ತುಗಳ ಆಮಿಷಕ್ಕೊಳಗಾದವರು ಹಾಗೂ ಧರ್ಮದಲ್ಲಿನ ಲೋಪಗಳು, ತಾರತಮ್ಯ ಧೋರಣೆಯಂತಹ ಕಾರಣಗಳಿಂದ ಬೇಸತ್ತವರು ಮತಾಂತರ ಹೊಂದುತ್ತಾರಷ್ಟೆ. ಸ್ವಇಚ್ಛೆಯಿಂದ ಮತಾಂತರ ಹೊಂದಲು ಭಾರತೀಯ ಸಂವಿಧಾನದಲ್ಲಿ ಅವಕಾಶವೂ ಇದೆ.

ಆದರೆ ನಿಜವಾದ ಮತಾಂತರವೆಂದರೆ, ವ್ಯಕ್ತಿ ತನ್ನ ಆತ್ಮಸಾಕ್ಷಿಗೆ ಅನುಗುಣವಾಗಿ ನಡೆದುಕೊಂಡು ಧರ್ಮವನ್ನು ಬದಲಾಯಿಸುವುದಾಗಿದೆ. ಹಿಂದೂ ಧರ್ಮದಲ್ಲಿನ ಅಸ್ಪೃಶ್ಯತೆ, ಅಸಮಾನತೆ, ತಾರತಮ್ಯ, ಅನಾದರ ಮುಂತಾದ ಲೋಪಗಳೇ ಮತಾಂತರಕ್ಕೆ ಕಾರಣ. ಅವು ಅಳಿದರೆ, ಧರ್ಮವನ್ನು ಬದಲಾಯಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ದಲಿತರ ಬಗೆಗೆ ಧರ್ಮದಲ್ಲಿ ಬಲವಾಗಿ ಬೀಡುಬಿಟ್ಟಿರುವ ತಾರತಮ್ಯ ಧೋರಣೆಯಂತಹ ದೌರ್ಬಲ್ಯಗಳು ನಿರ್ಮೂಲಗೊಳ್ಳದ ಹೊರತು, ಮತಾಂತರ ಪ್ರಕ್ರಿಯೆಗಳು ಸದಾ ಸದ್ದು ಮಾಡುತ್ತಲೇ ಇರುತ್ತವೆ. ಮೊದಲು ತಮ್ಮ ಧರ್ಮದಲ್ಲಿನ ದೋಷಗಳನ್ನು ಸರಿಪಡಿಸಿಕೊಳ್ಳದೆ ಬೇರೆ ಧರ್ಮವನ್ನು ತೆಗಳುವುದು ಸರಿಯಲ್ಲ.

ಎಲ್.ಚಿನ್ನಪ್ಪ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಟೆಕ್ ಕಂಪನಿಗಳ ಸಾರಥ್ಯ ಭಾರತೀಯ ಸಿಇಒಗಳ ಪಾರಮ್ಯ

ಪ್ರಜಾವಾಣಿ ವಾರ್ತೆ

‘ಇದೊಂದು ಸಾಂಕ್ರಾಮಿಕದ ಮೂಲ ಭಾರತ ಎಂದು ಹೇಳಲು ನಮಗೆ ಸಂತಸ ಮತ್ತು ಹೆಮ್ಮೆ ಇದೆ. ಇದು ಭಾರತೀಯ ಸಿಇಒ (ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ) ವೈರಸ್. ಇದರ ವಿರುದ್ಧ ಲಸಿಕೆಯೇ ಇಲ್ಲ’- ಭಾರತದಲ್ಲಿ ಹುಟ್ಟಿ ಬೆಳೆದ ಪರಾಗ್ ಅಗರ್‌ವಾಲ್ ಅವರು ಟ್ವಿಟರ್ ಕಂಪನಿಯ ಹೊಸ ಸಿಇಒ ಆಗಿ ನೇಮಕ ಆಗಿದ್ದಕ್ಕೆ ಉದ್ಯಮಿ, ಮಹೀಂದ್ರಾ ಸಮೂಹದ ಮುಖ್ಯಸ್ಥ ಆನಂದ್ ಮಹೀಂದ್ರಾ ಅವರು ಟ್ವೀಟ್ ಮೂಲಕ ನೀಡಿದ ಪ್ರತಿಕ್ರಿಯೆ ಇದು.

ಟ್ವಿಟರ್ ಸಹ ಸಂಸ್ಥಾಪಕ ಮತ್ತು ಸಿಇಒ ಜಾಕ್ ಡೋರ್ಸಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಪರಾಗ್ ಅವರನ್ನು ನೇಮಕ ಮಾಡಲಾಗಿದೆ. ಈ ನೇಮಕಕ್ಕೆ ಸಂಭ್ರಮದಿಂದ ಪ್ರತಿಕ್ರಿಯೆ ಕೊಟ್ಟ ಮೊದಲ ವ್ಯಕ್ತಿ ಸ್ಟ್ರೈಪ್ ಕಂಪನಿಯ ಸಿಇಒ ಪ್ಯಾಟ್ರಿಕ್ ಕಾಲಿಸನ್. ‘ಗೂಗಲ್, ಮೈಕ್ರೊಸಾಫ್ಟ್, ಅಡೋಬಿ, ಐಬಿಎಂ, ಪಾಲೊ ಅಲ್ಟೊ ನೆಟ್‌ವರ್ಕ್ಸ್ ಮತ್ತು ಈಗ ಟ್ವಿಟರ್, ಭಾರತದಲ್ಲಿ ಹುಟ್ಟಿ ಬೆಳೆದ ಸಿಇಒಗಳ ನೇತೃತ್ವದಲ್ಲಿ ನಡೆಯುತ್ತಿವೆ. ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತೀಯರಿಗೆ ಸಿಕ್ಕ ಅದ್ಭುತ ಯಶಸ್ಸು ಬೆರಗು ಮೂಡಿಸುತ್ತಿದೆ. ಹಾಗೆಯೇ ಅಮೆರಿಕವು ವಲಸಿಗರಿಗೆ ನೀಡುವ ಅವಕಾಶಗಳನ್ನೂ ಇದು ನೆನಪಿಸುತ್ತದೆ’ ಎಂಬುದು ಕಾಲಿಸನ್ ಅವರ ಟ್ವೀಟ್. ‘ಭಾರತದ ಪ್ರತಿಭೆಯಿಂದ ಅಮೆರಿಕಕ್ಕೆ ಭಾರಿ ದೊಡ್ಡ ಪ್ರಯೋಜನ ಸಿಕ್ಕಿದೆ’ ಎಂದು ಭಾರತೀಯರ ಪ್ರತಿಭೆಯನ್ನು ಟೆಸ್ಲಾ ಕಂಪನಿಯ ಸಿಇಒ ಇಲಾನ್ ಮಸ್ಕ್ ಕೊಂಡಾಡಿದ್ದಾರೆ.

ಜಗತ್ತಿನ ಅತ್ಯಂತ ಮಹತ್ವದ ತಂತ್ರಜ್ಞಾನ ಕಂಪನಿಗಳಲ್ಲಿ ಭಾರತೀಯ ಪಾರಮ್ಯಕ್ಕೆ ಈ ಪ್ರತಿಕ್ರಿಯೆಗಳೇ ಕನ್ನಡಿ ಹಿಡಿಯುತ್ತವೆ.

ಗೂಗಲ್, ಮೈಕ್ರೊಸಾಫ್ಟ್, ಐಬಿಎಂ, ಅಡೋಬಿಯಂತಹ ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರಭಾವಿ ಕಂಪನಿಗಳು ಮತ್ತು ಪ್ರಮುಖ ಎಂದು ಪರಿಗಣಿಸಲಾಗುವ 15ಕ್ಕೂ ಹೆಚ್ಚು ಕಂಪನಿಗಳ ಸಾರಥ್ಯ ಸ್ಥಾನದಲ್ಲಿಯೂ ಭಾರತ ಮೂಲದವರೇ ಇದ್ದಾರೆ. ಇವರಲ್ಲಿ ಹೆಚ್ಚಿನವರು ಪ್ರತಿಷ್ಠಿತ ಭಾರತೀಯ ತಂತ್ರಜ್ಞಾನ ಸಂಸ್ಥೆಗಳಲ್ಲಿ (ಐಐಟಿ) ಕಲಿತವರು.

ಇಂದ್ರಾ ನೂಯಿ ಅವರು 2006ರಲ್ಲಿ ಪೆಪ್ಸಿಕೊ ಕಂಪನಿಯ ಸಿಇಒ ಆಗುವುದರೊಂದಿಗೆ ಜಾಗತಿಕ ಕಂಪನಿಗಳ ಮುಖ್ಯಸ್ಥ ಸ್ಥಾನದ ಬಾಗಿಲು ಭಾರತೀಯರಿಗೆ ತೆರೆದುಕೊಂಡಂತಾಯಿತು. ಆ ದಿನಗಳಲ್ಲಿ ಅಮೆರಿಕದ ಕಂಪನಿಗಳಲ್ಲಿ ಸಿಇಒ ಸ್ಥಾನದಲ್ಲಿದ್ದ ಕೆಲವೇ ಮಹಿಳೆಯರ ಪೈಕಿ ಇಂದ್ರಾ ಅವರೂ ಒಬ್ಬರು. ಜಗತ್ತಿನ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿಯೂ ಅವರು ಸತತವಾಗಿ ಇದ್ದರು. 2019ರಲ್ಲಿ ಪೆಪ್ಸಿಕೊ ಕಂಪನಿಯಿಂದ ನಿವೃತ್ತರಾದರು.

ಪರಾಗ್ ಅಗರ್‌ವಾಲ್ (ಟ್ವಿಟರ್)

ಟ್ವಿಟರ್‌ನ ನೂತನ ಸಿಇಒ ಆಗಿ ನೇಮಕವಾಗಿರುವ ಪರಾಗ್ ಅಗರ್‌ವಾಲ್ (37) ಅವರು ಮೂಲತಃ ಮುಂಬೈನವರು. ಬಾಂಬೆ ಐಐಟಿಯಿಂದ ಎಂಜಿನಿಯರಿಂಗ್ ಪದವಿ ಪಡೆದ ಪರಾಗ್ ಅವರು, ಕ್ಯಾಲಿಫೋರ್ನಿಯಾದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಟ್ವಿಟರ್ ಸೇರುವ ಮುನ್ನ ಪರಾಗ್ ಅವರು, 2006ರಿಂದ 2010ರ ನಡುವೆ ಮೈಕ್ರೊಸಾಫ್ಟ್ ರಿಸರ್ಚ್ ಮತ್ತು ಯಾಹೂ ರಿಸರ್ಚ್‌ನಲ್ಲಿ ರಿಸರ್ಚ್ ಮ್ಯಾನೇಜರ್ ಆಗಿ ಸೇವೆ ಸಲ್ಲಿಸಿದ್ದರು. 2011ರಲ್ಲಿ ಟ್ವಿಟರ್‌ನಲ್ಲಿ ರೆವೆನ್ಯೂ ಅಂಡ್ ಕನ್ಸ್ಯೂಮರ್ ಎಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ಆರಂಭಿಸಿದರು. ಆನಂತರ ಕಂಪನಿಯ ಮುಖ್ಯ ತಾಂತ್ರಿಕ ಅಧಿಕಾರಿ (ಸಿಟಿಒ) ಆಗಿ ಬಡ್ತಿ ಪಡೆದರು. ‘ಸಿಟಿಒ ಆಗಿ ಪರಾಗ್ ಅವರು ಸಲ್ಲಿಸಿರುವ ಸೇವೆಯನ್ನು ಮತ್ತು ಕಂಪನಿಗೆ ಅವರು ಕೊಟ್ಟಿರುವ ಕೊಡುಗೆಯನ್ನು ಪರಿಗಣಿಸಿಯೇ ಈ ಹುದ್ದೆ ನೀಡಲಾಗಿದೆ. ಈಗ ಪರಾಗ್ ಅವರ ನಾಯಕತ್ವದ ಸಮಯ’ ಎಂದು ಟ್ವಿಟರ್‌ನ ನಿರ್ಗಮಿತ ಸಿಇಒ ಜಾಕ್ ಡೋರ್ಸಿ ಹೇಳಿದ್ದಾರೆ.

₹7.50 ಕೋಟಿ (10ಲಕ್ಷ ಡಾಲರ್) + ವಿಶೇಷ ಭತ್ಯೆಗಳು
ಪರಾಗ್ ಅಗರ್‌ವಾಲ್ ಅವರ ವಾರ್ಷಿಕ ವೇತನ ಪ್ಯಾಕೇಜ್

ಸತ್ಯ ನಾದೆಲ್ಲಾ (ಮೈಕ್ರೊಸಾಫ್ಟ್)



ಕಂಪ್ಯೂಟರ್ ಕಾರ್ಯನಿರ್ವಹಣಾ ವ್ಯವಸ್ಥೆ ತಯಾರಕ ಸಂಸ್ಥೆ, ಮೈಕ್ರೊಸಾಫ್ಟ್‌ನ ಸಿಇಒ ಆಗಿರುವ ಸತ್ಯ ನಾದೆಲ್ಲಾ ಅವರು ಭಾರತೀಯ. ಹೈದರಾಬಾದ್‌ನಲ್ಲಿ 1967ರ ಆಗಸ್ಟ್ 19ರಂದು ಜನಿಸಿದ ನಾದೆಲ್ಲಾ ಅವರು ಎಂಜಿನಿಯರಿಂಗ್ ಪದವಿ ಪಡೆದದ್ದು ಕರ್ನಾಟಕದಲ್ಲಿ. ರಾಜ್ಯದ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಸತ್ಯ ನಾದೆಲ್ಲಾ ಅವರು ತಮ್ಮ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿಯನ್ನು 1988ರಲ್ಲಿ ಪೂರ್ಣಗೊಳಿಸಿದರು. ನಂತರ ಅಮೆರಿಕದ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಸೈನ್ಸ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1990ರಲ್ಲಿ ಸನ್ ಮೈಕ್ರೊಸಿಸ್ಟಂ ಎಂಬ ಕಂಪನಿಯಲ್ಲಿ ಉದ್ಯೋಗ ಆರಂಭಿಸಿದ ನಾದೆಲ್ಲಾ ಅವರು, 1992ರಲ್ಲಿ ಮೈಕ್ರೊಸಾಫ್ಟ್ ಕಂಪನಿಯಲ್ಲಿ ಎಂಜಿನಿಯರ್ ಹುದ್ದೆಗೆ ಸೇರಿದ್ದರು. ಅಂದಿನಿಂದ ಅದೇ ಕಂಪನಿಯಲ್ಲಿ ಉಳಿದ ಅವರು, 2014ರಲ್ಲಿ ಕಂಪನಿಯ ಸಿಇಒ ಹುದ್ದೆಗೆ ಬಡ್ತಿ ಪಡೆದರು.

ಸುಂದರ್ ಪಿಚೈ (ಆಲ್ಫಾಬೆಟ್ ಮತ್ತು ಗೂಗಲ್)

ಸುಂದರ್ ಪಿಚೈ ಎಂದೇ ಖ್ಯಾತರಾಗಿರುವ ಪಿಚೈ ಸುಂದರರಾಜನ್ ಅವರು ತಮಿಳುನಾಡಿನ ಚೆನ್ನೈನವರು. ತಮ್ಮ ಶಾಲಾ ದಿನಗಳನ್ನು ಅಲ್ಲಿಯೇ ಕಳೆದ ಪಿಚೈ, ಖರಗ್‌ಪುರ ಐಐಟಿಯಿಂದ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ. ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್ ಅಂಡ್ ಮೆಟೀರಿಯಲ್ ಸೈನ್ಸ್ ವಿಷಯದಲ್ಲಿ ಎಂಎಸ್ ಪದವಿ ಪಡೆದಿದ್ದಾರೆ. ಎಂಬಿಎ ಪದವಿಯನ್ನೂ ಹೊಂದಿರುವ ಅವರು, ಹಲವು ಕಂಪನಿಗಳನ್ನು ಮುನ್ನಡೆಸಿದ್ದಾರೆ. 2015ರಲ್ಲಿ ಗೂಗಲ್ ಇಂಕ್‌ನ ಸಿಇಒ ಆಗಿ ನೇಮಕವಾದರು. ಗೂಗಲ್‌ನ ಮಾತೃಸಂಸ್ಥೆ ಆಲ್ಫಾಬೆಟ್ ಇಂಕ್‌ನ ಸಿಇಒ ಆಗಿ 2019ರಲ್ಲಿ ಅಧಿಕಾರ ಸ್ವೀಕರಿಸಿದರು. ಈಗ ಎರಡೂ ಕಂಪನಿಗಳನ್ನು ಮುನ್ನಡೆಸುತ್ತಿದ್ದಾರೆ.

ರಘು ರಘುರಾಂ (ವಿಎಂವೇರ್)



ಭಾರತದವರಾದ ರಘು ರಘುರಾಂ ಅವರ ಪೂರ್ಣ ಹೆಸರು ರಂಗರಾಜನ್ ರಘು ರಘುರಾಂ. ಬಾಂಬೆ ಐಐಟಿಯಿಂದ ಎಲೆಕ್ಟ್ರಿಕಲ್ ಎಂಜಿನಿಯರ್‌ನಲ್ಲಿ ಪದವಿ ಪಡೆದಿರುವ ರಘು ಅವರು ತಮ್ಮ ಉದ್ಯೋಗವನ್ನು ನೆಟ್‌ಸ್ಕೇಪ್ ಕಂಪನಿಯಲ್ಲಿ ಆರಂಭಿಸಿದ್ದರು. 2003ರಲ್ಲಿ ಆಗಷ್ಟೇ ಸ್ಟಾರ್ಟ್‌ಅಪ್ ಆಗಿದ್ದ ವಿಎಂವೇರ್ ಕಂಪನಿಯಲ್ಲಿ ಪ್ರಾಡಕ್ಟ್ ಮ್ಯಾನೇಜರ್ ಆಗಿ ಕೆಲಸ ಆರಂಭಿಸಿದರು. ವಿಶ್ವದ ಅತ್ಯಂತ ದೊಡ್ಡ ಕ್ಲೌಡ್ ಕಂಪ್ಯೂಟಿಂಗ್ ಸೇವಾ ಕಂಪನಿಗಳಲ್ಲಿ ವಿಎಂವೇರ್ ಸಹ ಒಂದು ಎನಿಸಿಕೊಳ್ಳುವಲ್ಲಿ ರಘು ಅವರ ಕೊಡುಗೆ ಅಪಾರವಿದೆ ಎಂದು ಕಂಪನಿ ಹೇಳಿಕೊಂಡಿದೆ. 2021ರ ಜೂನ್‌ನಲ್ಲಿ ಅವರು ಕಂಪನಿಯ ಸಿಇಒ ಮತ್ತು ನಿರ್ದೇಶಕನ ಹುದ್ದೆಗೆ ಬಡ್ತಿ ಪಡೆದರು.

ಶಂತನು ನಾರಾಯಣ್ (ಅಡೋಬಿ)



ಪ್ರಸಿದ್ಧ ಸಾಫ್ಟ್‌ವೇರ್ ಕಂಪನಿ ‘ಅಡೋಬಿ’ಯನ್ನು ಮುನ್ನಡೆಸುತ್ತಿರುವವರು ಹೈದರಾಬಾದ್‌ನ ಶಂತನು ನಾರಾಯಣ್ (58). ಇವರು 2007ರಿಂದ ಕಂಪನಿಯ ಸಿಇಒ ಹಾಗೂ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದಾರೆ. ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ವಿದ್ಯಾಭ್ಯಾಸ ಮಾಡಿದ ಶಂತನು, 1986ರಲ್ಲಿ ಓಹಿಯೋದ ಬೌಲಿಂಗ್ ಗ್ರೀನ್ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಪದವಿ ಪಡೆದರು. ಬಳಿಕ 1993ರಲ್ಲಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಎಂಬಿಎ ಪದವಿ ಪಡೆದರು. 1986ರಲ್ಲಿ ಸಿಲಿಕಾನ್ ವ್ಯಾಲಿಯಲ್ಲಿ ನವೋದ್ಯಮ ಮೆಷುರೆಕ್ಸ್ ಆಟೋಮೇಷನ್ ಸಿಸ್ಟಮ್ಸ್‌ನಲ್ಲಿ ವೃತ್ತಿ ಶುರು ಮಾಡಿದ್ದರು. ಅವರ ತಂದೆ ಪ್ಲಾಸ್ಟಿಕ್ ಕಂಪನಿ ನಡೆಸುತ್ತಿದ್ದರು.

ಜಯಶ್ರೀ ಉಲ್ಲಾಳ್ (ಅರಿಸ್ಟಾ ನೆಟ್‌ವರ್ಕ್ಸ್)



ಅಮೆರಿಕದ ಕೋಟ್ಯಾಧೀಶೆ ಉದ್ಯಮಿ ಜಯಶ್ರೀ ಉಲ್ಲಾಳ್ (60) ಅವರು ಕ್ಲೌಡ್ ನೆಟ್‌ವರ್ಕ್ ಕಂಪನಿ ‘ಅರಿಸ್ಟಾ’ದ ಸಿಇಒ ಆಗಿದ್ದಾರೆ. ಲಂಡನ್‌ನಲ್ಲಿ ಹುಟ್ಟಿದ ಇವರು ದೆಹಲಿಯಲ್ಲಿ ಆರಂಭಿಕ ಶಿಕ್ಷಣ ಪಡೆದರು. ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊ ವಿಶ್ವವಿದ್ಯಾಲಯದಿಂದ ಎಲೆಕ್ಟ್ರಾನಿಕ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು. ಎಎಂಡಿಯಲ್ಲಿ ಎಂಜಿನಿಯರ್ ಆಗಿ ವೃತ್ತಿ ಆರಂಭಿಸಿದ ಇವರು, ಅಲ್ಲಿ ಮಹತ್ವದ ಹುದ್ದೆ ನಿಭಾಯಿಸಿದರು. ಫೇರ್‌ಚೈಲ್ಡ್ ಸೆಮಿಕಂಡಕ್ಟರ್ ಕಂಪನಿಯಲ್ಲೂ ಕೆಲಸ ಮಾಡಿದರು. 2008ರಲ್ಲಿ ಅರಿಸ್ಟಾ ಸಂಸ್ಥೆಯ ಸಿಇಒ ಹಾಗೂ ಮುಖ್ಯಸ್ಥರಾಗಿ ನೇಮಕಗೊಂಡರು. 2018ರ ವಿಶ್ವದ ಅತ್ಯುತ್ತಮ ಸಿಇಒ ಪ್ರಶಸ್ತಿ ಪಡೆದ ಅವರು, 2019ರ ಫಾರ್ಚೂನ್ ಅಗ್ರ 20 ಉದ್ಯಮಿಗಳಲ್ಲಿ ಒಬ್ಬರೆನಿಸಿದ್ದರು.

ಅರವಿಂದ್ ಕೃಷ್ಣ (ಐಬಿಎಂ)



ಐಐಟಿ ಕಾನ್ಪುರದ ಪದವೀಧರ ಅರವಿಂದ್ ಕೃಷ್ಣ (59) ಅವರಿಗೆ ಅಮೆರಿಕದ ಪ್ರಸಿದ್ಧ ಐಟಿ ಕಂಪನಿ ‘ಐಬಿಎಂ’ ಜೊತೆ ಎರಡು ದಶಕಗಳ ಒಡನಾಟವಿದೆ. 1990ರಲ್ಲಿ ಇವರು ಸಂಸ್ಥೆಯನ್ನು ಸೇರಿದ್ದರು. ಇಲಿನಾಯ್ ವಿಶ್ವವಿದ್ಯಾಲಯದಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಪಿಎಚ್‌.ಡಿ ಪಡೆದಿದ್ದಾರೆ. 2020ರ ಏಪ್ರಿಲ್‌ನಲ್ಲಿ ಐಬಿಎಂ ಸಿಇಒ ಆಗಿ ನೇಮಕವಾದ ಅವರು, 2021ರ ಜನವರಿಯಿಂದ ಕಂಪನಿಯ ಮುಖ್ಯಸ್ಥರ ಹೊಣೆಯನ್ನೂ ಹೊತ್ತುಕೊಂಡಿದ್ದಾರೆ. ಇವರಿಗೂ ಮುನ್ನ ಸಿಇಒ ಹುದ್ದೆಯಲ್ಲಿದ್ದ ವರ್ಜಿನಿಯಾ ರೊಮೆಟ್ಟಿ ಅವರು, ಮುಂದಿನ ತಲೆಮಾರಿನ ಐಬಿಎಂ ನಿರ್ವಹಿಸಲು ಕೃಷ್ಣ ಸಮರ್ಥರು ಎಂದು ಶ್ಲಾಘಿಸಿದ್ದರು.

ಅಜಯ್‌ಪಾಲ್ ಬಂಗಾ (ಮಾಸ್ಟರ್‌ಕಾರ್ಡ್)

1990ರಲ್ಲಿ ‘ಮಾಸ್ಟರ್‌ಕಾರ್ಡ್’ನ ಪ್ರವರ್ತಕರಾಗಿದ್ದ ಅಜಯ್‌ಪಾಲ್ ಸಿಂಗ್ ಬಂಗಾ (62) ಅವರು 2020ರ ಡಿಸೆಂಬರ್‌ವರೆಗೂ ಸಂಸ್ಥೆಯ ಸಿಇಒ ಆಗಿದ್ದರು. ಈಗ ಅವರು ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದಾರೆ. ಅಮೆರಿಕ–ಭಾರತ ಉದ್ಯಮ ಮಂಡಳಿ ಮುಖ್ಯಸ್ಥರಾಗಿಯೂ ಕೆಲಸ ಮಾಡಿದ್ದಾರೆ. ಪಂಜಾಬ್‌ನ ಜಲಂಧರ್ ಮೂಲದ ಕುಟುಂಬಕ್ಕೆ ಸೇರಿದ ಬಂಗಾ ಅವರು, ಮಹಾರಾಷ್ಟ್ರದ ಪುಣೆಯಲ್ಲಿ ಜನಿಸಿದರು. ಇಲ್ಲಿ ಅವರ ತಂದೆ ಭಾರತೀಯ ಸೇನೆಯಲ್ಲಿ ಕೆಲಸ ಮಾಡುತ್ತಿದ್ದರು. ಹೈದರಾಬಾದ್‌ನ ಬೇಗಂಪೇಟೆ ಪಬ್ಲಿಕ್ ಸ್ಕೂಲ್‌ನಲ್ಲಿ ಅಧ್ಯಯನ ಮಾಡಿದ ಬಂಗಾ, ದೆಹಲಿ ವಿಶ್ವವಿದ್ಯಾಲಯದ ಸೇಂಟ್ ಸ್ಟೀಫನ್ಸ್ ಕಾಲೇಜ್‌ನಿಂದ ಪದವಿ ಪಡೆದರು. ನಂತರ ಅಹಮದಾಬಾದ್‌ನ ಐಐಎಂನಿಂದ ಎಂಬಿಎ ಪದವಿಯನ್ನೂ ಪಡೆದರು.

ನಿಕೇಶ್ ಅರೋರಾ (ಪಾಲೊ ಆಲ್ಟೊ ನೆಟ್‌ವರ್ಕ್ಸ್)



ಗೂಗಲ್ ಹಾಗೂ ಸಾಫ್ಟ್‌ಬ್ಯಾಂಕ್‌ನ ಅಧ್ಯಕ್ಷರಾಗಿ 2016ರವರೆಗೂ ಕೆಲಸ ಮಾಡಿದ್ದ ನಿಕೇಶ್ ಅರೋರಾ (53) ಅವರು 2018ರ ಜೂನ್ 1ರಿಂದ ‘ಪಾಲೊ ಆಲ್ಟೊ ನೆಟ್‌ವರ್ಕ್ಸ್’ನ ಸಿಇಒ ಆಗಿ ಕೆಲಸ ಮಾಡುತ್ತಿದ್ದಾರೆ. ಅರೋರಾ ಅವರು ಸಾಫ್ಟ್‌ಬ್ಯಾಂಕ್ ಮುಖ್ಯಸ್ಥರಾಗಿದ್ದಾಗ, ವಿಶ್ವದ ಅತಿ ಹೆಚ್ಚು ಸಂಭಾವನೆ ಪಡೆದ ಸಿಇಒ ಎಂಬ ದಾಖಲೆ ಬರೆದಿದ್ದರು. ವಾಯುಪಡೆ ಅಧಿಕಾರಿಯ ಮಗನಾಗಿ ಉತ್ತರ ಪ್ರದೇಶದ ಗಾಜಿಯಾಬಾದ್‌ನಲ್ಲಿ ಹುಟ್ಟಿದ ಇವರು, 1989ರಲ್ಲಿ ವಾರಾಣಸಿ ಐಐಟಿಯಿಂದ (ಬಿಎಚ್‌ಯು) ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು. ಬೋಸ್ಟನ್ ಕಾಲೇಜ್‌ನಿಂದ ಪದವಿ ಹಾಗೂ ನಾರ್ತ್‌ಈಸ್ಟ್ ವಿಶ್ವವಿದ್ಯಾಲಯದಿಂದ ಎಂಬಿಎ ಪಡೆದಿದ್ದಾರೆ.

ವೇದವ್ಯಾಸರ ಶಿವಪುರಾಣದ ಕುಮಾರಖಂಡಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 18

ಗಣೇಶನಿಗೆ ಪ್ರಧಾನ ಪದವಿ

ಗಣಪತಿ ಬದುಕಿದ ಮೇಲೆ ಪಾರ್ವತಿ ತುಂಬ ಸಂತೋಷಪಟ್ಟಳು. ಪಾರ್ವತೀಪುತ್ರನಿಗೆ ಗಣನಾಯಕರಾದ ದೇವತೆಗಳೆಲ್ಲರೂ ಸೇನಾಧಿಪತ್ಯವನ್ನು ಅರ್ಪಿಸಿದರು. ಮಗ ಸೇನಾಧಿಪತಿಯಾದುದನ್ನು ನೋಡಿ ಪಾರ್ವತಿ ಸಂತೋಷದಿಂದ ಬಾಲಕನನ್ನು ಪ್ರೀತಿಯಿಂದ ಆಲಂಗಿಸಿದಳು. ಪ್ರೀತಿಯಿಂದ ನಾನಾವಿಧವಾದ ವಸ್ತ್ರಾಭರಣಗಳಿಂದ ಗಜಾನನನ್ನು ಅಲಂಕರಿಸಿದಳು. ಅಣಿಮಾದಿಸಿದ್ಧಿಗಳೂ ಗಜಾನನನ್ನು ಪೂಜಿಸಿದರು. ಆಮೇಲೆ ದೇವಿಯು ಸರ್ವದುಃಖನಿವಾರಕವಾದ ತನ್ನ ಕೈಯಿಂದ ಮಗನನ್ನು ಸ್ಪರ್ಶಮಾಡಿದಳು. ಹಾಗೆಯೇ ಮಗನಿಗೆ ಅನೇಕ ವರಗಳನ್ನು ಅನುಗ್ರಹಿಸಿದಳು.

‘ಮಗು ಗಜಾನನೇ, ಸಮಸ್ತ ದೇವತೆಗಳೂ ತಮ್ಮ ಕಾರ್ಯಾರಂಭದಲ್ಲಿ ಮೊದಲು ನಿನ್ನನ್ನು ಪೂಜಿಸಲಿ. ನೀನು ಸರ್ವರಿಗೂ ದುಃಖನಾಶಕನಾಗಿರು. ನಿನ್ನ ಮುಖದಲ್ಲಿ ಈಗ ಚಂದ್ರವು (ಸಿಂದೂರವು) ಸ್ಪಷ್ಟವಾಗಿ ಕಂಡುಬರುತ್ತಿದೆ. ಆದ್ದರಿಂದ ಸಮಸ್ತ ಮಾನವರು ನಿನ್ನನ್ನು ಸಿಂದೂರದಿಂದಲೇ ಪೂಜಿಸುತ್ತಿರಲಿ. ಯಾರು ನಿನ್ನನ್ನು ಹೂವು, ಗಂಧ, ಚಂದನ, ರುಚಿಕರವಾದ ನೈವೇದ್ಯಾದಿಗಳು, ನೀರಾಜನ, ತಾಂಬೂಲ ಮುಂತಾದ ಪೂಜಾದ್ರವ್ಯಗಳಿಂದ ಅರ್ಚಿಸಿ, ನಮಸ್ಕಾರಾದಿಗಳಿಂದ ತೃಪ್ತಿಪಡಿಸುವರೋ ಅವರಿಗೆ ಸಕಲೇಷ್ಟಾರ್ಥಗಳೂ ಸಿದ್ಧಿಸಲಿ. ಸಮಸ್ತ ವಿಘ್ನಗಳೂ ಪರಿಹಾರವಾಗಲಿ’ ಎಂದು ಹರಸಿದಳು.

ಇದೇ ಸಮಯದಲ್ಲಿ ಇಂದ್ರಾದಿದೇವತೆಗಳು ಗಜಾನನನ್ನು ಪರಮೇಶ್ವರನ ತೊಡೆಯ ಮೇಲೆ ಕೂರಿಸಿದರು. ಈಶ್ವರ ಪ್ರೀತಿಯಿಂದ ತನ್ನ ಕೈಯನ್ನು ಮಗನ ಶಿರದ ಮೇಲಿಟ್ಟು ಹರಸಿದ. ಆಗ ಗಣಪತಿಯು ಒಡನೆಯೇ ಎದ್ದು, ಶಿವಪಾರ್ವತಿಯರಿಗೂ ವಿಷ್ಣು ಮತ್ತು ಬ್ರಹ್ಮನಿಗೂ ವಂದಿಸಿದ. ನಂತರ ನಾರದ ಮತ್ತಿತರ ಮಹರ್ಷಿಗಳ ಕಡೆಗೆ ತಿರುಗಿ ತನ್ನ ಅಪರಾಧವನ್ನು ಕ್ಷಮಿಸಬೇಕೆಂದೂ ಕೋಪದ ಪರಿಣಾಮದಿಂದಾದ ಅನಾಹುತಗಳಿಗೆ ಕ್ಷಮಾಪಣೆ ಬೇಡಿದ. ಆಗ ಬ್ರಹ್ಮ, ವಿಷ್ಣು, ಮಹೇಶ್ವರರು ಅವನ ಭಕ್ತಿಗೆ ಮೆಚ್ಚಿ ಪ್ರೀತಿಯಿಂದ ಅನೇಕ ವರಗಳನ್ನು ಅನುಗ್ರಹಿಸಿದರು. ‘ನಾವು ಹೇಗೆ ಪೂಜೆಗೆ ಆದಿದೇವತೆಗಳೋ ಹಾಗೆಯೇ ಈತನು ಪ್ರಧಾನ ದೇವತೆಯಾಗಿರಲಿ. ವಿಘ್ನನಾಶಕನಾಗಿ ಭೂಲೋಕದಲ್ಲಿ ಪ್ರಸಿದ್ಧಿ ಪಡೆಯಲಿ. ಗಣಪತಿಗೆ ಪೂಜೆಯನ್ನು ಮಾಡದೆ ನಮ್ಮನ್ನು ಪೂಜಿಸಿದರೆ ನಮ್ಮನ್ನು ಪೂಜೆ ಮಾಡಿದಂತಾಗುವುದಿಲ್ಲ. ಯಾವ ದೇವತಾರಾಧನೆ ಮಾಡಬೇಕಾದರೂ ಮೊದಲು ಗಣಪನನ್ನು ಆರಾಧಿಸಬೇಕು. ಹಾಗೆ ಮಾಡದೇ ಹೋದರೆ ಅವರ ಇಷ್ಟಾರ್ಥಗಳು ಎಂದಿಗೂ ನೆರವೇರಲಾರವು’ ಎಂದು ವರಗಳನ್ನಿತ್ತರು.

ಶಂಕರನು ‘ಎಲೈ ಪಾರ್ವತೀಪುತ್ರನೇ, ನೀನು ವಿಘ್ನಗಳನ್ನು ನಾಶಮಾಡುವವನು ಎಂಬ ಕೀರ್ತಿಯು ಸರ್ವತ್ರ ವ್ಯಾಪಿಸಲಿ. ನಮ್ಮ ಪ್ರಮಥಗಣಗಳಿಗೆಲ್ಲಾ ನೀನೇ ಅಧ್ಯಕ್ಷನಾಗಿರು. ನೀನು ಭಾದ್ರಪದ ಬಹುಳ ಚತುರ್ಥಿಯ ಚಂದ್ರೋದಯ ಕಾಲದಲ್ಲಿ ಪಾರ್ವತಿಯ ಮನಸ್ಸಿನಿಂದ ಪ್ರಥಮ ಯಾಮದಲ್ಲಿ ಜನಿಸಿರುವೆ. ಆದ್ದರಿಂದ ಇಷ್ಟಾರ್ಥಸಿದ್ಧಿಯನ್ನು ಪಡೆಯಲಿಚ್ಛಿಸುವವರು ಗಣೇಶಚತುರ್ಥಿ ಮತ್ತು ಪ್ರತಿ ತಿಂಗಳ ಚೌತಿಯಂದು ವ್ರತವನ್ನು ಮಾಡಿದರೆ, ಸಂಸಾರದಲ್ಲಿ ಸುಖವನ್ನು ಪಡೆಯುವರು. ಅದರಲ್ಲೂ ಮಾರ್ಗಶಿರಮಾಸದ ಚತುರ್ಥಿಯು ಅತ್ಯಂತ ಶುಭಫಲಪ್ರದವಾದದ್ದು. ಆದಿನ ಪ್ರಾತಃಕಾಲ ಸ್ನಾನಮಾಡಿ ಸತ್ಕರ್ಮನಿಷ್ಠರಾದ ಬ್ರಾಹ್ಮಣರನ್ನು ಆಹ್ವಾನಿಸಿ ವ್ರತವನ್ನಾಚರಿಸಬೇಕು. ಆ ದಿನ ಹಗಲು ಗರಿಕೆಯ ಹುಲ್ಲಿನಿಂದ ಅರ್ಚನೆಮಾಡಿ ಉಪವಾಸ ಮಾಡಬೇಕು. ರಾತ್ರಿ ಮೊದಲನೇ ಯಾಮದಲ್ಲಿ ಸ್ನಾನಮಾಡಿ. ಲೋಹದಿಂದಾಗಲೀ ಹವಳದಿಂದಾಗಲೀ ಶ್ವೇತಾರ್ಕಮೂಲದಲ್ಲಿ ದೊರೆತ ಮರದಿಂದಾಗಲೀ ಮಣ್ಣಿನಿಂದಾಗಲೀ ಮಾಡಿದ ಪ್ರತಿಮೆಯನ್ನು ಆರಾಧಿಸಬೇಕು. ಆ ಪ್ರತಿಮೆಯನ್ನು ನಾನಾವಿಧವಾದ ಗಂಧಪುಷ್ಪಗಳಿಂದಲೂ ದ್ವಾದಶಾಂಗುಲಪರಿಮಿತವಾದ ಬೇರಿಲ್ಲದಿರುವ ದೂರ್ವಾಂಕುರಗಳಿಂದಲೂ ಅರ್ಚಿಸಬೇಕು. ಅರ್ಚನಾದ್ರವ್ಯಗಳು ನೂರೊಂದು. ಆದರೆ ಗಣಪತಿಗೆ ಅತ್ಯಂತ ಪ್ರಿಯವಾಗುವುದು ಇಪ್ಪತ್ತೊಂದು ಸಂಖ್ಯೆ. ಧೂಪ, ದೀಪ, ನೈವೇದ್ಯ, ತಾಂಬೂಲ, ಅರ್ಘ್ಯ ಮುಂತಾದವುಗಳಿಂದ ಗಣಪತಿಯನ್ನು ಪೂಜಿಸಿ, ಅಂತ್ಯದಲ್ಲಿ ಬಾಲಚಂದ್ರನನ್ನು ಪೂಜಿಸಬೇಕು. ಗಣೇಶನ ಪುಸ್ತಕ ಇರುವ ಮನೆ ಸದಾ ಶುಭಕಾರ್ಯಗಳಿಂದ ಶೋಭಿಸುತ್ತದೆ. ಇದನ್ನು ಭಕ್ತಿಯಿಂದ ಕೇಳಿದವರು ಶ್ರೀ ಗಣೇಶನ ಅನುಗ್ರಹದಿಂದ ಸಕಲ ಇಷ್ಟಾರ್ಥಗಳನ್ನೂ ಪಡೆಯುವರು‘ ಎಂದು ಶಿವ ಅನುಗ್ರಹಿಸಿದ. ಇದನ್ನು ಕೇಳಿ ಪಾರ್ವತಿ ಸಂತುಷ್ಟಳಾದಳು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಉತ್ತರ ಪ್ರದೇಶದಲ್ಲಿ ಕಳೆದ ಭಾನುವಾರ ನಿಗದಿಯಾಗಿದ್ದ ಶಿಕ್ಷಕರ ಅರ್ಹತಾ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದಕ್ಕೆ ರದ್ದುಗೊಂಡಿತ್ತು. ಈ ಮಾಹಿತಿ ಇಲ್ಲದೇ, ಪರೀಕ್ಷೆ ಬರೆಯಲು ಹಿಂದಿನ ದಿನ ಲಖನೌಗೆ ಬಂದಿದ್ದ ಪರೀಕ್ಷಾರ್ಥಿಗಳು ರಸ್ತೆಬದಿ ಮಲಗಿ ರಾತ್ರಿ ಕಳೆದಿದ್ದರು. ಕೊರೆಯುವ ಚಳಿಯಲ್ಲಿ ಅವರು ರಸ್ತೆ ಬದಿ ಮಲಗಿದ್ದಾರೆ ಎಂದು ಬಿಂಬಿಸುವ ಚಿತ್ರ ವೈರಲ್ ಆಗಿದೆ. ಟ್ವಿಟರ್ ಹಾಗೂ ಫೇಸ್‌ಬುಕ್ ಬಳಕೆದಾರರು ಈ ಚಿತ್ರವನ್ನು ಹಂಚಿಕೊಂಡಿದ್ದಾರೆ.

ಈ ಚಿತ್ರ ರಾಜಸ್ಥಾನಕ್ಕೆ ಸಂಬಂಧಿಸಿದ್ದು ಎಂದು ಆಲ್ಟ್ ನ್ಯೂಸ್ ಹಾಗೂ ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆಗಳು ಸ್ಪಷ್ಟಪಡಿಸಿವೆ. ನೇಮಕಾತಿಗೆ ಆಗ್ರಹಿಸಿ 45 ದಿನಗಳಿಂದ ಪ್ರತಿಭಟನೆ ನಡೆಸುತ್ತಿರುವ ರಾಜಸ್ಥಾನದ ನಿರುದ್ಯೋಗಿಗಳು ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿಯಾಗಲು ಲಖನೌಗೆ ಬಂದಿದ್ದಾಗ ತೆಗೆದ ಚಿತ್ರ ಇದು. ಆದರೆ ಈ ಚಿತ್ರವು ಟಿಇಟಿ ಪರೀಕ್ಷಾರ್ಥಿಗಳಿಗೆ ಸಂಬಂಧಿಸಿದ್ದು ಎಂದು ತಪ್ಪಾಗಿ ಬಿಂಬಿತವಾಗಿದೆ. ಪರೀಕ್ಷೆ ಕುರಿತಂತೆ ದಾರಿತಪ್ಪಿಸುವ ಸುದ್ದಿ, ಮಾಹಿತಿ ಹಂಚಿಕೊಂಡ ಪ್ರಿನ್ಸ್ ಯಾದವ್ ಎಂಬ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಉತ್ತರ ಪ್ರದೇಶ ಪೊಲೀಸ್ ಇಲಾಖೆ ಟ್ವೀಟ್ ಮಾಡಿದೆ.

ಗುಂಡಣ್ಣ

ದಿನ ಭವಿಷ್ಯ

ಬುಧವಾರ ಡಿಸೆಂಬರ್ 1, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಕಾರ್ತೀಕ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಅನೂರಾಧ ದ್ವಾದಶಿ ಗಂ. 33-41 (ರಾ. 8-00) ಬುಧವಾರ ನಿತ್ಯ ನಕ್ಷತ್ರ ಚಿತ್ತೆ ಗಂ. 23-34 (ಹ. 3-58) ಸೌಭಾಗ್ಯ ನಾಮ ಯೋಗ ಗಂ. 30-46 ಕೌಲವ ಕರಣ ಗಂ. 5-44 ವಿಷ ಗಂ. 36-52 ಅಮೃತ ಗಂ 7-40 : ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 : ಸೂರ್ಯೋದಯ: 6-30 ಸೂರ್ಯಾಸ್ತ: 5-47 ಅದೃಷ್ಟ ಸಂಖ್ಯೆ 3, 8

ಮೇಷ: ಹಿರಿಯ ಉದ್ಯೋಗಿಗಳಾಗಿರುವವರು ದೇಹಾಲಸ್ಯದಿಂದಾಗಿ ಕಾರ್ಯಬಾಹುಳ್ಯವನ್ನು ಬೇರೆಯವರಿಗೆ ವರ್ಗಾಯಿಸುವ ಸಾಧ್ಯತೆ. ದವಸ ಧಾನ್ಯಗಳು ಆಹಾರ ಸಾಮಗ್ರಿಗಳ ವ್ಯಾಪಾರಸ್ಥರಿಗೆ ವಿಶೇಷ ಲಾಭ ದೊರಕಲಿದೆ.

ವೃಷಭ: ಮಕ್ಕಳ ಶ್ರೇಯಸ್ಸಿಗಾಗಿ ಅಧಿಕಾರಿಗಳ ಮೊರೆ ಹೋಗಬೇಕಾದೀತು. ಗುತ್ತಿಗೆ ವ್ಯವಹಾರ ನಡೆಸುವವರಿಗೆ ಹೆಚ್ಚಿನ ಆದಾಯ. ಸಹೋದ್ಯೋಗಿಗಳೊಂದಿಗಿನ ಭಿನ್ನಾಭಿಪ್ರಾಯಗಳು ದೂರವಾಗಿ ನೆಮ್ಮದಿ ಮೂಡಲಿದೆ.

ಮಿಥುನ: ಪುಷ್ಪೋದ್ಯಮದಲ್ಲಿ ತೊಡಗಿದವರಿಗೆ ವಿಶೇಷ ಬೇಡಿಕೆಯಿಂದಾಗಿ ಅಧಿಕ ಆದಾಯ ದೊರಕಲಿದೆ. ಕೃಷಿ ಕಾರ್ಯಗಳಿಗಾಗಿ ಹೆಚ್ಚಿನ ಹಣ ಮತ್ತು ಸಮಯ ವಿನಿಯೋಗಿಸಲಿದ್ದೀರಿ. ಕಲಾ ವಿನ್ಯಾಸಗಾರರಿಗೆ ಮನ್ನಣೆ ದೊರಕಲಿದೆ.

ಕರ್ಕಾಟಕ: ಸಂಶೋಧನಾ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುವುದರಿಂದ ನಿರ್ವಿಘ್ನವಾಗಿ ಕೆಲಸದಲ್ಲಿ ತೊಡಗಿಕೊಳ್ಳುವಿರಿ. ಖರ್ಚು ವೆಚ್ಚಗಳ ವಿಷಯದಲ್ಲಿ ಗಮನ ವಹಿಸಿ. ಆರೋಗ್ಯದ ಬಗ್ಗೆ ನಿಗಾ ಅಗತ್ಯ.

ಸಿಂಹ: ಶಿಕ್ಷಣದಲ್ಲಿ ಉತ್ತಮ ಅವಕಾಶದೊಂದಿಗೆ ಹೆಚ್ಚಿನ ಪ್ರಗತಿಯನ್ನು ಕಾಣುವಿರಿ. ಖರ್ಚು ವೆಚ್ಚಗಳ ವಿಷಯದಲ್ಲಿ ಕಡಿವಾಣವಿರುವುದು ಒಳಿತು. ಕುಟುಂಬದಲ್ಲಿ ಹೊಸ ವ್ಯಾಪಾರ ಆರಂಭಿಸುವುದರಿಂದ ಯಶಸ್ಸು ಸಾಧಿಸುವಿರಿ.

ಕನ್ಯಾ: ನಿರುದ್ಯೋಗಿಗಳಿಗೆ ಜಾಹೀರಾತು ಕ್ಷೇತ್ರಗಳಲ್ಲಿ ಉತ್ತಮ ಅವಕಾಶ ದೊರಕಲಿದೆ. ಕೆಲಸದಲ್ಲಿ ಹೊಸ ವಿನ್ಯಾಸ ತಯಾರಿಕೆಯಿಂದಾಗಿ ಉತ್ತಮ ಲಾಭ ಗಳಿಸಲಿದ್ದೀರಿ. ವಿಶೇಷ ಸಮಾರಂಭಗಳಲ್ಲಿ ಭಾಗಿಯಾಗುವಿರಿ.

ತುಲಾ: ಸಾಮಾಜಿಕ ಕ್ಷೇತ್ರಗಳಲ್ಲಿ ವಿಶೇಷ ಮನ್ನಣೆಯೊಂದಿಗೆ ಸನ್ಮಾನಗಳು ಪ್ರಾಪ್ತವಾಗಲಿವೆ. ಕೆಲಸದಲ್ಲಿನ ಒತ್ತಡ ನಿವಾರಣೆಯಾಗಿ ಬಿಡುವು ದೊರೆಯಲಿದೆ. ಧಾರ್ಮಿಕ ಗ್ರಂಥ ಪಠಣಗಳಲ್ಲಿ ಹೆಚ್ಚಿನ ಆಸಕ್ತಿ ಮೂಡಲಿದೆ.

ವೃಶ್ಚಿಕ: ಮಕ್ಕಳ ಆರೋಗ್ಯಕ್ಕಾಗಿ ಪೂಜೆ, ಪುನಸ್ಕಾರ ಮಾಡಲಿದ್ದೀರಿ. ಸ್ನೇಹಿತರಿಂದ ಹಣ ಹೂಡಿಕೆಗಾಗಿ ಒತ್ತಾಯ. ಹೆಣ್ಣುಮಕ್ಕಳು ತವರು ಮನೆಯವರಿಂದ ಉಡುಗೊರೆಗಳನ್ನು ಪಡೆದು ಸಂಭ್ರಮಿಸುವ ಸಾಧ್ಯತೆ.

ಧನು: ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಉತ್ತಮ ಲಾಭ. ದೇಹಾರೋಗ್ಯದ ಬಗ್ಗೆ ಕಾಳಜಿಯಿಂದಾಗಿ ನೆಮ್ಮದಿ ಮೂಡಿಬರಲಿದೆ. ಹತ್ತಿರದ ಸಂಬಂಧಿಕರೊಂದಿಗೆ ಸುದೀರ್ಘ ಸಮಾಲೋಚನೆಯಿಂದ ಕಾರ್ಯಸಿದ್ಧಿ.

ಮಕರ: ಕೆಲಸ–ಕಾರ್ಯಗಳು ಯಶಸ್ವಿಯಾಗಿ ನೆರವೇರಲಿವೆ. ವಸ್ತ್ರಾಭರಣಗಳನ್ನು ಖರೀದಿಸುವ ಸಾಧ್ಯತೆ. ತಂತ್ರಜ್ಞಾನ ಬಳಕೆಯಿಂದ ಅಧಿಕ ಲಾಭ ಗಳಿಸುವಿರಿ. ವಿಶೇಷ ವ್ಯಕ್ತಿಯೊಬ್ಬರ ಸಂಪರ್ಕವಾಗಲಿದೆ.

ಕುಂಭ: ಕಾರ್ಯಕ್ಷೇತ್ರಗಳಲ್ಲಿ ನೆಮ್ಮದಿ. ಆರ್ಥಿಕ ವಿಚಾರದಲ್ಲಿ ದೃಢತೆ ಮೂಡಲಿದೆ. ಮಕ್ಕಳಲ್ಲಿ ವಿನಾಕಾರಣ ವಾದ ವಿವಾದಗಳು ಉಂಟಾಗುವ ಸಾಧ್ಯತೆ. ಪೂಜಾ ಜೊತೆಗೆ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಕೊಳ್ಳುವಿರಿ.

ಮೀನ: ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶ. ಕಾರ್ಯಕ್ರಮವೊಂದರ ನಿರೂಪಕರಾಗಿ ಕಾರ್ಯ ನಿರ್ವಹಿಸುವ ಅವಕಾಶ ದೊರಕಲಿದೆ. ಮಿತ್ರರ ಸಹಕಾರವನ್ನು ಮರೆಯದಿರುವುದು ಒಳ್ಳೆಯದು.

ನಿಮ್ಮ ಜನ್ಮದಿನ 01-ಡಿಸೆಂಬರ್ ಈ ದಿನ ಅತ್ಯಂತ ಶುಭಕರ. ವರ್ಷವಿಡೀ ಪ್ರವಾಸದ ಹರ್ಷ ನಿಮ್ಮ ಪಾಲಿಗೆ ಲಭಿಸಲಿದೆ. ಮಿತ್ರರೊಂದಿಗೆ ಸಂತೋಷದ ಕ್ಷಣಗಳು ಎದುರಾಗುವವು. ಪುಸ್ತಕ ಲೇಖನಿಯೇ ಮುಂತಾದ ಶಿಕ್ಷಣ ಸಂಬಂಧಿ ವಸ್ತುಗಳ ಮಾರಾಟದಿಂದಾಗಿ ಉತ್ತಮ ಲಾಭ ಲಭಿಸುವುದು. ಕಚೇರಿಗಳಲ್ಲಿ ಕೆಲಸ ಮಾಡುವವರಿಗೆ ಸಂತಸದ ಸುದ್ದಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ದೈವ ಕರುಣೆ

ಪ್ರಾರಬ್ಧದಲಿ ನಿನ್ನ ಪುಣ್ಯವಿನಿತಾನುಮಿರೆ |
ಸೇರೆ ಪಶ್ಚಾತ್ತಾಪ ಭಾರವದರೊಡನೆ ||
ದಾರುಣದ ಕರ್ಮನಿಯತಿಯನಿನಿತು ಶಿಥಿಲಿಪುದು |
ಕಾರುಣ್ಯದಿಂ ದೈವ – ಮಂಕುತಿಮ್ಮ || 509 ||

ಪದ-ಅರ್ಥ: ಪ್ರಾರಬ್ಧ = ಮೊದಲು ಮಾಡಿದ ಕರ್ಮ, ಪುಣ್ಯವಿನಿತಾನುಮಿರೆ = ಪುಣ್ಯ + ಇನಿತಾನುಂ (ಸ್ವಲ್ಪವಾದರೂ) + ಇರೆ(ಇದ್ದರೆ), ದಾರುಣದ = ನೋವಿನ, ಕರ್ಮನಿಯತಿಯನಿನಿತು = ಕರ್ಮ + ನಿಯತಿಯನು(ನಿಯಮವನು), + ಇನಿತು (ಸ್ವಲ್ಪ), ಶಿಥಿಲಿಪುದು = ಕಡಿಮೆ ಮಾಡುವುದು

ವಾಚ್ಯಾರ್ಥ: ಪ್ರಾರಬ್ಧದಲ್ಲಿ ಸ್ವಲ್ಪವಾದರೂ ಪುಣ್ಯವಿದ್ದರೆ, ಅದರೊಡನೆ ಪಶ್ಚಾತ್ತಾಪದ ಭಾರ ಸೇರಿದರೆ, ಕರ್ಮದ ನಿಯಮದಂತೆ ದೊರೆಯಬೇಕಿದ್ದ ನೋವನ್ನು ದೈವ ಕರುಣೆಯಿಂದ ಕಡಿಮೆಮಾಡುತ್ತದೆ.

ವಿವರಣೆ: ಕರ್ಮಸಿದ್ಧಾಂತವು, ಭಾರತೀಯ ದರ್ಶನಗಳೆಲ್ಲ ಒಮ್ಮತದಿಂದ ಸ್ವೀಕರಿಸಿರುವ ತತ್ವ. ಹಿಂದೂ ಧರ್ಮದ ಪ್ರಕಾರ ಮನುಷ್ಯನ ಜೀವನ ಒಂದು ಮುಗಿದು ಹೋಗುವ ಗ್ರಂಥವಲ್ಲ. ಅದು ಸರಣಿಯಂತೆ ಬೆಳೆಯುತ್ತಲೇ ಹೋಗುವ ಪ್ರಕ್ರಿಯೆ. ಇದಕ್ಕೆ ಕೊನೆಯೆಂಬುದೇ ಇಲ್ಲ. ಮನುಷ್ಯ ತನ್ನ ಕರ್ಮಗಳಿಗೆ ಅನುಗುಣವಾಗಿ ಪುನಃ ಪುನಃ ಹುಟ್ಟಿ ಬರುತ್ತಾನೆ. ಮತ್ತೆ ಕರ್ಮ ಮಾಡುತ್ತಾನೆ. ಅದಕ್ಕೆ ಮತ್ತೆ ಕರ್ಮಫಲ.

ಇದೊಂದು ಕೊನೆಗೊಳ್ಳದ ಸರಪಳಿ. ಕರ್ಮದಲ್ಲಿ ಮೂರು ಬಗೆಗಳು.

1.ಸಂಚಿತ ಕರ್ಮ: ಹಿಂದಿನ ಜನ್ಮಗಳಲ್ಲಿ ಸಂಗ್ರಹವಾದ ಕರ್ಮಗಳ ಮೊತ್ತ.

2.ಆಗಾಮಿ ಕರ್ಮ: ಇದು ಮುಂದೆ ಅನುಭವಿಸಬೇಕಾದ ಕರ್ಮಫಲ. ಈ ಜೀವನದಲ್ಲಿ ಮಾಡುವ ಕರ್ಮಗಳಿಗೆ ಅನುಗುಣವಾಗಿ ಬರುವ ಫಲಗಳು.

3.ಪ್ರಾರಬ್ಧ ಕರ್ಮ: ಹಿಂದಿನ ಜನ್ಮಗಳಲ್ಲಿ ಮಾಡಿದ ಪಾಪ-ಪುಣ್ಯಗಳ ಫಲವಾಗಿ ಈ ಜನ್ಮದಲ್ಲಿ ಪಡುವ ಸುಖ-ದುಃಖಗಳು. ಅವುಗಳ ಮೇಲೆ ನಮ್ಮ ಹತೋಟಿಯಿಲ್ಲ. ಆದರೆ ಸುಕೃತಗಳಿಂದ ಅವುಗಳನ್ನು ಕಡಿಮೆ ಮಾಡಿಕೊಳ್ಳಬಹುದು.

ಹಿಂದಿನ ಜನ್ಮಗಳಲ್ಲೇನಾದರೂ ಒಳ್ಳೆಯ ಕಾರ್ಯಗಳನ್ನು ಮಾಡಿದ್ದರೆ, ಅದರ ಜೊತೆಗೆ ಪಶ್ಚಾತ್ತಾಪ, ಭಕ್ತಿಗಳು ಉದಯಿಸಿದರೆ, ದೈವ ಕೊಂಚ ಕರುಣೆ ತೋರಬಹುದು, ಎನ್ನುತ್ತದೆ ಕಗ್ಗ.

ಇಂದ್ರದ್ಯುಮ್ನನೆಂಬ ಸಾತ್ವಿಕರಾಜ ಆರಾಧನೆಯಲ್ಲಿ ಮಗ್ನನಾದಾಗ ತನ್ನನ್ನು ಗಮನಿಸಲಿಲ್ಲವೆಂದು ಅಗಸ್ತ್ಯಮುನಿ ಕೋಪದಿಂದ ಆನೆಯಾಗಿ ಹೋಗು ಎಂದು ಶಾಪಕೊಟ್ಟನಂತೆ. ಮತ್ತೊಬ್ಬ ಹುಹೂ ಎಂಬ ಗಂಧರ್ವ ಪತ್ನಿಯರೊಂದಿಗೆ ಜಲಕ್ರೀಡೆಯಾಡುತ್ತಿರುವಾಗ, ಹುಡುಗಾಟಿಕೆಯಿಂದ, ಅಲ್ಲಿಗೆ ಬಂದ ಋಷಿಗಳ ಕಾಲು ಎಳೆದನಂತೆ. ಅದಕ್ಕೆ ಅವರು ಮೊಸಳೆಯಾಗು ಎಂದು ಶಾಪ ನೀಡಿದರು. ಇಬ್ಬರೂ ಒಂದೇ ಕಡೆಗೆ ಹುಟ್ಟಿದರು. ಇದು ಪ್ರಾರಬ್ಧ ಕರ್ಮ. ಮೂಲತಃ ಇಬ್ಬರೂ ಒಳ್ಳೆಯವರೇ ಆಗಿದ್ದರಿಂದ ಮತ್ತು ಪಶ್ಚಾತ್ತಾಪ ಪಟ್ಟದ್ದರಿಂದ ಮುಕ್ತಿಗೆ ಕಾಯುತ್ತಿದ್ದರು. ಒಂದು ದಿನ ನೀರು ಕುಡಿಯಲು ಬಂದ ಆನೆಯ ಕಾಲನ್ನು ಮೊಸಳೆ ಹಿಡಿದಾಗ, ಬಿಡಿಸಿಕೊಳ್ಳಲಾಗದೆ, ಆನೆ ಆರ್ತತೆಯಿಂದ ದೇವರನ್ನು ಬೇಡಿದಾಗ ವಿಷ್ಣು, ತನ್ನ ಚಕ್ರದಿಂದ ಮೊಸಳೆಯ ಬಾಯನ್ನು ಕತ್ತರಿಸಿ, ಆನೆಯನ್ನು ಪಾರು ಮಾಡಿದ. ಮೊಸಳೆ ಮತ್ತು ಆನೆ ಇಬ್ಬರಿಗೂ ಮೋಕ್ಷವಾಯಿತಂತೆ.

ಪ್ರಾರಬ್ಧ ಕರ್ಮದ ಫಲವನ್ನು ಅನುಭವಿಸಿದರೂ, ಪಶ್ಚಾತ್ತಾಪದಿಂದ ದೈವವನ್ನು ಒಲಿಸಿಕೊಂಡಾಗ ಫಲದ ತೀಕ್ಷ್ಣತೆ ಕಡಿಮೆಯಾಗುತ್ತದೆ.

ಪದಬಂಧ 4794

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆರಕ್ಷಕನು ಕಲಿತಿರುವ ವರ್ಣ! (3)
3.ಒಟ್ಟುಗೂಡಿಸುವುದು (3)
5.ಸವಾರ ಧರಿಸಿರುವ ಮಾಲೆ (2)
6.ಮಯನ ಬಳಿ ಕಳೆದ ಕಾಲ (3)
7.ರಭಸವಾಗಿ ಹರಿಯುತ್ತಿರುವ ದ್ರವ (2)
9.ಕಾವಿ ಬಣ್ಣದ ಬಟ್ಟೆ (3)
10.ಒಳ್ಳೆಯ ಅವಕಾಶ (3)
11.ನಗರದಲ್ಲಿ ಖರೀದಿಸಿದ ದಾಗೀನು (2)
13.ಪುಷ್ಪಗಳನ್ನು ಜೋಡಿಸಿಟ್ಟಿರುವ ಕರಂಡಕ (3)
15.ಕುಟಿಲತನಕ್ಕೆ ಹೆಸರಾದ ಪ್ರಾಣಿ (2)
16.ಈತ ಯೌವ್ವನಿಗ (3)
17.ನಯವಾಗಿ ಹೊಳೆಯುತ್ತಿರುವ ಅಕ್ಷಿ (3)

ಮೇಲಿಂದ ಕೆಳಕ್ಕೆ
1.ಚುಂಬಿಸಲು ಯೋಗ್ಯವಾಗಿರುವ ತುಟಿ! (3)
2.ಬೊಕ್ಕಸದ ಹತ್ತಿರವಿರುವ ಅಸುರ (3)
3.ದಾಯಾದಿ ಮಾಡಿರುವ ಪಾವತಿ (3)
4.ಹರನನ್ನು ಒಲಿಸಿಕೊಂಡಿರುವ ಶೂರ! (3)
5.ಒಂದೇ ಕಾಲದಲ್ಲಿದ್ದವನು (5)
8.ಸ್ವೇಚ್ಛೆಯಾಗಿ ಆಡಳಿತ ನಡೆಸುವವನು (5)
12.ಗಣಿಯ ಬಳಿ ಕಲಿತಿರುವ ಲೆಕ್ಕಶಾಸ್ತ್ರ (3)
13.ಪುಷ್ಪದ ಶರವಿದು (3)
14.ನಿಧಾನವಾಗಿ ಬಂದಿರುವ ಸಾವು! (3)
15.ನೃತ್ಯವನ್ನು ಹೀಗೆನ್ನಿ (3)



4793ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬದಲುಮಾತು 3.ಹೆಸರು
5.ತಲೆಬರಹ 7.ಷರಾ 9.ಹಗಲು
11.ಕದ 13.ವಿಮಾನಯಾನ
15.ಅವನಿ 16.ವರದಿಗಾರ

ಮೇಲಿಂದ ಕೆಳಕ್ಕೆ:
1.ಬದ್ಧದ್ವೇಷ
2.ಮಾವುತ 4.ಸನ್ನಾಹ
6.ಬಯಲು
8.ರಾಸು 9.ಹವನ
10.ಸುಂಕ
12.ದರಕಾರ 13.ವಿಪ್ಲವ
14.ನಗರ

ಸುಡೊಕು 5180

	4					6		1
9						2	7	
	7	2						8
		4		3		1		2
2	8		6	9				
		7			8		6	5
	5			1		4		7
		6	8		2		3	
4	2			5	7	8		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5179 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

ವೃದ್ಧಿಸಿದ ಕಾಂಗ್ರೆಸ್ ಬಲ, ಕ್ಷೇತ್ರದಲ್ಲೇ ಠಿಕಾಣಿ ಹೂಡಿದ ಬಿ.ಎಸ್.ವೈ

ಕಾಂಗ್ರೆಸ್–ಬಿಜೆಪಿ ನೇರ ಹಣಾಹಣಿ

• ಚಂದ್ರಹಾಸ ಹಿರೇಮಳಲಿ

ಶಿವಮೊಗ್ಗ: ದಾವಣಗೆರೆ ಜಿಲ್ಲೆಯ ಮೂರು, ಶಿವಮೊಗ್ಗ ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯನ್ನು ಒಳಗೊಂಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಆಯ್ಕೆ ಬಯಸಿ ನಾಲ್ವರು ಅಭ್ಯರ್ಥಿಗಳು ಕಣದಲ್ಲಿ ಇದ್ದರೂ, ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳ ಮಧ್ಯೆ ನೇರ ಹಣಾಹಣಿ ಏರ್ಪಟ್ಟಿದೆ.

ಹಾಲಿ ಸದಸ್ಯ ಕಾಂಗ್ರೆಸ್‌ನ ಆರ್.ಪ್ರಸನ್ನಕುಮಾರ್ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಬಿಜೆಪಿಯಿಂದ ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಎಚ್.ಶಂಕರಮೂರ್ತಿ ಪುತ್ರ ಡಿ.ಎಸ್.ಅರುಣ್, ಜೆಡಿಯುನಿಂದ ಬಿ.ಕೆ.ಶಶಿಕುಮಾರ್, ಪಕ್ಷೇತರ ಅಭ್ಯರ್ಥಿ ಪಿ.ವೈ.ರವಿ ಕಣದಲ್ಲಿ ಇದ್ದಾರೆ. ಹಿಂದಿನ ಚುನಾವಣೆಯಲ್ಲಿ ತ್ರಿಕೋನ ಸ್ಪರ್ಧೆ ಇತ್ತು. ಈ ಬಾರಿ ಜೆಡಿಎಸ್ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿಲ್ಲ. ಹೀಗಾಗಿ ಕಾಂಗ್ರೆಸ್, ಬಿಜೆಪಿ ಮಧ್ಯೆ ನೇರ ಸ್ಪರ್ಧೆಗೆ ಕಣ ಸಜ್ಜಾಗಿದೆ.

ಕ್ಷೇತ್ರದಲ್ಲೇ ಯಡಿಯೂರಪ್ಪ ಠಿಕಾಣಿ: ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಲು ಬಿಜೆಪಿ ನಾಯಕರು ಪಣತೊಟ್ಟವರಂತೆ ಕ್ಷೇತ್ರ ಸುತ್ತುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಒಂದು ವಾರ ಕ್ಷೇತ್ರದಲ್ಲೇ ಠಿಕಾಣಿ ಹೂಡಿದ್ದು, ಅಬ್ಬರದ ಪ್ರಚಾರ ಕೈಗೊಂಡಿದ್ದಾರೆ. ಹತ್ತು ವಿಧಾನ ಸಭಾ ಕ್ಷೇತ್ರಗಳಲ್ಲಿ ಒಂಬತ್ತರಲ್ಲಿ ಬಿಜೆಪಿ ಶಾಸಕರಿದ್ದು, ಎಲ್ಲರೂ ಸಾಥ್ ನೀಡುತ್ತಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ಪ್ರಸನ್ನಕುಮಾರ್ ಪರ ಮಾಜಿ ಸಚಿವರಾದ ಕಾಗೋಡು ತಿಮ್ಮಪ್ಪ, ಕಿಮ್ಮನೆ ರತ್ನಾಕರ ಸೇರಿದಂತೆ ಪಕ್ಷದ ಮುಖಂಡರ ದಂಡು ಪ್ರಚಾರದಲ್ಲಿ ತೊಡಗಿಸಿಕೊಂಡಿದೆ.

ಸೊರಬ ಕ್ಷೇತ್ರದ ಮಾಜಿ ಶಾಸಕ ಮಧು ಬಂಗಾರಪ್ಪ, ಸಹಕಾರಿ ಧುರೀಣ ಆರ್.ಎಂ.ಮಂಜುನಾಥ ಗೌಡ ಅವರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ ನಂತರ ಪಕ್ಷದ ಬಲ ವೃದ್ಧಿಸಿದೆ. ಜೆಡಿಎಸ್ ಮತಗಳನ್ನು ಸೆಳೆಯಲು ಎರಡೂ ಪಕ್ಷಗಳು ಕಸರತ್ತು ನಡೆಸಿವೆ.

‘ಹಿಂದಿನ ಚುನಾವಣೆಯಲ್ಲಿ ಹಣದ ಹೊಳೆ ಹರಿದಿತ್ತು. ಈ ಬಾರಿಯೂ ಹಲವು ಸದಸ್ಯರು ಅದೇ ನಿರೀಕ್ಷೆಯಲ್ಲಿ ಇದ್ದಾರೆ. ಇಲ್ಲಿ ಅಭ್ಯರ್ಥಿಯ ಒಳ್ಳೆಯತನ, ಪಕ್ಷನಿಷ್ಠೆಯ ಜತೆಗೆ ಹಣವೂ ಪ್ರಧಾನ ಪಾತ್ರ ವಹಿಸುತ್ತದೆ’ ಎನ್ನುತ್ತಾರೆ ಮತದಾರರು.

ಬಿಜೆಪಿಗೆ ಅಭಿವೃದ್ಧಿ ಮಂತ್ರ, ಕಾಂಗ್ರೆಸ್‌ಗೆ ಬೆಲೆ ಏರಿಕೆ ಅಸ್ತ್ರ: ಪ್ರಚಾರದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ಜಾರಿಗೆ ತಂದ ಅಬಿವೃದ್ಧಿ ಕೆಲಸಗಳು, ಜನಪರ ಕಾರ್ಯಗಳನ್ನು ಬಿಜೆಪಿ ಪ್ರಸ್ತಾಪಿಸುತ್ತಿದೆ. ಕಾಂಗ್ರೆಸ್ ಪೆಟ್ರೋಲ್, ಡೀಸೆಲ್ ಸೇರಿ ಅಗತ್ಯ ವಸ್ತುಗಳ ಬೆಲೆ ಏರಿಕೆ, ರೈತ ವಿರೋಧಿ ಕಾನೂನು ವಿಷಯ ಪ್ರಸ್ತಾಪಿಸಿ ಬಿಜೆಪಿಗೆ ಪ್ರತಿ ಸವಾಲು ಒಡ್ಡುತ್ತಿದೆ.

ಇದು ಪಕ್ಷಾತೀತ ಚುನಾವಣೆ. ಜನರು ಅಭ್ಯರ್ಥಿಯ ವ್ಯಕ್ತಿತ್ವಕ್ಕೆ ಮನ್ನಣೆ ನೀಡುತ್ತಾರೆ. ಬಿಜೆಪಿ ನಡೆಯಿಂದ ಜನರು ಬೇಸತ್ತು ಹೋಗಿದ್ದಾರೆ. ಇದು ಕಾಂಗ್ರೆಸ್‌ಗೆ ವರವಾಗಲಿದೆ.

ಆರ್.ಪ್ರಸನ್ನಕುಮಾರ್, ಕಾಂಗ್ರೆಸ್ ಅಭ್ಯರ್ಥಿ

ಕ್ಷೇತ್ರದ ಗ್ರಾಮ ಪಂಚಾಯತಿಗಳಲ್ಲಿ ಬಿಜೆಪಿ ಬೆಂಬಲಿಗರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅಭ್ಯರ್ಥಿ ನೆಪ ಮಾತ್ರ. ಪಕ್ಷವೇ ಪ್ರಧಾನ. ಹಾಗಾಗಿ, ಮೊದಲ ಪ್ರಾಶಸ್ತ್ಯ ಮತಗಳಲ್ಲೇ ಗೆಲುವು ದೊರಕಲಿದೆ.

ಡಿ.ಎಸ್.ಅರುಣ್, ಬಿಜೆಪಿ ಅಭ್ಯರ್ಥಿ

ಕಣದಲ್ಲಿರುವ ಅಭ್ಯರ್ಥಿಗಳು	
ಆರ್. ಪ್ರಸನ್ನಕುಮಾರ್	ಕಾಂಗ್ರೆಸ್
ಡಿ.ಎಸ್. ಅರುಣ್	ಬಿಜೆಪಿ
ಬಿ.ಕೆ. ಶಶಿಕುಮಾರ್	ಜೆಡಿಯು
ಪಿ.ವೈ. ರವಿ	ಪಕ್ಷೇತರ

ಮತದಾರರು	4,180
ಶಿವಮೊಗ್ಗ ಜಿಲ್ಲೆ	2,885
ದಾವಣಗೆರೆ ಜಿಲ್ಲೆ	1,295
ಮತಗಟ್ಟೆಗಳು	365
ಶಿವಮೊಗ್ಗ ಜಿಲ್ಲೆ	257
ದಾವಣಗೆರೆ ಜಿಲ್ಲೆ	108

ಪರಿಷತ್ ಚುನಾವಣೆ
ಕ್ಷೇತ್ರ ಸಮೀಕ್ಷೆ

ಬಿಜೆಪಿಗೆ ‘ಬಾಹ್ಯ ಅಭ್ಯರ್ಥಿ’ಸವಾಲು

ಕೊಡಗು: ಡಾ.ಮಂಥರ್‌ಗೌಡ – ಸುಜಾ ಕುಶಾಲಪ್ಪ ನಡುವೆ ನೇರ ಪೈಪೋಟಿ

• ಆದಿತ್ಯ ಕೆ.ಎ.

ಮಡಿಕೇರಿ: ಕೊಡಗಿನ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆಯುತ್ತಿರುವ ಚುನಾವಣೆಯ ಪ್ರಚಾರ ಕಣದಲ್ಲಿ ‘ಆಮದು ಅಭ್ಯರ್ಥಿ’ ಹಾಗೂ ‘ಕುಟುಂಬ ರಾಜಕಾರಣ’ದ ಆರೋಪ ದೊಡ್ಡ ಸದ್ದು ಮಾಡುತ್ತಿದೆ. ಜೆಡಿಎಸ್ ಅಭ್ಯರ್ಥಿ ಕಣದಿಂದ ಹಿಂದೆ ಸರಿದ ಬಳಿಕ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಮಾಜಿ ಸಚಿವ, ಬಿಜೆಪಿ ಮುಖಂಡ ಎ.ಮಂಜು ಅವರ ಪುತ್ರ ಡಾ.ಮಂಥರ್‌ಗೌಡ ಕಾಂಗ್ರೆಸ್ ಅಭ್ಯರ್ಥಿ. ಹಾಸನ ಜಿಲ್ಲೆಯ ಅರಕಲಗೂಡಿನವರಾದ ಮಂಥರ್‌ಗೌಡ ‘ಆಮದು ಅಭ್ಯರ್ಥಿ’ ಎಂದು ದೂರುತ್ತಾ ಬಿಜೆಪಿಯು ತನ್ನ ‘ಸ್ಥಳೀಯ’ ಅರ್ಹತೆಯನ್ನು ಮುಂದೊಡ್ಡಿದೆ.

ಆದರೆ ಡಾ.ಮಂಥರ್, ‘ಪಿತ್ರಾರ್ಜಿತ ಆಸ್ತಿ ಕೊಡಗಿನಲ್ಲಿದೆ. ನನ್ನ ತಾಯಿ, ಪತ್ನಿ ಇದೇ ಜಿಲ್ಲೆಯವರೇ’ ಎನ್ನುತ್ತಾ ಪ್ರಚಾರ ನಡೆಸಿದ್ದಾರೆ. ಸ್ಥಳೀಯ ಕಾಂಗ್ರೆಸ್ ಮುಖಂಡರೂ ‘ತಂತ್ರಗಾರಿಕೆ’ ರೂಪಿಸುತ್ತಿದ್ದಾರೆ. ಎ.ಮಂಜು ಅವರು ಇನ್ನೂ ಬಿಜೆಪಿಯಲ್ಲಿದ್ದು ಬಹಿರಂಗವಾಗಿ ಕಾಣಿಸಿಕೊಳ್ಳುತ್ತಿಲ್ಲ. ತೆರೆಮರೆಯಲ್ಲಿಯೇ ಉಳಿದು ಪುತ್ರನ ರಾಜಕೀಯ ಭವಿಷ್ಯಕ್ಕೆ ‘ಕಾರ್ಯತಂತ್ರ’ ರೂಪಿಸುತ್ತಿದ್ದಾರೆ.

ಬಿಜೆಪಿ ಅಭ್ಯರ್ಥಿ ಸುಜಾ ಕುಶಾಲಪ್ಪ, ಮಡಿಕೇರಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಸಹೋದರ. ‘ಬಿಜೆಪಿ ಕುಟುಂಬ ರಾಜಕಾರಣ ಮಾಡುತ್ತಿದೆ. ಕಳೆದ ಬಾರಿಯ ಪರಿಷತ್ ಚುನಾವಣೆಗೂ ಈ ಕುಟುಂಬದ ಸುನಿಲ್ ಸುಬ್ರಮಣಿಗೆ ಟಿಕೆಟ್ ನೀಡಲಾಗಿತ್ತು’ ಎಂದು ಕಾಂಗ್ರೆಸ್ ದೂಷಿಸುತ್ತಿದೆ.

‘ಜಿಲ್ಲೆಯ ಸಮಸ್ಯೆಗಳೇನೆಂದು ಗೊತ್ತು. ಎದುರಾಳಿಗೆ ಸಮಸ್ಯೆಗಳ ಅರಿವಿಲ್ಲ. ಕಾಂಗ್ರೆಸ್ ಹೊರಗಿನವರನ್ನು ಕಣಕ್ಕಿಳಿಸಿ, ಜಿಲ್ಲೆಯ ಸ್ವಾಭಿಮಾನಕ್ಕೆ ಧಕ್ಕೆ ತಂದಿದೆ’ ಎಂದು ಬಿಜೆಪಿ ಪ್ರಚಾರ ನಡೆಸಿದೆ. ಕಣದಲ್ಲಿ ಅಭಿವೃದ್ಧಿ ವಿಚಾರ ಗೌಣವಾಗಿದೆ.

ಇಬ್ಬರೂ ಕೋಟ್ಯಧೀಶರಾಗಿದ್ದು ರಾಜಕೀಯ ಕುಟುಂಬದ ಹಿನ್ನೆಲೆಯುಳ್ಳವರು. ‘ವೈಯಕ್ತಿಕ ವರ್ಚಸ್ಸು, ಆರ್ಥಿಕ ಬಲವೇ ಫಲಿತಾಂಶವನ್ನು ನಿರ್ಧರಿಸಲಿದೆ’ ಎಂಬ ಲೆಕ್ಕಾಚಾರವೂ ನಡೆದಿದೆ.

ಅಭಿವೃದ್ಧಿ ದೃಷ್ಟಿಯಿಂದ ಮತದಾರರು ನನ್ನನ್ನು ಬೆಂಬಲಿಸುವ ವಿಶ್ವಾಸವಿದೆ. ಹಿಂದಿನ ಚುನಾವಣೆಗಳಲ್ಲೂ ಇದು ಸಾಬೀತಾಗಿದೆ

ಸುಜಾ ಕುಶಾಲಪ್ಪ, ಬಿಜೆಪಿ ಅಭ್ಯರ್ಥಿ

ಮತದಾರರು ಬದಲಾವಣೆ ಬಯಸಿದ್ದಾರೆ. ನಾನು ಕೊಡಗಿಗೆ ನಾಯಕನಾಗಲು ಬಂದಿಲ್ಲ. ಕಾರ್ಯಕರ್ತನಾಗಿ ಬಂದಿರುವೆ

ಡಾ.ಮಂಥರ್‌ಗೌಡ, ಕಾಂಗ್ರೆಸ್ ಅಭ್ಯರ್ಥಿ

ಮತದಾರರು ಎಷ್ಟು?

654 ಪುರುಷರು
689 ಮಹಿಳೆಯರು
1,343 ಒಟ್ಟು

ಮತದಾರರಿರುವ ಸ್ಥಳೀಯ ಸಂಸ್ಥೆಗಳು	
ಗ್ರಾಮ ಪಂಚಾಯಿತಿ	103
ಪಟ್ಟಣ ಪಂಚಾಯಿತಿ	3
ನಗರಸಭೆ	1

ಸಹೋದರನ ‘ಮೌನ’; ಯಾರಿಗೆ ಲಾಭ?

ಸುಜಾ ಅವರ ಸಹೋದರ, ಕಳೆದ ಬಾರಿ ಇದೇ ಕ್ಷೇತ್ರದಿಂದ ಪರಿಷತ್‌ಗೆ ಆಯ್ಕೆಯಾಗಿದ್ದ ಎಂ.ಪಿ.ಸುನಿಲ್ ಸುಬ್ರಮಣಿಗೆ ಟಿಕೆಟ್ ತಪ್ಪಿರುವ ಕಾರಣಕ್ಕೆ ಅವರು ಪ್ರಚಾರದಲ್ಲಿ ಸಕ್ರಿಯವಾಗಿಲ್ಲ. ಬೇಸರವಿದ್ದರೂ ಅದು ಸ್ಫೋಟಗೊಂಡಿಲ್ಲ. ಅವರ ‘ಮೌನ’ ಯಾರಿಗೆ ಲಾಭ ಎಂಬ ಚರ್ಚೆ ನಡೆಯುತ್ತಿದೆ.

‘ಸುನಿಲ್ ಅವರ ಕ್ಷೇತ್ರ ತ್ಯಾಗದಿಂದ ಬಿಜೆಪಿ ಮುಖಂಡರು ಗೆಲುವಿಗಾಗಿ ಸಾಕಷ್ಟು ಶ್ರಮ ಹಾಕಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಈಗಲೇ ಫಲಿತಾಂಶ ಹೇಳಲು ಸಾಧ್ಯವಿಲ್ಲ. ಆರ್ಥಿಕ ಬಲವೂ ಗೆಲುವು ನಿರ್ಧರಿಸಲಿದೆ’ ಎಂದು ಮುಖಂಡರೊಬ್ಬರು ಹೇಳಿದರು.

ಮೇಲ್ಮನೆ ಚುನಾವಣೆ ಕಣ: ದೇವೇಗೌಡರ ಕುಟುಂಬಕ್ಕೆ ಪ್ರತಿಷ್ಠೆಯ ಅಖಾಡ • ಗೆಲುವಿನ ಹಾದಿ ಸುಗಮವೇ ?

ಕಾಂಗ್ರೆಸ್ ಸ್ಥಾನ ಕಸಿಯಲು ಜೆಡಿಎಸ್, ಬಿಜೆಪಿ ರಣತಂತ್ರ

• ಕೆ.ಎಸ್.ಸುನಿಲ್

ಹಾಸನ: ‘ಮಾಜಿ ಶಾಸಕ’, ‘ಉದ್ಯಮಿ’ ಹಾಗೂ ‘ವೈದ್ಯ’ –ಈ ಬಾರಿ ವಿಧಾನ ಪರಿಷತ್ ಚುನಾವಣೆಯ ಪೈಪೋಟಿಯನ್ನು ರಂಗೇರಿಸಿದ್ದಾರೆ.

ಕಾಂಗ್ರೆಸ್‌ನಿಂದ ಚನ್ನರಾಯಪಟ್ಟಣದ ಉದ್ಯಮಿ ಎಂ. ಶಂಕರ್ ಮೊದಲ ಬಾರಿಗೆ, ಮಾಜಿ ಶಾಸಕ ಎಚ್.ಎಂ.ವಿಶ್ವನಾಥ್ ಬಿಜೆಪಿಯಿಂದ ಹಾಗೂ ಶಾಸಕ ಎಚ್.ಡಿ.ರೇವಣ್ಣ ಪುತ್ರನಾದ ಸರ್ಜನ್ ಡಾ.ಸೂರಜ್ ಅವರು ಜೆಡಿಎಸ್‌ನಿಂದ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಪರಿಷತ್ ಹಾಲಿ ಸದಸ್ಯ ಗೋಪಾಲಸ್ವಾಮಿ ಅವರು ಮರು ಸ್ಪರ್ಧೆಗೆ ಆಸಕ್ತಿ ತೋರದ ಕಾರಣ ಕಾಂಗ್ರೆಸ್, ಹೊಸಬರಾದ ಶಂಕರ್ ಅವರನ್ನು ಕಣಕ್ಕಿಳಿಸಿದೆ. ‘ಅನುಭವಿ’ ವಿಶ್ವನಾಥ್ ಅವರನ್ನು ಬಿಜೆಪಿ ನೆಚ್ಚಿಕೊಂಡಿದೆ. ಈ ಇಬ್ಬರ ನಡುವೆ, ಚುನಾವಣೆಯಲ್ಲಿ ಸ್ಪರ್ಧಿಸಿದ ಅನುಭವವಿಲ್ಲದ ಡಾ.ಸೂರಜ್, ದೇವೇಗೌಡರ ಕುಟುಂಬದವರೆಂಬ ಹಿನ್ನೆಲೆಯಲ್ಲಿ ಗಮನ ಸೆಳೆಯುತ್ತಿದ್ದಾರೆ. ಮೂವರೂ ಕೋಟ್ಯಧೀಶರು.

ಕ್ಷೇತ್ರದ ಇತಿಹಾಸದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್‌ನದ್ದೇ ಪಾರುಪತ್ಯ. ಬಿಜೆಪಿ ಖಾತೆ ತೆರೆದಿಲ್ಲ. ಹಣ, ಅಧಿಕಾರ ಬಲದೊಂದಿಗೆ ಜಾತಿ, ವರ್ಗವಾರು ಲೆಕ್ಕಾಚಾರದಲ್ಲಿ ಮೂರೂ ಪಕ್ಷಗಳು ರಣತಂತ್ರ ಹೆಣೆದಿವೆ.

‘ಕುಟುಂಬ ರಾಜಕಾರಣ’ ಆರೋಪದ ನಡುವೆಯೂ, ದೇವೇಗೌಡರ ನಾಮಬಲ, ಜೆಡಿಎಸ್ ಕಾರ್ಯಕರ್ತರ ಪಡೆ, ಕ್ಷೇತ್ರದ ಮೇಲೆ ಪಕ್ಷದ ಹಿಡಿತ, ತಂದೆ ರೇವಣ್ಣ ಅವರ ಅಭಿವೃದ್ಧಿ ಕಾರ್ಯ ಹಾಗೂ ಕ್ಷೇತ್ರದಲ್ಲಿ ಪಕ್ಷವನ್ನು ಪ್ರತಿನಿಧಿಸುವ ಒಬ್ಬ ಸಂಸದ, ಆರು ಶಾಸಕರಿರುವುದು ಸೂರಜ್‌ಗೆ ವರವಾಗಬಹುದು ಎಂದೇ ಹೇಳಲಾಗುತ್ತಿದೆ.

ಅತಿವೃಷ್ಟಿ, ಕಾಡಾನೆ ಹಾವಳಿ ಸೇರಿದಂತೆ ಸಾಕಷ್ಟು ಸಮಸ್ಯೆಗಳ ಸುಳಿಯಲ್ಲಿ ಜಿಲ್ಲೆ ನಲುಗಿದೆ. ಆದರೆ, ಅಭ್ಯರ್ಥಿಗಳಿಗೆ ಅವು ಪ್ರಮುಖ ವಿಷಯಗಳಾಗಿಲ್ಲ. ಕುಟುಂಬ ರಾಜಕಾರಣವನ್ನು ಮುನ್ನೆಲೆಗೆ ತಂದು ಮತ ಕೇಳುತ್ತಿದ್ದಾರೆ.

ಎಂ.ಶಂಕರ್ ನೇರವಾಗಿ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸಿರುವುದರಿಂದ, ಕೈಯಲ್ಲಿರುವ ಕ್ಷೇತ್ರ ತಪ್ಪಿ ಹೋಗದಂತೆ ನೋಡಿಕೊಳ್ಳುವ ಸವಾಲು ಕಾಂಗ್ರೆಸ್ ನಾಯಕರ ಮುಂದಿದೆ. ರಾಜ್ಯ ನಾಯಕರು ಜಿಲ್ಲೆಗೆ ಭೇಟಿ ನೀಡಿದಾಗ ಒಗ್ಗಟ್ಟಾಗಿ ಕಾಣಿಸಿಕೊಳ್ಳುವ ಮುಖಂಡರು, ನಂತರ ಕಣ್ಣಾಮುಚ್ಚಾಲೆ ಆಡುತ್ತಿರುವುದು ಅಭ್ಯರ್ಥಿಗೆ ತಲೆನೋವಾಗಿದೆ.

‘2015ರಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವಿದ್ದಾಗ ಈ ಕ್ಷೇತ್ರ ಕಾಂಗ್ರೆಸ್‌ಗೆ ಒಲಿದಿತ್ತು. ಈ ಬಾರಿ ಗೆಲುವು ತಮ್ಮದೇ’ ಎನ್ನುತ್ತಿದ್ದಾರೆ ಶಂಕರ್.

ಬಿಜೆಪಿಗೆ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಜೆಡಿಎಸ್‌ನಿಂದ ಸಕಲೇಶಪುರ ಕ್ಷೇತ್ರದ ಶಾಸಕರಾಗಿ, ಬಳಿಕ ಕಾಂಗ್ರೆಸ್ ಸೇರಿ ಅಲ್ಲಿ ನೆಲೆ ಕಾಣದೇ ಬಿಜೆಪಿ ಸೇರಿದ್ದ ಎಚ್.ಎಂ.ವಿಶ್ವನಾಥ್ ಅವರು ಕೇಂದ್ರ, ರಾಜ್ಯದಲ್ಲಿರುವ ಅಧಿಕಾರದ ವರ್ಚಸ್ಸು ಹಾಗೂ ಸಂಘಟನಾ ಬಲವನ್ನು ನೆಚ್ಚಿಕೊಂಡಿದ್ದಾರೆ. ಅನ್ಯ ಪಕ್ಷದಿಂದ ಬಂದವರೆಂಬ ಕಾರಣಕ್ಕೆ ಮೂಲ ಬಿಜೆಪಿಗರು ಚುನಾವಣೆ ಬಗ್ಗೆ ಹೆಚ್ಚಿನ ಆಸಕ್ತಿ ತಳೆಯದಿರುವುದು ವಿಶ್ವನಾಥ್ ನಿದ್ದೆಗೆಡಿಸಿದೆ.

ಮಾಜಿ ಸಚಿವ ಎ.ಮಂಜು ಬಿಜೆಪಿಯಲ್ಲೇ ಇದ್ದರೂ ಅವರ ಪುತ್ರ ಡಾ.ಮಂಥರ್ ಗೌಡ ಕಾಂಗ್ರೆಸ್‌ನಿಂದ ಟಿಕೆಟ್ ಪಡೆದು ಕೊಡಗು ಜಿಲ್ಲೆಯಲ್ಲಿ ಸ್ಪರ್ಧಿಸಿದ ಬೆನ್ನಲ್ಲೇ ಬಿಜೆಪಿಯು, ಮಂಜು ಅವರನ್ನು ಜವಾಬ್ದಾರಿಯಿಂದ ಮುಕ್ತಿಗೊಳಿಸಿದೆ. ಹೀಗಾಗಿ ವಿಶ್ವನಾಥ್ ಅವರು ಬಹಳಷ್ಟು ‘ಕಸರತ್ತು’ ನಡೆಸಬೇಕಿದೆ.

ಜೆಡಿಎಸ್ ಪಕ್ಷಕ್ಕಾಗಿ ದುಡಿಯುವವರು ಸಾಮಾನ್ಯ ಕಾರ್ಯಕರ್ತರು ಮತ್ತು ಮುಖಂಡರಾಗಿಯೇ ಉಳಿಯಬೇಕು. ಕಾಂಗ್ರೆಸ್‌ಗೆ ಉತ್ತಮ ಪ್ರತಿಕ್ರಿಯೆ ದೊರಕಿದ್ದು, ಗೆಲ್ಲುವ ವಿಶ್ವಾಸ ಇದೆ.

ಎಂ.ಶಂಕರ್, ಕಾಂಗ್ರೆಸ್ ಅಭ್ಯರ್ಥಿ

ಕುಟುಂಬ ರಾಜಕಾರಣದ ದಾಹ ಜನರಿಗೆ ಹೇಸಿಗೆ ಮೂಡಿಸಿದೆ. ಅನುಭವ ಇಲ್ಲದಿದ್ದರೂ, ಗೌಡರ ಕುಟುಂಬ ಎಂದು ಅವಕಾಶ ನೀಡುವುದು ಒಪ್ಪಲು ಸಾಧ್ಯವೇ?

ಎಚ್.ಎಂ.ವಿಶ್ವನಾಥ್, ಬಿಜೆಪಿ ಅಭ್ಯರ್ಥಿ

ರಾಜ್ಯದ ಅಭಿವೃದ್ಧಿಗೆ ಜೆಡಿಎಸ್ ಕೊಡುಗೆ ಸಾಕಷ್ಟಿದೆ. ರಾಜಕೀಯ ಶಕ್ತಿ ನೀಡಿದರೆ ಮತ್ತಷ್ಟು ಅಭಿವೃದ್ಧಿ ಪಡಿಸುವೆ. ದೇವೇಗೌಡರ ಕುಟುಂಬ ಎಂದರೆ ಕುಟುಂಬ ರಾಜಕಾರಣ ತರ್ಲಾರೆ.

ಡಾ.ಆರ್.ಸೂರಜ್, ಜೆಡಿಎಸ್ ಅಭ್ಯರ್ಥಿ

ಹಾಸನ ಜಿಲ್ಲೆಯ ವಿವರ

258 ಮತ ಕೇಂದ್ರ
3,617 ಮತದಾರರು
1,714 ಪುರುಷರು
1,903 ಮಹಿಳೆಯರು

ಒಟ್ಟು ಗ್ರಾಮ ಪಂಚಾಯಿತಿಗಳು	
ಹಾಸನ	245
ನಗರಸಭೆ	2
ಪುರಸಭೆ	4
ಪಟ್ಟಣ ಪಂಚಾಯಿತಿ	2

ಮೇಲ್ಮನೆ ಚುನಾವಣೆ: ಪ್ರಧಾನಿ ಭೇಟಿ ಬಳಿಕ ದೇವೇಗೌಡ ಹೇಳಿಕೆ

ಮೈತ್ರಿ: ಎಚ್‌ಡಿಕೆ–ಬಿಎಸ್‌ವೈ ಅಂತಿಮ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ಚುನಾವಣೆಯಲ್ಲಿ ಜೆಡಿಎಸ್‌–ಬಿಜೆಪಿ ಮೈತ್ರಿ ವಿಚಾರವನ್ನು ಎಚ್.ಡಿ.ಕುಮಾರಸ್ವಾಮಿ ಮತ್ತು ಬಿ.ಎಸ್.ಯಡಿಯೂರಪ್ಪ ಅವರಿಗೆ ಬಿಟ್ಟಿದ್ದು, ಯಾವುದೇ ಗೊಂದಲ ಆಗದಂತೆ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡರು ಹೇಳಿದರು.

ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಂಗಳವಾರ ಭೇಟಿಯಾದ ಬಳಿಕ ಸುದ್ದಿಗಾರರ ಜತೆ ಅವರು ಮಾತನಾಡಿದರು. ಪರಿಷತ್ ಚುನಾವಣೆಯ ಮೈತ್ರಿ ಬಗ್ಗೆ ಬಿಜೆಪಿ ನಾಯಕರು ಏನು ತೀರ್ಮಾನ ತೆಗೆದುಕೊಳ್ಳುತ್ತಾರೋ ನೋಡೋಣ. ಮುಂದಿನ ಚುನಾವಣೆಗೆ ಮೈತ್ರಿ ಮುಂದುವರಿಸುವ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ ಎಂದರು.

‘ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಜೆಡಿಎಸ್ ಜತೆ ಹೊಂದಾಣಿಕೆ ಮಾಡಿಕೊಳ್ಳಬೇಕು ಎಂಬ ಮನಸ್ಸಿದೆ. ಆದರೆ, ಬೇರೆ ನಾಯಕರಿಗೆ ಮನಸ್ಸಿಲ್ಲ. ಖರ್ಗೆಯವರ ಮಾತು ಎಷ್ಟು ನಡೆಯುತ್ತದೆ? ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಏನಿದೆಯೋ ಗೊತ್ತಿಲ್ಲ. ಮೈತ್ರಿ ಮಾಡಿಕೊಳ್ಳಿ ಎಂದು ನಾವೇ ಮೇಲೆ ಬಿದ್ದು ಹೇಳಲು ಆಗಲ್ಲ’ ಎಂದು ದೇವೇಗೌಡರು ಪ್ರತಿಪಾದಿಸಿದರು.

‘ಬಿಬಿಎಂಪಿಯಲ್ಲಿ ನಾವು ಕಾಂಗ್ರೆಸ್‌ಗೆ ಬೆಂಬಲ ನೀಡಿದ್ದೆವು. ಅದರಿಂದ ಕಾಂಗ್ರೆಸ್‌ನವರು ಮೇಯರ್ ಆಗಿದ್ದರು. ನಮ್ಮ ಪಕ್ಷಕ್ಕೆ ಉಪಮೇಯರ್ ಸ್ಥಾನ ಸಿಕ್ಕಿತ್ತು. ಈಗ ಕಾಂಗ್ರೆಸ್‌ನವರು ಅದನ್ನೆಲ್ಲ ಮರೆತಿರಬಹುದು’ ಎಂದೂ ತಿಳಿಸಿದರು.

ಮೈತ್ರಿ ತೀರ್ಮಾನ ಮಾಡಿಲ್ಲ: ಎಚ್‌ಡಿಕೆ ‘ವಿಧಾನ ಪರಿಷತ್ ಚುನಾವಣೆಯಲ್ಲಿ ಬೆಂಬಲ ನೀಡುವಂತೆ ಮಾಧ್ಯಮಗಳ ಮೂಲಕ ಬಿ.ಎಸ್.ಯಡಿಯೂರಪ್ಪ ಮನವಿ ಮಾಡಿದ್ದಾರೆ. ಅವರು ಈ ಬಗ್ಗೆ ನನ್ನ ಜತೆ ವೈಯಕ್ತಿಕವಾಗಿ ಪ್ರಸ್ತಾಪ ಮಾಡದೇ ಇದ್ದರೂ ಸೌಜನ್ಯ ತೋರಿದ್ದಾರೆ. ಆದರೆ, ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರು ಜೆಡಿಎಸ್ ಬೆಂಬಲ ಬೇಡವೇ ಬೇಡ ಎಂದಿದ್ದಾರೆ. ನಾವು ಮೈತ್ರಿಯ ಬಗ್ಗೆ ತೀರ್ಮಾನ ಮಾಡಿಲ್ಲ. ನಮ್ಮ ಗುರಿ ಏನಿದ್ದರೂ 2023ರ ವಿಧಾನಸಭೆ ಚುನಾವಣೆ. ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ಸಂದರ್ಭ ನೋಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದು ಎಚ್.ಡಿ.ಕುಮಾರಸ್ವಾಮಿ ‘ಪ್ರಜಾವಾಣಿ’ಗೆ ತಿಳಿಸಿದರು.

ನವದೆಹಲಿಯ ಸಂಸತ್ ಭವನದಲ್ಲಿ ಮಂಗಳವಾರ ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಅವರೊಂದಿಗೆ ಮಾತುಕತೆ ನಡೆಸುವುದಕ್ಕೆ ಮೊದಲು ಪ್ರಧಾನಿ ನರೇಂದ್ರ ಮೋದಿ ಅವರು ಮಾಜಿ ಪ್ರಧಾನಿಗೆ ಕುಳಿತುಕೊಳ್ಳಲು ಕೋರಿದರು –ಪಿಟಿಐ ಚಿತ್ರ

ಹಾಸನ: ಐಐಟಿಗಾಗಿ ಮನವಿ

‘ಹಾಸನದಲ್ಲಿ ಐಐಟಿ ಸ್ಥಾಪನೆ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ್ದೆ’ ಎಂದು ದೇವೇಗೌಡರು ಹೇಳಿದರು.

‘ಹಾಸನಕ್ಕೆ ಐಐಟಿ ನೀಡಲು ಸಾಧ್ಯವಿಲ್ಲ ಎಂದು ಸಚಿವ ಧರ್ಮೇಂದ್ರ ಪ್ರಧಾನ್ ಅವರು ಪತ್ರ ಬರೆದಿದ್ದರು. ಪ್ರಧಾನಿಯವರನ್ನು ಭೇಟಿಯಾಗಿ ಮತ್ತೊಮ್ಮೆ ಅವರಿಗೆ ವಿವರಿಸಿ, ಮನವಿ ಮಾಡಿದೆ. ಹಿಂದೆ ಜೆಡಿಎಸ್‌–ಬಿಜೆಪಿ ಸಮ್ಮಿಶ್ರ ಸರ್ಕಾರ ಇದ್ದಾಗ ಐಐಟಿ ಸ್ಥಾಪನೆಯ ಘೋಷಣೆ ಮಾಡಲಾಗಿತ್ತು ಎಂಬುದನ್ನು ಅವರ ಗಮನಕ್ಕೆ ತಂದೆ’ ಎಂದು ತಿಳಿಸಿದರು.

‘ಈ ಬಗ್ಗೆ ಸಚಿವ ಪ್ರಲ್ಹಾದ ಜೋಶಿಯವರ ಜತೆ ಚರ್ಚಿಸುವುದಾಗಿ ಮೋದಿ ಅವರು ತಿಳಿಸಿದ್ದಾರೆ’ ಎಂದು ಗೌಡರು ಹೇಳಿದರು.‘ನನ್ನ ಜೀವನ ಚರಿತ್ರೆ ಸದ್ಯವೇ ಬಿಡುಗಡೆ ಆಗಲಿದ್ದು, ದಿನಾಂಕ ಇನ್ನೂ ನಿಗದಿ ಮಾಡಿಲ್ಲ’ ಎಂದರು.

ಚುನಾವಣಾ ಯಾತ್ರೆಗೆ ಬಿಜೆಪಿ ನಿರ್ಧಾರ

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಯ ಸಿದ್ಧತೆಗೆ ಮುಂದಾಗಿರುವ ಬಿಜೆಪಿ, ಜನರನ್ನು ತಲುಪುವುದಕ್ಕಾಗಿ ರಾಜ್ಯದಾದ್ಯಂತ ಆರು ಯಾತ್ರೆಗಳನ್ನು ನಡೆಸಲು ನಿರ್ಧರಿಸಿದೆ.

ಪಕ್ಷದ ಕಚೇರಿಯಲ್ಲಿ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ವತಂತ್ರದೇವ್ ಸಿಂಗ್ ಹಾಗೂ ಇತರ ಹಿರಿಯ ನಾಯಕರ ಸಮ್ಮುಖದಲ್ಲಿ ಮಂಗಳವಾರ ಈ ನಿರ್ಧಾರಕ್ಕೆ ಬರಲಾಗಿದೆ.

‘2022ರ ವಿಧಾನಸಭಾ ಚುನಾವಣೆಗಾಗಿ, ಪಕ್ಷವು ಆರು ಯಾತ್ರೆ ಹಮ್ಮಿಕೊಳ್ಳಲಿದೆ. ಪಕ್ಷದ ಕಾರ್ಯಕರ್ತರು, ಜನತೆಯ ಆಶೀರ್ವಾದದ ಬಲದೊಂದಿಗೆ ಬಿಜೆಪಿಯು ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ. 300ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವುದರೊಂದಿಗೆ ಸರ್ಕಾರ ರಚಿಸಲಿದೆ’ ಎಂದು ಸ್ವತಂತ್ರದೇವ್ ಸಿಂಗ್ ಟ್ವೀಟ್ ಮಾಡಿದ್ದಾರೆ.

ಪಕ್ಷದ ಯಾತ್ರೆಗಳಲ್ಲಿ, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಾಧನೆಗಳನ್ನು ಪ್ರಮುಖವಾಗಿ ಬಿಂಬಿಸಲಾಗುವುದು. ಯಾತ್ರೆಗೆ ಸಂಬಂಧಿಸಿದ ಇನ್ನಷ್ಟು ವಿವರಗಳನ್ನು ಅಂತಿಮಗೊಳಿಸಬೇಕಿದೆ ಎಂದು ಪಕ್ಷದ ಕಚೇರಿಯ ಮೂಲಗಳು ತಿಳಿಸಿವೆ. ಪಕ್ಷವು, 2014ರ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲೂ, ‘ಪರಿವರ್ತನಾ ಯಾತ್ರೆ’ಯ ಹೆಸರಿನಲ್ಲಿ ಸಮಾಜವಾದಿ ಪಕ್ಷದ ವಿರುದ್ಧ ಪ್ರಚಾರ ಆರಂಭಿಸಿತ್ತು.

ರಾಜ್ಯದ 403 ವಿಧಾನಸಭಾ ಸ್ಥಾನಗಳ ಪೈಕಿ, 312 ಸ್ಥಾನಗಳನ್ನು ಬಿಜೆಪಿ ಗೆದ್ದಿತ್ತು. 13 ಸ್ಥಾನಗಳಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದ ಪಕ್ಷಗಳು ಗೆಲುವು ಸಾಧಿಸಿದ್ದವು.

‘ಅಪರಾಧಿಗಳಿಗೆ ಶರಣಾದ ಕಾನೂನು–ಸುವ್ಯವಸ್ಥೆ’

ನವದೆಹಲಿ: ಉತ್ತರ ಪ್ರದೇಶದ ಕಾನೂನು–ಸುವ್ಯವಸ್ಥೆಯ ಬಗ್ಗೆ ಹರಿಹಾಯ್ದಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ, ದೂರದಿಂದ ಎಲ್ಲವೂ ಚೆನ್ನಾಗಿದೆ ಎಂದು ಸರ್ಕಾರ ಬಿಂಬಿಸಬಹುದು; ಆದರೆ, ವಾಸ್ತವಾಗಿ ಅಪರಾಧಗಳ ಅಂಕಿಸಂಖ್ಯೆಯು ಭಯಾನಕವಾಗಿದೆ ಎಂದಿದ್ದಾರೆ.

ಗೋರಖಪುರ ಜಿಲ್ಲೆಯಲ್ಲಿ ಏಳು ದಿನಗಳಲ್ಲಿ ಏಳು ಕೊಲೆ ನಡೆದಿವೆ ಎಂಬ ಮಾಧ್ಯಮ ವರದಿಯನ್ನು ಉಲ್ಲೇಖಿಸಿ, ಯೋಗಿ ಆದಿತ್ಯನಾಥ ನೇತೃತ್ವದ ಸರ್ಕಾರದ ವಿರುದ್ಧ ಅವರು ಮಂಗಳವಾರ ವಾಗ್ದಾಳಿ ನಡೆಸಿದ್ದಾರೆ.

‘ಮುಖ್ಯಮಂತ್ರಿಯ ಸ್ವಂತ ಕ್ಷೇತ್ರದಲ್ಲಿಯೇ ರಾಜ್ಯದ ಕಾನೂನು–ಸುವ್ಯವಸ್ಥೆಯು ಅಪರಾಧಿಗಳಿಗೆ ಶರಣಾಗಿದೆ. ಇನ್ನು ಉಳಿದ ಪ್ರದೇಶಗಳ ಸ್ಥಿತಿ ಹೇಗಿರಬಹುದು ಎಂಬುದನ್ನು ನೀವೇ ಊಹಿಸಬಹುದು’ ಎಂದು ಅವರು ಟ್ವೀಟ್ ಮಾಡಿದ್ದಾರೆ.

‘70 ವರ್ಷಗಳಲ್ಲಿ ಎರಡೇ ಮೃಗಾಲಯ’

ಲಖನೌ: ಉತ್ತರಪ್ರದೇಶದಲ್ಲಿ, 70 ವರ್ಷಗಳ ಅವಧಿಯಲ್ಲಿ ಕೇವಲ ಎರಡೇ ಎರಡು ಮೃಗಾಲಯ ಸ್ಥಾಪಿಸಲು ಸಾಧ್ಯವಾಗಿದೆ ಎಂದು ವಿರೋಧ ಪಕ್ಷಗಳನ್ನು ಟೀಕಿಸಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ, ತಮ್ಮ ಅಧಿಕಾರಾವಧಿಯ ಕಳೆದ ಐದು ವರ್ಷಗಳಲ್ಲಿಯೇ ಗೋರಖಪುರದಲ್ಲಿ ಮೃಗಾಲಯ ಸ್ಥಾಪನೆಯಾಗಿದೆ ಎಂದು ಹೇಳಿದರು.

ಅರಣ್ಯ ಇಲಾಖೆಯ ಪ್ರಯತ್ನದಿಂದ ನೂರು ಕೋಟಿ ಸಸಿಗಳನ್ನೂ ನೆಡಲಾಗಿದೆ ಎಂದರು.

ಇಲ್ಲಿನ ನವಾಬ್ ವಾಜಿದ್ ಮೃಗಾಲಯದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೋವಿಡ್–19 ಸಾಂಕ್ರಾಮಿಕವು ಪ್ರಾಣಿಗಳಿಗೂ ಸಂಕಷ್ಟದ ಸಮಯವಾಗಿತ್ತು ಎಂದು ಹೇಳಿದರು.

‘ಕಾಂಗ್ರೆಸ್‌ನಲ್ಲಿ ಸಿಎಂ ಸ್ಥಾನಕ್ಕೆ ಭಂಡಾಸುರ, ಮೊಂಡಾಸುರ ಕಚ್ಚಾಟ’

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಮುಖ್ಯಮಂತ್ರಿ ಯಾರಾಗಬೇಕು ಎಂಬ ಬಗ್ಗೆ ಕಾಂಗ್ರೆಸ್‌ನಲ್ಲಿ ಈಗಾಗಲೇ ಭಂಡಾಸುರ (ಡಿ.ಕೆ. ಶಿವಕುಮಾರ್) ಹಾಗೂ ಮೊಂಡಾಸುರರ (ಸಿದ್ದರಾಮಯ್ಯ) ನಡುವೆ ಕಚ್ಚಾಟ ನಡೆಯುತ್ತಿದೆ. ಒಳಜಗಳ ಮುಚ್ಚಿಕೊಳ್ಳಲು ಬಿಜೆಪಿ ಮೇಲೆ ಆರೋಪ ಮಾಡುತ್ತಿದ್ದಾರೆ ಎಂದು ಸಚಿವ ಬಿ.ಶ್ರೀರಾಮುಲು ಲೇವಡಿ ಮಾಡಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಎಂಬುದು ಭ್ರಮೆ. ಪ್ರಧಾನಿ ಮೋದಿ ಬಗ್ಗೆ ಹಗುರವಾಗಿ ಮಾತನಾಡಿ ನಾಯಕರಾಗಲು ಪೈಪೋಟಿ ನಡೆಸುತ್ತಿದ್ದಾರೆ’ ಎಂದು ಟೀಕಿಸಿದರು.

‘ಬಿಟ್ ಕಾಯಿನ್ ಬಗ್ಗೆ ಕಾಂಗ್ರೆಸ್ ಆಧಾರ ರಹಿತ ಆರೋಪ ಮಾಡುತ್ತಿದೆ. ಬುಟ್ಟಿಯಲ್ಲಿ ಹಾವು ಇಟ್ಟುಕೊಂಡು ಹೆದರಿಸುವವರಂತೆ ವರ್ತಿಸುತ್ತಿದೆ. ಸಾಕ್ಷ್ಯ ಒದಗಿಸಿದರೆ ಮುಖ್ಯಮಂತ್ರಿ ಕ್ರಮ ಕೈಗೊಳ್ಳಲು ಸಿದ್ಧರಿದ್ದಾರೆ’ ಎಂದರು.

‘ಮುಖ್ಯಮಂತ್ರಿ ಆಗುವ ಆತುರವಿಲ್ಲ’

ತುಮಕೂರು: ‘ಸದ್ಯಕ್ಕೆ ಮುಖ್ಯಮಂತ್ರಿಯಾಗುವ ಆಸೆ, ಆತುರವಿಲ್ಲ. 2023 ಅಥವಾ 2028ರ ಸಮಯದಲ್ಲಿ ಅವಕಾಶ ಸಿಗಬಹುದು‘ ಎಂದು ಬೃಹತ್ ಕೈಗಾರಿಕೆ ಸಚಿವ ಮುರುಗೇಶ್ ನಿರಾಣಿ ಹೇಳಿದರು.

ನಗರದ ಅರಳೇಪೇಟೆಯಲ್ಲಿ ವೀರಶೈವ ಸಮಾಜ ಜೀರ್ಣೋದ್ಧಾರಗೊಳಿಸಿರುವ ಬಸವೇಶ್ವರ ದೇವಾಲಯಕ್ಕೆ ಭೇಟಿ ನೀಡಿ, ದರ್ಶನ ಪಡೆದ ನಂತರ ಮಾತನಾಡಿದರು.

ಕಾಂಗ್ರೆಸ್ ನಾಯಕ ಎಸ್‌.ಆರ್‌.ಪಾಟೀಲ ಸ್ಪಷ್ಟನೆ

ಟಿಕೆಟ್ ತಪ್ಪಿದ್ದಕ್ಕೆ ಬಿಜೆಪಿಗೆ ಹೋಗಲ್ಲ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ : ‘ಟಿಕೆಟ್ ಕೈತಪ್ಪಿತು ಎಂಬ ಕಾರಣಕ್ಕೇ ಕಾಂಗ್ರೆಸ್ ತ್ಯಜಿಸಿ ಬೇರೆ ಪಕ್ಷಕ್ಕೆ ಹೋಗುವುದು ನನ್ನ ಜಾಯಮಾನದಲ್ಲೇ ಇಲ್ಲ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ ಹೇಳಿದರು.ಈ ಮೂಲಕ ಬಿಜೆಪಿ ಸೇರುತ್ತಾರೆ ಎಂಬ ವದಂತಿಯನ್ನು ತಳ್ಳಿಹಾಕಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಚಿವ ಮುರುಗೇಶ್ ನಿರಾಣಿ ಅವರು ನನ್ನ ಸ್ನೇಹಿತರು, ಒಂದೇ ತಾಲ್ಲೂಕಿನವರು. ನನ್ನ ಮೇಲಿನ ಅಭಿಮಾನಕ್ಕೆ ಬಿಜೆಪಿಗೆ ಆಹ್ವಾನಿಸುವ ಮಾತು ಹೇಳಿದ್ದಾರೆ. ಅದಕ್ಕೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ’ ಎಂದು ಹೇಳಿದರು.

‘45 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸಿದ್ಧಾಂತ ಒಪ್ಪಿಕೊಂಡಿದ್ದೇನೆ. ಪಕ್ಷ ನನಗೆ ಅನೇಕ ಸ್ಥಾನಮಾನ ಕೊಟ್ಟಿದೆ. ಪಕ್ಷ ದೊಡ್ಡದು. ತಾಯಿ ಸಮಾನ. ಅದರ ನಿರ್ಣಯ ಗೌರವಿಸೋಣ ಎಂದು ಅಭಿಮಾನಿಗಳಿಗೆ ಹೇಳಿದ್ದೇನೆ. ನನಗೆ ಟಿಕೆಟ್ ತಪ್ಪಿದೆ ಎಂದು ಪಕ್ಷಕ್ಕೆ ಹಾನಿ ಮಾಡುವುದಕ್ಕೆ ಕೈ ಹಾಕಬೇಡಿ ಎಂದೂ ಮನವಿ ಮಾಡಿದ್ದೇನೆ’ ಎಂದು ಅವರು ತಿಳಿಸಿದರು.

ಉತ್ತರ ಕರ್ನಾಟಕದ ನಾಯಕರನ್ನು ಮುಗಿಸುವ ಹುನ್ನಾರ ಇಲ್ಲ. ಪ್ರಾಮಾಣಿಕತೆ, ಬದ್ಧತೆ, ನಿಷ್ಠೆಗೆ ನಾವು ಹೆಸರುವಾಸಿ. ನಮ್ಮನ್ನು ಅಷ್ಟು ಸರಳವಾಗಿ ಮುಗಿಸಲು ಸಾಧ್ಯವಿಲ್ಲ

ಎಸ್.ಆರ್.ಪಾಟೀಲ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ

ಕಾಂಗ್ರೆಸ್ ಪರ ಸ್ವಾಮೀಜಿ ಪ್ರಚಾರ?

ಬೆಳಗಾವಿ: ಮೇಲ್ಮನೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಚನ್ನರಾಜ ಹಟ್ಟಿಹೊಳಿ ಅವರನ್ನು ಗೆಲ್ಲಿಸಲು ಲಿಂಗಾಯತ ಪಂಚಮಸಾಲಿ ಸಮಾಜದ ಸ್ವಾಮೀಜಿಯೊಬ್ಬರು ಮುಖಂಡರಿಗೆ ಕರೆ ಮಾಡಿರುವ ಸಂಗತಿ ಬಯಲಾಗಿದೆ.

‘ಪಂಚಮಸಾಲಿ ಸಮಾಜದ ಅಭ್ಯರ್ಥಿ ಬೆಂಬಲಿಸುವಂತೆ ಒತ್ತಡ ಹಾಕಲು ಸ್ವಾಮೀಜಿಯೊಬ್ಬರು ಕರೆ ಮಾಡಿದ್ದರು’ ಎಂದು ಶ್ರೀಗಳ ಹೆಸರು ಪ್ರಸ್ತಾಪಿಸದೆ, ಡಿಸಿಸಿ ಬ್ಯಾಂಕ್ ನಿರ್ದೇಶಕ ಹಾಗೂ ಶಾಸಕ ರಮೇಶ ಜಾರಕಿಹೊಳಿ ಆಪ್ತರಾದ ರಾಜೇಂದ್ರ ಅಂಕಲಗಿ ಅವರು ನೀಡಿರುವ ಹೇಳಿಕೆ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿದೆ.

ಹಿರೇಬಾಗೇವಾಡಿಯಲ್ಲಿ ಜಾರಕಿಹೊಳಿ ಬೆಂಬಲಿಗರು ಈಚೆಗೆ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ್ದ ರಾಜೇಂದ್ರ, ‘ನನಗೆ ಕರೆ ಮಾಡಿದ್ದ ಸ್ವಾಮೀಜಿ, ನೀವು ಜಾರಕಿಹೊಳಿಗಳ ಬೆನ್ನಿಗೆ ನಿಂತಿದ್ದೀರಂತೆ. ನಮ್ಮವರನ್ನು ಬೆಂಬಲಿಸಬೇಕು ಎಂದು ತಿಳಿಸಿದರು’ ಎಂದಿದ್ದಾರೆ.

‘ರಾಜಕಾರಣ ಮಾಡುವುದಿದ್ದರೆ ಖಾವಿ ತೆಗೆಯಿರಿ’ ಎಂದು ಅವರು ಹೇಳಿದರು.

ನೋಟಿಸ್ ಕೊಟ್ಟವ ಅವಿವೇಕಿ: ಕಣ್ಣೀರಿಟ್ಟ ಎ.ಮಂಜು

ಅರಕಲಗೂಡು: ‘ಪಕ್ಷ ನೀಡಿದ್ದ ಜವಾಬ್ದಾರಿಗಳಿಂದ ಮುಕ್ತಗೊಳಿಸಿ ನನಗೆ ನೋಟಿಸ್ ಕೊಟ್ಟವ ಅವಿವೇಕಿ. ನೋಟಿಸ್ ಕೊಡಲು ಅಧಿಕಾರವೇ ಇಲ್ಲ. ಪಕ್ಷ ವಿರೋಧಿ ಚಟುವಟಿಕೆ ಮಾಡಿದಾಗ ಮಾತ್ರ ನನಗೆ ಅಧ್ಯಕ್ಷರು ನೋಟಿಸ್ ಕೊಡಬೇಕು’ ಎಂದು ಬಿಜೆಪಿ ಮುಖಂಡ ಎ.ಮಂಜು ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದಲ್ಲಿ ಮಂಗಳವಾರ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಮತ್ತು ಮುಖಂಡರ ಸಭೆಯಲ್ಲಿ ಅವರು ವಿಷಯ ಪ್ರಸ್ತಾಪಿಸಿ ಕಣ್ಣೀರಿಟ್ಟರು.

‘ನನ್ನ ಮೇಲೆ ನಂಬಿಕೆ ಇಲ್ಲವೆಂದರೆ ಮಗನ ಪರ ಪ್ರಚಾರ ಮಾಡುತ್ತೇನೆ. ಇರುವ ಒಬ್ಬ ಮಗನನ್ನು ಕಳೆದುಕೊಳ್ಳಲು ಆಗುವುದಿಲ್ಲ. ಬಿಜೆಪಿ ನನಗೆ ಯಾವ ಹುದ್ದೆಯನ್ನು ಕೊಟ್ಟಿಲ್ಲ. ಈ ಷಡ್ಯಂತ್ರದ ಹಿಂದೆ ಯಾರ ಕೈವಾಡ ಇದೆ ಎಂಬ ಬಗ್ಗೆ ಸಂದರ್ಭ ಬಂದಾಗ ಮಾತನಾಡುತ್ತೇನೆ’ ಎಂದರು.

ರೈತರ ಆತಿಥ್ಯ ಸ್ವೀಕರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ದುಂದುವೆಚ್ಚಕ್ಕೆ ಕಡಿವಾಣ ಹಾಕಬೇಕು. ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಹಳ್ಳಿಗಳಲ್ಲಿನ ನಮ್ಮ ಮನೆಗಳಲ್ಲಿ ಆತಿಥ್ಯ ನೀಡಲು ಸಿದ್ಧವಿದ್ದೇವೆ’ ಎಂದು ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಸಂಚಾಲಕ ಚೂನಪ್ಪ ಪೂಜಾರಿ ತಿಳಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಮಂಗಳವಾರ ಮಾತನಾಡಿದ ಅವರು, ‘ಬರುವವರಿಗೆಲ್ಲ ಊಟ ಮತ್ತು ವಸತಿ ವ್ಯವಸ್ಥೆಯನ್ನು ನಾವೇ ಕಲ್ಪಿಸುತ್ತೇವೆ’ ಎಂದು ಹೇಳಿದರು.

‘ರಾಜ್ಯದಲ್ಲಿ ಕೋವಿಡ್, ಅತಿವೃಷ್ಟಿಯಿಂದ ಆರ್ಥಿಕ ಸಂಕಷ್ಟ ಎದುರಾಗಿದೆ. ಅಧಿವೇಶನದ ಹೆಸರಿನಲ್ಲಿ ದುಂದು ವೆಚ್ಚ ಬೇಡ. ಶಾಸಕರು, ಸಚಿವರು, ಅಧಿಕಾರಿ, ಸಿಬ್ಬಂದಿಗೆ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲು 20 ಹಳ್ಳಿಗಳ ರೈತ ಮುಖಂಡರು ನಿರ್ಧರಿಸಿದ್ದೇವೆ. ಹಳ್ಳಿಗಳಲ್ಲಿನ ಸಮಸ್ಯೆಗಳ ನೈಜ ಚಿತ್ರಣ ಜನಪ್ರತಿನಿಧಿಳು, ಅಧಿಕಾರಿಗಳಿಗೆ ಸಿಗುತ್ತದೆ’ ಎಂದರು.

‘ಎಲ್ಲರಿಗೂ ಅದ್ದೂರಿಯಾಗಿ ಸ್ವಾಗತಿಸುತ್ತೇವೆ. ನಮ್ಮಲ್ಲಿ ತಂಗಿದರೆ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ಉಳಿಸಬಹುದು. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು’ ಎಂದು ಕೋರಿದರು.

ಮುಖಂಡ ಪ್ರಕಾಶ ನಾಯಿಕ, ‘ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗೋವಾ, ಮಹಾರಾಷ್ಟ್ರ ಮೊದಲಾದ ಕಡೆಗಳಿಗೆ ಪ್ರವಾಸಕ್ಕೆಂದು ಇಲ್ಲಿಗೆ ಬರಬಾರದು’ ಎಂದು ಕೋರಿದರು.

ಮತಕ್ಕಾಗಿ ಸಾಷ್ಟಾಂಗ ನಮಸ್ಕಾರ!

ಬನ್ನೂರು (ಮೈಸೂರು): ಮೈಸೂರು–ಚಾಮರಾಜನಗರ ದ್ವಿಸದಸ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಸಿ.ಎನ್.ಮಂಜೇಗೌಡ ಅವರು ಇಲ್ಲಿಗೆ ಸಮೀಪದ ತುರುಗನೂರು ಗ್ರಾಮದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ನೆಲಕ್ಕೆ ಹಣೆ ಒತ್ತಿ ಮತದಾರರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಪದೇ ಪದೇ ಕೈಮುಗಿದು ಮತಯಾಚಿಸಿದರು.

ಅವರು ತಿ.ನರಸೀಪುರ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಶಾಸಕ ಅಶ್ವಿನ್ ಕುಮಾರ್ ನೇತೃತ್ವದಲ್ಲಿ ಜೆಡಿಎಸ್ ಪ್ರಚಾರ ಸಭೆಯಲ್ಲಿ ಪಾಲ್ಗೊಂಡು ಮತಯಾಚಿಸಿದರು.

ತಂತ್ರಜ್ಞಾನ



ಶಾಕ್ ಆಗದಿರಿ!

ಹಾರಲಿವೆ ವಿದ್ಯುತ್ ವಿಮಾನಗಳು

ಮಕ್ಕಳು ಆಡುವ ಪುಟಾಣಿ ವಿಮಾನಗಳು ಬ್ಯಾಟರಿಯಿಂದ ಒಂದಷ್ಟು ನೆಗೆಯುವುದನ್ನು ನೋಡಿದ್ದಾಗಿದೆ. ವಿದ್ಯುತ್ಕೋಶಗಳನ್ನು ಬಳಸಿ ಬಾನ ತೇರುಗಳನ್ನು ಉಡಾಯಿಸಿದರಾಗದೇ ಎಂಬ ಹುಡುಕಾಟ ಈಗ ಆರಂಭವಾಗಿದೆ.

ಶರತ್ ಭಟ್ ಸೇರಾಜೆ

‘ವಿಮಾನ ಆಕಾಶದಲ್ಲೇ ಯಾಕೆ ಉಳಿಯುತ್ತದೆ ಅಂದರೆ ಅದಕ್ಕೆ ಕೆಳಗೆ ಬೀಳಲಿಕ್ಕೆ ಪುರುಸೊತ್ತಿಲ್ಲ’ ಎಂಬಲ್ಲಿಂದ ಹಿಡಿದು, ‘ನಮ್ಮನ್ನು ನಮ್ಮ ಪಾಸ್‌ಪೋರ್ಟ್ ಫೋಟೊದ ಹಾಗೆ ಕಾಣುವಂತೆ ಮಾಡಲು ನಿಸರ್ಗ ಹೂಡಿರುವ ಒಳಸಂಚಿಗೆ ವಿಮಾನಯಾನ ಅಂತ ಹೆಸರು’ ಎಂಬ ಚತುರೋಕ್ತಿಯವರೆಗೆ ಏರೋಪ್ಲೇನೆಂಬ ಗಾಳಿತೇರು ನಮ್ಮಲ್ಲಿ ಪ್ರಚೋದಿಸಿರುವ ಚಿಂತನೆಗಳ ಪಟ್ಟಿ ದೊಡ್ಡದಿದೆ. ಈಗ ರೋಲ್ಸ್ ರಾಯ್ಸ್ ಎಂಬ ಸಂಸ್ಥೆಯವರು, ‘ಜಗತ್ತಿನ ಅತ್ಯಂತ ಕ್ಷಿಪ್ರಗತಿಯ ವಿದ್ಯುತ್ತಿನ ವಿಮಾನ ನಮ್ಮದೇ’ ಎಂದು ಸುದ್ದಿ ಮಾಡಿರುವ ಕಾರಣ, ವಿದ್ಯುಚ್ಛಕ್ತಿಯ ವಿಮಾನದ ಬಗ್ಗೆ ಮಾತಾಡುವ ಕಾಲ ಬಂದಿದೆ ಅನ್ನಬಹುದು. ನಮ್ಮಲ್ಲಿ ಹಳ್ಳಿಗಳಿಗೆ ದಿನಪೂರ್ತಿ ಕೊಡಲಿಕ್ಕೇ ವಿದ್ಯುತ್ತಿಲ್ಲ, ಇನ್ನು ವಿಮಾನಗಳಿಗೆ ಎಲ್ಲಿಂದ ಕೊಡೋಣ ಅಂತ ನಮ್ಮಂಥವರಿಗೆ ಕಂಡರೂ ದೊಡ್ಡ ವಿಷಯವೇನಲ್ಲ ಅನ್ನಿ. ಆದರೆ ವಿಮಾನಗಳಿಗೆ ಕೊಡುವುದು ಈ ವಿದ್ಯುತ್ತನ್ನಲ್ಲ, ಎಲೆಕ್ಟ್ರಿಕ್ ಕಾರುಗಳಿಗೆ, ಡ್ರೋನುಗಳಿಗೆ ಎಲ್ಲ ಕೊಡುವಂತೆ ಬ್ಯಾಟರಿಯೇ ಇವುಗಳಿಗೆ ಅನ್ನದಾತ, ಉಡ್ಡಯನದಾತ!

ಮಕ್ಕಳು ಆಡುವ ಪುಟಾಣಿ ವಿಮಾನಗಳು ಬ್ಯಾಟರಿಯಿಂದ ಒಂದಷ್ಟು ನೆಗೆಯುವುದನ್ನು ನೋಡಿದ್ದಾಗಿದೆ. ದೊಡ್ಡವರು ಆಡುವ ದೊಡ್ಡ ವಿಮಾನಗಳಿಗೂ ವಿದ್ಯುತ್ಕೋಶದ ಉಣಿಸು ಯಾಕಪ್ಪಾ, ಅಂತ ತಲೆಕೆಡಿಸಿಕೊಂಡರೆ, ಅದಕ್ಕಿಂತಲೂ ಹೆಚ್ಚು ತಲೆಕೆಡಿಸಬಲ್ಲ ಉತ್ತರವೊಂದು ಸಿಗುತ್ತದೆ! ಚಿತ್ರಮಯವಾದ ಮೋಡಗಳ ಮೇಲ್ಹಾಸಿನ ಮೇಲೆ ಹಾಯೆನಿಸುವಂತೆ ನಾವು ವಿಮಾನದಲ್ಲಿ ತೇಲುವುದು ಪ್ರಕೃತಿಗೆ ಒಳ್ಳೆಯದೇನಲ್ಲ. ಜಗತ್ತಿನ ಸುಮಾರು ಶೇ. 2.8ರಷ್ಟು ಇಂಗಾಲದ ಡೈ ಆಕ್ಸೈಡಿನ ಸೂಸುವಿಕೆಗೆ ವಿಮಾನಗಳೇ ಕಾರಣವಂತೆ. ಬಾನಾಡಿಗಳು ಒಂದು ವರ್ಷದಲ್ಲಿ ಸುಮಾರು ಒಂದು ಮೆಟ್ರಿಕ್ ಗಿಗಾ ಟನ್‌ನಷ್ಟು, ಅಂದರೆ ಸುಮಾರು 1000000000000 ಕೆಜಿಯಷ್ಟು ಇಂಗಾಲದ ಡೈ ಆಕ್ಸೈಡನ್ನು ಉಗುಳುತ್ತವೆ! ಈ ಮಟ್ಟಕ್ಕೆ ಇದು ನಿಸರ್ಗವನ್ನು ಹಾಳುಮಾಡುವುದರಿಂದ, ಇದರ ಬದಲಿಗೆ ವಿದ್ಯುತ್ಕೋಶಗಳನ್ನು ಬಳಸಿ ಬಾನ ತೇರುಗಳನ್ನು ಉಡಾಯಿಸಿದರಾಗದೇ ಎಂಬ ಹುಡುಕಾಟ ಸಹಜವಾಗಿಯೇ ಶುರುವಾಗಿದೆ. ಇದರಿಂದ ಕಂಪನಿಗಳಿಗೆ ಲಾಭ ಮಾಡುವ ಅವಕಾಶಗಳೂ ಇಲ್ಲದಿಲ್ಲ. ಹಾಗೆ ಹಾರುವ ಸಣ್ಣಪುಟ್ಟ ಬಾನಕ್ಕಿಗಳು ಆಗೀಗ ಬಂದೂ ಇವೆ. ಆದರೆ ಪಯಣಿಗರನ್ನು ಹೊತ್ತೊಯ್ಯುವ ವಾಣಿಜ್ಯವಿಮಾನಗಳಿಗೆ ಸರಿದೊರೆಯಾಗುವ ಮಟ್ಟಕ್ಕೆ ಅವು ಯಾವ ರೀತಿಯಲ್ಲೂ ತಯಾರಾಗಿಲ್ಲ ಎಂಬುದು ವಾಸ್ತವ.

ಎಲೆಕ್ಟ್ರಿಕ್ ಕಾರುಗಳು ಬಂದಿವೆ, ಬ್ಯಾಟರಿಗಳನ್ನೂ ಬಳಸಿ ಡ್ರೋನು ಹಾರಿಸಿಯೂ ಆಗಿದೆ; ಮತ್ತಿನ್ನೇನು ಕಷ್ಟ ಅನ್ನುವುದು ಮೊದಲು ತಲೆಯಲ್ಲಿ ಸುಳಿಯುವ ಪ್ರಶ್ನೆ. ಬ್ಯಾಟರಿಗಳ ಶಕ್ತಿ ಈಗ ಬಳಸುವ ಗ್ಯಾಸೋಲಿನ್ ಮತ್ತಿತರ ಇಂಧನಗಳ ಮುಂದೆ ಅದೆಷ್ಟು ಪೇಲವ ಅಂತ ನೋಡಿದರೆ ಒಂದು ಉತ್ತರ ಸಿಕ್ಕಂತೆ. ಈಗ ನಾವು ಒಂದು ಜಂಬೋ ಜೆಟ್ ಅನ್ನು ಬ್ಯಾಟರಿಗಳ ಬಲದಿಂದ ಹಾರಿಸಿದೆವು ಅಂತಿಟ್ಟುಕೊಳ್ಳೋಣ. ಈಗಿನ ಇಂಧನಗಳು ಉತ್ಪಾದಿಸುವಷ್ಟು ಶಕ್ತಿಯನ್ನು ಉತ್ಪಾದಿಸಬೇಕು ಅಂತ ನಾವು ಹೊರಟರೆ ಅದಕ್ಕೆ ಸುಮಾರು ಐದೂವರೆ ಲಕ್ಷ ಕೆಜಿ ಭಾರದ ಬ್ಯಾಟರಿಗಳು ಬೇಕಾದಾವು! ಈ ಬ್ಯಾಟರಿಗಳ ಭಾರವನ್ನು ಹೊರುವುದಕ್ಕೆ ಮತ್ತೊಂದು ನಾಲ್ಕು ಜೆಟ್ ಎಂಜಿನ್‌ಗಳನ್ನೇ ಎಳೆದು ತರಬೇಕು ಎಂಬ ಪರಿಸ್ಥಿತಿ! ನಮ್ಮ ಬ್ಯಾಗುಗಳು ಒಂದಷ್ಟು ಭಾರ ಇದ್ದರೇ ಹಿಂದೆ ಮುಂದೆ ನೋಡುವ ವಿಮಾನದವರು ಈ ಯಮಭಾರವನ್ನು ಎಲ್ಲಿಡಬೇಕು? ಮತ್ತು ಕಾರುಗಳ ಭಾರ ಶೇ. 35 ಹೆಚ್ಚಾದರೆ ಅದಕ್ಕೆ ಶೇ. 15 ಹೆಚ್ಚು ಶಕ್ತಿ ಸಾಕು. ಆದರೆ ವಿಮಾನವೊಂದಕ್ಕೆ ಅದರ ಭಾರ ಶೇ. 35 ಹೆಚ್ಚಾದರೆ, ಇಂಧನದ ತಾಕತ್ತೂ ಶೇ. 35 ಹೆಚ್ಚಾಗಬೇಕು.

ಇನ್ನು ಕಾರನ್ನು ನಿಂತಲ್ಲಿಂದ ಹೊರಡಿಸಲಿಕ್ಕೆ ಭಾರೀ ಇಂಧನವೇನೂ ಬೇಡ, ವಿಮಾನಕ್ಕೆ ನೆಲಬಿಟ್ಟು ಮೇಲೆ ಹಾರುವುದು ಅಷ್ಟು ಸುಲಭದ ಕೆಲಸವಲ್ಲ. ಅಲ್ಲಿ ಇಂಧನಕ್ಕೆ ಭೀಮಬಲ ಬೇಕು, ಇದು ಮತ್ತೊಂದು ಕಷ್ಟ. ಇಷ್ಟಲ್ಲದೇ ವಿಮಾನಗಳದ್ದು ಕಾರುಗಳಂತೆ ಕಡಿಮೆ ದೂರದ ಪ್ರಯಾಣವಲ್ಲ, ಅವುಗಳದ್ದು ದೂರತೀರ ಯಾನ. ಅಲ್ಲಲ್ಲಿ ಸ್ವಲ್ಪ ಹೊತ್ತು ನಿಲ್ಲಿಸಿ, ಬ್ಯಾಟರಿ ಬದಲಾಯಿಸುತ್ತೇವೆ. ಬಾಡಿಗೆ ಹಾಕಿ, ಸ್ವಲ್ಪ ಚಾರ್ಜ್ ಮಾಡಿ, ಒಂದು ಗೂಡಂಗಡಿಯಲ್ಲಿ ಚಾ ಕುಡಿದು ಮುಂದೆ ಹೋಗುತ್ತೇವೆ ಅನ್ನುವ ಹಾಗೂ ಇಲ್ಲ! ಹೀಗಾಗಿ ವಿದ್ಯುಚ್ಚಾಲಿತ ವಿಮಾನಗಳು ಸದ್ಯಕ್ಕಂತೂ ಹೆಚ್ಚು ದೂರ ಹೋಗಲಾರವು, ಅಮೆರಿಕಾದಂತಲ್ಲಿ ಕಡಿಮೆ ದೂರಗಳನ್ನೂ ವಿಮಾನದಲ್ಲಿ ದಾಟುವವರ ಸಂಖ್ಯೆಯೂ ದೊಡ್ಡದೇ, ಆ ಮಾತು ಬೇರೆ. ಆದರೆ ಒಟ್ಟು ಲೆಕ್ಕದಲ್ಲಿ ವಿಮಾನಗಳು ದೂರ ಹೋಗಬೇಕಾದ್ದು ಅಗತ್ಯ. ಕೆಲವು ಚತುರಮತಿಗಳು ಇದಕ್ಕೊಂದು ಸಮನ್ವಯ ಸೂತ್ರವನ್ನೂ ಕಂಡುಹಿಡಿದಿದ್ದಾರೆ; ವಿಮಾನ ಸ್ವಲ್ಪ ಬ್ಯಾಟರಿಯಲ್ಲಿ ಹಾರಲಿ, ಮತ್ತೊಂದರ್ಧ ದೂರವನ್ನು ಹಳೆಯ ಪದ್ಧತಿಯಲ್ಲೇ ಹಾರಲಿ, ಅಲ್ಲಿಗೆ ಸ್ವಲ್ಪ ಪ್ರಯೋಜನವನ್ನೂ ಪಡೆದಂತಾಯಿತು ಅಂತ ಹೈಬ್ರಿಡ್ ಯಂತ್ರಗಳ ರಚನೆಗೆ ಮುಂದಾಗಿದ್ದಾರೆ.

ಈ ಮಟ್ಟದ ವಿದ್ಯುತ್ಕೋಶಗಳ ತಯಾರಿಗೆ ತುರುಸಿನ ಕೆಲಸಗಳಂತೂ ಆಗುತ್ತಿವೆ. ಈಗ ರಾಲ್ಸ್ ರಾಯ್ಸ್ ಕಂಪನಿಯವರು ಗಂಟೆಗೆ 623 ಕಿ.ಮೀ. ವೇಗದಲ್ಲಿ ಇಂಥ ವಿಮಾನಗಳನ್ನು ಚಲಾಯಿಸಿರುವುದು ದೊಡ್ಡ ಸಾಧನೆಯೇ. ಒಂದು ಕೋಣೆಯಷ್ಟಿದ್ದ ಗಣಕಯಂತ್ರಗಳು ಈಗ ಲ್ಯಾಪ್‌ಟಾಪಾಗಿ ತೊಡೆಯ ಮೇಲೆ ಬಂದು ಕೂತಿರುವಾಗ, ಮೂರ್ತಿ ಚಿಕ್ಕದಾದರೂ ಶಕ್ತಿ ದೊಡ್ಡದಾದ ಬ್ಯಾಟರಿಗಳು ಇನ್ನೊಂದು ಹನ್ನೆರಡು ವರ್ಷಗಳಲ್ಲಿ ಬಂದಾವು. Aerodynamically, the bumble bee shouldn't be able to fly, but the bumble bee doesn't know it so it goes on flying anyway ಎಂಬ ಮಾತೇ ಇದೆಯಲ್ಲ! ❖

5ಜಿ ಬರುತ್ತಿದೆ ವೇಗವಾಗಿ...

ಈಗ 5ಜಿ ಮನೆಯ ಹೊಸ್ತಿಲಿನವರೆಗೂ ಬಂದಾಗಿದೆ. ಬರಮಾಡಿಕೊಳ್ಳುವ ಮೊದಲು ಒಂದು ಅವಲೋಕನ ಇಲ್ಲಿದೆ.

ಕ್ಷಮಾ ವಿ. ಭಾನುಪ್ರಕಾಶ್

ಜಪಾನ್‌ನಲ್ಲಿ ಮೊದಲ ಬಾರಿಗೆ 1979ರಲ್ಲಿ 1ಜಿ ನೆಟ್‌ವರ್ಕ್ ಲಭ್ಯವಾಗಿದ್ದೇ ತಡ, ಅದರ ಬಳಕೆ ಹಾಗೂ ಅದರ ಮುಂದಿನದೇನು ಎಂಬ ಹುಡುಕಾಟ ಪ್ರಾರಂಭವಾಯ್ತು. ಅಲ್ಲಿಂದ ಸುಮಾರು ಪ್ರತಿ ಹತ್ತು ವರ್ಷಗಳಿಗೊಮ್ಮೆ ಹೊಸ ತಲೆಮಾರಿನ ನೆಟ್‌ವರ್ಕ್ ಸರ್ವೀಸ್ ಹುಟ್ಟಿಕೊಳ್ಳುತ್ತಲಿದೆ. ಈಗ ಮುಂದಿನ ಸುಧಾರಿತ ನೆಟ್‌ವರ್ಕ್ ತಲೆಮಾರಿನ ಕಡೆ ನೆಟ್ಟಿದೆ ಎಲ್ಲರ ಚಿತ್ತ; ಅದೇ 5ಜಿ.

5ಜಿಯ ಬಗ್ಗೆ ತಜ್ಞರು ಏನು ಹೇಳುತ್ತಾರೆ ಗೊತ್ತೇ? ಇದು ಹೊಸ ಸಂಭಾವ್ಯಗಳ ಸಂಕಲನ! ಇಷ್ಟೊಂದು ವೇಗದಲ್ಲಿ ಇಂಟರ್ನೆಟ್ ಬಳಸಿ ಹೀಗೆಲ್ಲಾ ಸಾಧ್ಯವಾಗಬಹುದಾ ಎಂಬ ನಮ್ಮ ಊಹೆಗಳಿಗೂ ಮೀರಿದ ನಿದರ್ಶನಗಳನ್ನು ಕಾಣಲು ಎಲ್ಲರೂ ತಯಾರಾಗಬೇಕು ಎನ್ನುತ್ತಾರೆ. ಇದಕ್ಕೆ ಕಾರಣ ಇದರ ಉದ್ದೇಶಿತ ವೇಗ, ಈಗ ಲಭ್ಯವಿರುವ 4ಜಿಗಿಂತಲೂ ಸಾವಿರ ಪಟ್ಟು ಹೆಚ್ಚು! ಈಗಾಗಲೇ ಕ್ಷಣಮಾತ್ರದಲ್ಲೇ ವಿಡಿಯೊಗಳು ಡೌನ್‌ಲೋಡ್ ಆಗುತ್ತವೆ. ಯಾವುದೇ ಅಡೆತಡೆಯಿಲ್ಲದೇ ಸಂಪೂರ್ಣ ಚಲನಚಿತ್ರವೇ ಸ್ಟ್ರೀಮ್ ಆಗುತ್ತದೆ. ಹೀಗಿರುವಾಗ ಸಾವಿರ ಪಟ್ಟು ಹೆಚ್ಚು ವೇಗವೆಂದರೆ ಊಹಾತೀತವಲ್ಲವೇ?

ನಮ್ಮ ಫೋನುಗಳು ಮಾತ್ರವಲ್ಲ, ಸ್ಮಾರ್ಟ್‌ವಾಚುಗಳು, ಸ್ವಚಾಲಿತ ಕಾರುಗಳು, ವರ್ಚುಯಲ್ ರಿಯಾಲಿಟಿ, ಇಂಟರ್ನೆಟ್‌ನ ಮುಖಾಂತರ ಶಿಕ್ಷಣ, ಆರೋಗ್ಯ, ಕೃತಕ ಬುದ್ಧಿಮತ್ತೆ(ಎ.ಐ.), ಸ್ಯಾಟ್‌ಲೈಟ್ ಉಡಾವಣೆ - ಹೀಗೆ ಎಲ್ಲೆಲೂ 5ಜಿಯ ಅನಿವಾರ್ಯತೆ ಸೃಷ್ಟಿಯಾಗಲಿದೆ. 5ಜಿ ತಂತ್ರಜ್ಞಾನ ಬಳಸಿ ಒಂದೇ ಸಾಧನದಿಂದ ಸರಿಸುಮಾರು ಒಂದು ನೂರು ಸಂಪರ್ಕಗಳನ್ನು ಪಡೆಯಬಹುದಾಗಿದೆ ಕೂಡ.

ಇಂತಹ ಸುಧಾರಿತ ಹಾಗೂ ತೀವ್ರತರನಾದ ವೇಗವನ್ನು ಕೊಡಮಾಡೋ ಹೊಸ ತಲೆಮಾರಿನ ನೆಟ್‌ವರ್ಕ್ ಸೇವೆ, ಆರೋಗ್ಯಕ್ಕೆ ಹಾನಿಕರವೇ ಎಂಬ ಪ್ರಶ್ನೆ ತಲೆದೋರಿತ್ತು; ಟಿವಿ, ರೇಡಿಯೊ, ಮೈಕ್ರೋವೇವ್ ಮತ್ತು ವೈಫೈ, ಮೊಬೈಲ್ ನೆಟ್‌ವರ್ಕ್‌ಗಳ ಮೂಲಕ ಈಗಾಗಲೇ ನಾವೆಲ್ಲರೂ ಕಣ್ಣಿಗೆ ಕಾಣದ ತರಂಗಗಳ ಬಲೆಯ ನಡುವೆಯೇ ಬದುಕುತ್ತಿದ್ದೇವೆ; ನಮ್ಮ ಸುತ್ತಲೂ ಸದಾಕಾಲ ವಿಧವಿಧದ ವೈರ್‌ಲೆಸ್ ಕಿರಣಗಳು ಇದ್ದೇ ಇರುತ್ತವೆ ಮತ್ತು ಅದು ಸಮಯ ಕಳೆದಂತೆ ತಕ್ಕಮಟ್ಟಿಗೆ ಹಾನಿಕರವೇ ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ, 5ಜಿ ಸೇವೆಗಳು ಲಭ್ಯವಾಗಬೇಕಾದಲ್ಲಿ, ನೆಲಕ್ಕೆ ಮತ್ತಷ್ಟು ಹತ್ತಿರವಿರುವ ಟ್ರಾನ್ಸ್‌ಮೀಟರ್‌ಗಳು ಬೇಕಾಗುತ್ತವೆ; ಏಕೆಂದರೆ ಈ ಅಲೆಗಳು ಒಂದು ನಿಗದಿತ ಚದರಡಿಯಲ್ಲಿ ಹೆಚ್ಚೆಚ್ಚು ಪ್ರಯಾಣಿಸಿ ಹೆಚ್ಚು ವೇಗ ನೀಡಬೇಕಾಗುತ್ತದೆ. ಇಲ್ಲಿ ಹೆಚ್ಚು ಫ್ರೀಕ್ವೆನ್ಸಿಯ ತರಂಗಗಳನ್ನು ಬಳಸಲಾಗುತ್ತದೆ ಕೂಡ. ಇದೇ ಕಾರಣಕ್ಕೆ ಆರೋಗ್ಯ ಸಂಬಂಧೀ ಸಮಸ್ಯೆಗಳನ್ನು 5ಜಿ ಉಂಟುಮಾಡಲಿದೆಯೇ ಎಂಬ ಪ್ರಶ್ನೆ ಎಲ್ಲರ ಹುಬ್ಬೇರಿಸಿತ್ತು; ಇದೇ ನಿಟ್ಟನಲ್ಲಿ ನೂರಾರು ಸಂಶೋಧನೆಗಳು ನಡೆದವು. ವಿಶ್ವ ಆರೋಗ್ಯ ಸಂಸ್ಥೆಯ ಸಮೀಕ್ಷೆಗಳು, ಸಂಶೋಧನೆಗಳ ಪ್ರಕಾರ, ಮೊಬೈಲ್ ನೆಟ್‌ವರ್ಕ್‌ನಿಂದ ಆರೋಗ್ಯಕ್ಕೆ ಅಂತಹದ್ದೇನೂ ಸಮಸ್ಯೆಯಿಲ್ಲ. ಆದರೆ, ಹೆಚ್ಚು ದಶಕಗಳು ಈ ಕಿರಣಗಳಿಗೆ ಸತತವಾಗಿ ಒಡ್ಡಿಕೊಂಡಿದ್ದರೆ ಸಮಸ್ಯೆಗಳು ತಲೆದೋರಬಹುದು; ಕೆಲವು ಬಗೆಯ ಕ್ಯಾನ್ಸರ್‌ಗಳಿಗೂ ಕಾರಣವಾಗಬಹುದು. ಆದರೆ ಇದಕ್ಕೆ ಯಾವ ಬಲವಾದ ಸಾಕ್ಷಿಯೂ ಇದ್ದಂತಿಲ್ಲ ಎಂದು ಅಡ್ಡಗೋಡೆ ಮೇಲೆ ದೀಪವಿಡುತ್ತದೆ. ಆದರೆ 5ಜಿ ತರಂಗಗಳು ನಾನ್-ಅಯೊನೈಸಿಂಗ್ ಕಿರಣಗಳಾಗಿದ್ದು, ಇದಕ್ಕಾಗೇ ಇರುವ ಅಂತರರಾಷ್ಟ್ರೀಯ ಕಮಿಶನ್‌ನಿಂದ ಕೂಡ ‘ಸುರಕ್ಷಿತ’ ಎಂದು ಹಣೆಪಟ್ಟಿ ಪಡೆದಿದೆ. ಹಾಗಾಗಿ ಯಾವುದೇ ಯೋಚನೆಯಿಲ್ಲದೇ ಬಳಸಬಹುದು ಎನ್ನುತ್ತವೆ, ನೆಟ್‌ವರ್ಕ್ ಸಂಸ್ಥೆಗಳು. ❖



ನೀಟ್: ಮರು ಮೌಲ್ಯಮಾಪನ ಅರ್ಜಿ ವಜಾ

ನವದೆಹಲಿ: ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆಯ (ನೀಟ್) ಭೌತವಿಜ್ಞಾನ ಪ್ರಶ್ನೆಪತ್ರಿಕೆಯ ಹಿಂದಿ ಆವೃತ್ತಿಯಲ್ಲಿ ಹಲವು ದೋಷಗಳಿದ್ದವು ಎಂದು ಆರೋಪಿಸಿದ್ದ ಕೆಲ ಅಭ್ಯರ್ಥಿಗಳು, ತಮ್ಮ ಉತ್ತರಪತ್ರಿಕೆಯ ಮರುಮೌಲ್ಯಮಾಪನಕ್ಕೆ ಆದೇಶಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಮಂಗಳವಾರ ವಜಾಗೊಳಿಸಿತು.

ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್, ಎ.ಎಸ್. ಬೋಪಣ್ಣ ಹಾಗೂ ವಿಕ್ರಮ್ ನಾಥ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು. ವಾಜಿದಾ ತಬಸ್ಸುಮ್ ಹಾಗೂ ಇತರರು ಅರ್ಜಿ ಸಲ್ಲಿಸಿದ್ದರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಸಂಸದರ ಅಮಾನತು ವಾಪಸ್‌ಗೆ ಸಭಾಪತಿ ನಕಾರ: ವಿರೋಧ ಪಕ್ಷಗಳ ಖಂಡನೆ

ಅಧಿವೇಶನ ಪೂರ್ತಿ ಧರಣಿಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಚಳಿಗಾಲದ ಅಧಿವೇಶನದ ಉಳಿದ ಅವಧಿಗೆ ಅಮಾನತಾಗಿರುವ ವಿರೋಧ ಪಕ್ಷಗಳ 12 ರಾಜ್ಯಸಭಾ ಸದಸ್ಯರ, ಅಮಾನತು ಆದೇಶ ವಾಪಸ್ ಪಡೆಯಬೇಕೆಂದರೆ ಅವರು ಕ್ಷಮೆ ಯಾಚಿಸಬೇಕು ಎಂದು ಸಭಾಪತಿ ಎಂ.ವೆಂಕಯ್ಯ ನಾಯ್ಡು ಅವರು ಹೇಳಿರುವುದನ್ನು ವಿರೋಧ ಪಕ್ಷಗಳು ಖಂಡಿಸಿವೆ. ಬದಲಿಗೆ ಅಮಾನತು ರದ್ದಾಗುವವರೆಗೆ ಅಥವಾ ಅಧಿವೇಶನ ಮುಗಿಯುವವರೆಗೆ ಧರಣಿ ನಡೆಸಲು ನಿರ್ಧರಿಸಿವೆ.

ಮಂಗಳವಾರ ಬೆಳಿಗ್ಗೆ ಕಲಾಪ ಆರಂಭವಾಗುವುದಕ್ಕೂ ಮುನ್ನ ಸಭಾಪತಿ ವೆಂಕಯ್ಯ ನಾಯ್ಡು ಅವರನ್ನು ವಿರೋಧ ಪಕ್ಷಗಳ ನಿಯೋಗವು ಭೇಟಿ ಮಾಡಿತು. ಸದಸ್ಯರ ಅಮಾನತು ಆದೇಶವನ್ನು ವಾಪಸ್ ಪಡೆಯಿರಿ ಎಂದು ಕೋರಿತು. ಆದರೆ ಈ ಕೋರಿಕೆಯನ್ನು ಸಭಾಪತಿ ತಿರಸ್ಕರಿಸಿದರು. ಅಮಾನತಾದ ಸದಸ್ಯರು ಪಶ್ಚಾತ್ತಾಪ ತೋರದೇ ಇದ್ದರೆ ಆದೇಶ ವಾಪಸ್ ಪಡೆಯಲು ಸಾಧ್ಯವಿಲ್ಲ ಎಂದು ಸಭಾಪತಿ ಹೇಳಿದರು ಎಂದು ಮೂಲಗಳು ಹೇಳಿವೆ. ನಂತರ ವಿರೋಧ ಪಕ್ಷಗಳು ಇದರ ವಿರುದ್ಧ ಪ್ರತಿಭಟನೆ ನಡೆಸಿವೆ.

ಕ್ಷುಲ್ಲಕ ಕಾರಣಗಳನ್ನು ತೋರಿಸಿ ವಿರೋಧ ಪಕ್ಷಗಳ ಸದಸ್ಯರನ್ನು ಅಮಾನತು ಮಾಡಲಾಗಿದೆ. ಅಮಾನತು ಪ್ರಕ್ರಿಯೆಯಲ್ಲಿ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಹೀಗಿರುವಾಗ ಕ್ಷಮೆ ಕೇಳುವ ಅನಿವಾರ್ಯ ಇರುವುದಿಲ್ಲ. ಬದಲಿಗೆ ಅಮಾನತಾಗಿರುವ 12 ಸದಸ್ಯರು ಧರಣಿ ನಡೆಸಲು ತೀರ್ಮಾನಿಸಲಾಗಿದೆ ಎಂದು ವಿರೋಧ ಪಕ್ಷಗಳು ಹೇಳಿವೆ.

ಕಲಾಪ ಬಹಿಷ್ಕರಿಸದಿರಲು ನಿರ್ಧಾರ: 12 ಸದಸ್ಯರ ಅಮಾನತನ್ನು ವಿರೋಧಿಸಿ ಅಧಿವೇಶನದ ಉಳಿದ ಅವಧಿಯನ್ನು ಬಹಿಷ್ಕರಿಸಲು, ಈ ಮೊದಲು ವಿರೋಧ ಪಕ್ಷಗಳು ನಿರ್ಧರಿಸಿದ್ದವು.

ಆದರೆ ಮಂಗಳವಾರ ಈ ನಿರ್ಧಾರವನ್ನು ಬದಲಿಸಿವೆ. ದಿನದಮಟ್ಟಿಗಷ್ಟೇ ಸದನದಿಂದ ಹೊರನಡೆದಿವೆ. ರಾಜ್ಯಸಭೆಯ ವಿರೋಧ ಪಕ್ಷದ ನಾಯಕ, ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ ಅವರ ನೇತೃತ್ವದಲ್ಲಿ ವಿರೋಧ ಪಕ್ಷಗಳು ನಡೆಸಿದ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

‘ಸಭೆ ಆರಂಭವಾದಾಗ ಅಧಿವೇಶನವನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕು ಎಂದು ಕಾಂಗ್ರೆಸ್ ಮತ್ತು ಡಿಎಂಕೆ ಸೇರಿದಂತೆ ಹಲವು ಪಕ್ಷಗಳ ನಾಯಕರು ಹೇಳಿದರು. ಆದರೆ, ‘ಅಧಿವೇಶನವನ್ನು ಬಹಿಷ್ಕರಿಸಿದರೆ ಸದನದಲ್ಲಿ ಸರ್ಕಾರದ ಮೇಲುಗೈ ಆಗುತ್ತದೆ. ಬದಲಿಗೆ ನಾವು ಸದನದಲ್ಲಿ ಪ್ರತಿದಿನ ಒಂದಿಲ್ಲೊಂದು ವಿಷಯಗಳನ್ನು ಪ್ರಸ್ತಾಪಿಸಿ ಚರ್ಚಿಸಬೇಕು’ ಎಂದು ಕಾಂಗ್ರೆಸ್‌ನ ರಾಹುಲ್ ಗಾಂಧಿ ಅವರು ಹೇಳಿದರು.

ಆನಂತರ ದಿನದಮಟ್ಟಿಗಷ್ಟೇ ಕಲಾಪವನ್ನು ಬಹಿಷ್ಕರಿಸಿ, ಪ್ರತಿಭಟನೆ ನಡೆಸಲಾಯಿತು’ ಎಂದು ಮೂಲಗಳು ಹೇಳಿವೆ.

ಸಂಸತ್ ಭವನದ ಬಳಿಯ ಗಾಂಧಿ ಪ್ರತಿಮೆ ಬಳಿ ವಿಪಕ್ಷಗಳ ಸಂಸದರು ಮಂಗಳವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಅಧಿವೇಶನದ ಉಳಿದ ಅವಧಿಗೆ ಅಮಾನತಾಗಿರುವ ಸದಸ್ಯರು ತಮ್ಮ ನಡೆಗೆ ಪಶ್ಚಾತ್ತಾಪ ಸೂಚಿಸದೇ ಇದ್ದರೆ, ಆದೇಶ ವಾಪಸ್ ಪಡೆಯುವುದು ಸಾಧ್ಯವಿಲ್ಲ

ಪೀಯೂಷ್ ಗೋಯಲ್
ಕೇಂದ್ರ ಸಚಿವ

ಅಮಾನತು ಆದೇಶವನ್ನು ವಾಪಸ್ ಪಡೆಯುವಂತೆ ಬುಧವಾರವೂ ಕೇಳುತ್ತೇವೆ. ಅದು ಈಡೇರದಿದ್ದರೆ, ಆ ಕ್ರಮವನ್ನು ದೊಡ್ಡ ದನಿಯಲ್ಲಿ ಪ್ರಶ್ನಿಸುತ್ತೇವೆ

ಮಲ್ಲಿಕಾರ್ಜುನ ಖರ್ಗೆ
ರಾಜ್ಯಸಭೆಯ ವಿರೋಧ ಪಕ್ಷದ ನಾಯಕ

ಯಾವುದಕ್ಕಾಗಿ ಕ್ಷಮೆ ಕೇಳಬೇಕು? ಸಂಸತ್ತಿನಲ್ಲಿ ಜನರ ಸಮಸ್ಯೆಗಳ ಕುರಿತು ಪ್ರಶ್ನೆ ಎತ್ತಿದ್ದಕ್ಕಾಗಿ ಕ್ಷಮೆ ಕೇಳಬೇಕೆ? ಇದಕ್ಕಾಗಿ ಕ್ಷಮೆ ಕೇಳುವುದು ಎಂದಿಗೂ ಸಾಧ್ಯವಿಲ್ಲ

ರಾಹುಲ್ ಗಾಂಧಿ
ಕಾಂಗ್ರೆಸ್ ಸಂಸದ

ದೂರ ಉಳಿದ ಟಿಎಂಸಿ

ಟಿಎಂಸಿ, ಸಂಸತ್ತಿನ ಅಧಿವೇಶನದಲ್ಲಿ ಬೇರೆಲ್ಲಾ ವಿರೋಧ ಪಕ್ಷಗಳಿಂದ ಅಂತರ ಕಾಯ್ದುಕೊಂಡಿದೆ. ಕಾಂಗ್ರೆಸ್ ನೇತೃತ್ವದಲ್ಲಿ ನಡೆದಿದ್ದ ವಿರೋಧ ಪಕ್ಷಗಳ ಸಭೆಗೆ ಟಿಎಂಸಿ ಸೋಮವಾರ ಹಾಜರಾಗಿರಲಿಲ್ಲ. ಎಎಪಿ ಮತ್ತು ಸಮಾಜವಾದಿ ಪಕ್ಷ ಸಹ ಸಭೆಯಿಂದ ದೂರ ಉಳಿದಿದ್ದವು. ಆದರೆ ಮಂಗಳವಾರ ನಡೆದ ಸಭೆಗೆ ಎಎಪಿ ಹಾಜರಾಗಿತ್ತು.

ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ ಅವರು ಕರೆದಿದ್ದ ಸಭೆಯಲ್ಲಿ ಡಿಎಂಕೆ, ಆರ್‌ಜೆಡಿ, ಶಿವಸೇನಾ, ಎನ್‌ಸಿಪಿ, ಸಿಪಿಐ, ಮುಸ್ಲಿಂ ಲೀಗ್, ಎಲ್‌ಜೆಡಿ, ಎಂಡಿಎಂಕೆ, ಎನ್‌ಸಿ, ಆರ್‌ಎಸ್‌ಪಿ, ಟಿಆರ್‌ಎಸ್, ಕೇರಳ ಕಾಂಗ್ರೆಸ್ ಮತ್ತು ವಿಸಿಕೆ ಪಕ್ಷಗಳು ಹಾಜರಾಗಿದ್ದವು. ಈ ಸಭೆಯಿಂದಲೂ ಟಿಎಂಸಿ ದೂರ ಉಳಿದಿತ್ತು.

‘ಸಭೆಯಲ್ಲಿ ಭಾಗಿಯಾಗಿದ್ದ ರಾಹುಲ್ ಗಾಂಧಿ ಅವರು, ‘ವಿರೋಧ ಪಕ್ಷಗಳ ಮಧ್ಯೆ ಭಿನ್ನಾಭಿಪ್ರಾಯ ಇರಬಹುದು. ಆದರೆ, ನಾವು ನಮ್ಮ ಸಮಾನ ಆಸಕ್ತಿಯ ವಿಚಾರದಲ್ಲಿ ಒಗ್ಗಟ್ಟಾಗಬೇಕು’ ಎಂದು ಹೇಳಿದರು’ ಎಂದು ಮೂಲಗಳು ಹೇಳಿವೆ.

ವಿರೋಧ ಪಕ್ಷಗಳ ಸಭೆಯಿಂದ ದೂರವಿದ್ದರೂ, ಸಂಸದರ ಅಮಾನತು ಆದೇಶದ ವಿರುದ್ಧ ವಿರೋಧ ಪಕ್ಷಗಳು ನಡೆಸಿದ ಪ್ರತಿಭಟನೆಯಲ್ಲಿ ಟಿಎಂಸಿಯ ಇಬ್ಬರು ಸಂಸದರು ಭಾಗಿಯಾಗಿದ್ದರು. ಅಮಾನತಾದ 12 ಸಂಸದರಲ್ಲಿ ಆ ಇಬ್ಬರೂ ಸೇರಿದ್ದಾರೆ.

ಎಂಎಸ್‌ಪಿ ಕಾನೂನುಬದ್ಧಗೊಳಿಸಲು ಆಗ್ರಹ

‘ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಕಾನೂನುಬದ್ಧಗೊಳಿಸಬೇಕು. ಪ್ರತಿಭಟನೆ ವೇಳೆ ಮೃತಪಟ್ಟ ರೈತರ ಕುಟುಂಬಗಳಿಗೆ ಪರಿಹಾರ ನೀಡಬೇಕು’ ಎಂದು ವಿರೋಧ ಪಕ್ಷಗಳು ಲೋಕಸಭೆಯಲ್ಲಿ ಆಗ್ರಹಿಸಿದವು. ಈ ವಿಚಾರವಾಗಿ ಚರ್ಚಿಸಲು ಸರ್ಕಾರವು ಮುಂದೆ ಬರದೇ ಇದ್ದಾಗ, ವಿಪಕ್ಷಗಳ ಸಂಸದರು ಸದನದಲ್ಲಿ ಪ್ರತಿಭಟನೆ ನಡೆಸಿದರು. ಇದರಿಂದಾಗಿ ಕಲಾಪವನ್ನು ಹಲವು ಬಾರಿ ಮುಂದೂಡಲಾಯಿತು.

ಮೊದಲಿಗೆ ಟಿಆರ್‌ಎಸ್ ಪಕ್ಷದ ಸಂಸದರು ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು ಎಂದು ಒತ್ತಾಯಿಸಿದರು. ಸ್ಪೀಕರ್ ಓಂ ಪ್ರಕಾಶ ಬಿರ್ಲಾ ಅವರು, ಪ್ರಶ್ನೋತ್ತರ ವೇಳೆಯಲ್ಲಿ ಚರ್ಚಿಸಲು ಅವಕಾಶ ನೀಡಲಾಗುತ್ತದೆ ಎಂದರು. ಇದರಿಂದ ಸಮಾಧಾನವಾಗದ ಟಿಆರ್‌ಎಸ್ ಸಂಸದರು, ಸ್ಪೀಕರ್ ಕುರ್ಚಿಯ ಎದುರು ಪ್ರತಿಭಟನೆ ನಡೆಸಿದರು. ಕಾಂಗ್ರೆಸ್, ಎನ್‌ಸಿಪಿ, ಡಿಎಂಕೆ ಮತ್ತು ಎಡಪಕ್ಷಗಳ ಸಂಸದರೂ ಪ್ರತಿಭಟನೆಗೆ ಧುಮುಕಿದರು. ಆಗ ಸ್ಪೀಕರ್ ಕಲಾಪವನ್ನು ಮಧ್ಯಾಹ್ನ 3ರವರೆಗೆ ಮುಂದೂಡಿದರು.

‘ಚಾರ್‌ಧಾಮ್ ದೇವಸ್ಥಾನ ಮಂಡಳಿ ರದ್ದು’

ಡೆಹ್ರಾಡೂನ್ (ಪಿಟಿಐ): ಚಾರ್‌ಧಾಮ್ ದೇವಸ್ಥಾನ ಮಂಡಳಿಯನ್ನು ರದ್ದುಗೊಳಿಸಲು ಉತ್ತರಾಖಂಡ ಸರ್ಕಾರ ಮಂಗಳವಾರ ನಿರ್ಧರಿಸಿದೆ.

ಈ ಬೆಳವಣಿಗೆಯನ್ನು ವಿರೋಧ ಪಕ್ಷ ಕಾಂಗ್ರೆಸ್, ‘ಅರ್ಚಕರ ಗೆಲುವು ಹಾಗೂ ಬಿಜೆಪಿಯ ದುರಹಂಕಾರದ ಸೋಲು’ ಎಂದು ಬಣ್ಣಿಸಿದೆ.

2019ರಲ್ಲಿ ಸರ್ಕಾರವು ಮಂಡಳಿಯನ್ನು ರಚಿಸಿದಾಗಿನಿಂದ ಅದನ್ನು ರದ್ದುಗೊಳಿಸಬೇಕೆಂದು ಚಾರ್‌ಧಾಮ್ ಅರ್ಚಕರು ಒತ್ತಾಯಿಸುತ್ತಿದ್ದರು. ಸರ್ಕಾರದ ನಿರ್ಧಾರವನ್ನು ಅರ್ಚಕರು ಶ್ಲಾಘಿಸಿದ್ದಾರೆ.

ಮಲ್ಯ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆ ಜ. 18ಕ್ಕೆ: ‘ಸುಪ್ರೀಂ’

ನವದೆಹಲಿ (ಪಿಟಿಐ): ಬ್ಯಾಂಕ್‌ಗಳಿಂದ ₹9,000 ಕೋಟಿಗೂ ಹೆಚ್ಚು ಸಾಲ ಪಡೆದು, ಪರಾರಿಯಾಗಿರುವ ಕಿಂಗ್‌ಫಿಷರ್ ಏರ್‌ಲೈನ್ಸ್‌ನ ಮಾಲೀಕ ವಿಜಯ್ ಮಲ್ಯ ವಿರುದ್ಧದ ನ್ಯಾಯಾಂಗ ನಿಂದನೆ ಪ್ರಕರಣದ ವಿಚಾರಣೆಯನ್ನು ಮುಂದಿನ ವರ್ಷದ ಜನವರಿ 18ರಂದು ನಡೆಸುವುದಾಗಿ ಸುಪ್ರಿಂ ಕೋರ್ಟ್ ಮಂಗಳವಾರ ತಿಳಿಸಿದೆ.

ವಿಜಯ್ ಮಲ್ಯ

ಈ ಪ್ರಕರಣದ ವಿಚಾರಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ 2017ರಿಂದ ಸಾಕಷ್ಟು ಸಮಯ ಕಾದಿದೆ. ಇನ್ನೂ ಹೆಚ್ಚಿನ ಅವಧಿ ಕಾಯಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿ ಯು.ಯು ಲಲಿತ್, ಎಸ್.ಆರ್. ಭಟ್, ಬೇಲಾ ಎಂ. ತ್ರಿವೇದಿ ಅವರ ಪೀಠ ತಿಳಿಸಿದೆ.

‘ಮಲ್ಯ ಅವರು ಮುಂಗಡವಾಗಿ ತಮ್ಮ ವಾದ ಮಂಡಿಸಲು ಮುಕ್ತರಾಗಿದ್ದಾರೆ. ಒಂದು ವೇಳೆ ಅವರಿಂದ ನ್ಯಾಯಾಲಯಕ್ಕೆ ಹಾಜರಾಗಲು ಸಾಧ್ಯವಾಗದಿದ್ದರೆ ಅವರ ಪರವಾಗಿ ವಕೀಲರು ವಾದ ಮಂಡಿಸಬಹುದು’ ಎಂದು ಪೀಠ ಹೇಳಿದೆ.

ಈ ವಿಚಾರದಲ್ಲಿ ಅಮಿಕಸ್ ಕ್ಯೂರಿಯಾಗಿ ಸಹಾಯ ಮಾಡುವಂತೆ ಹಿರಿಯ ವಕೀಲ ಜೈದೀಪ್ ಗುಪ್ತಾ ಅವರಿಗೆ ಸುಪ್ರೀಂ ಕೋರ್ಟ್ ಮನವಿ ಮಾಡಿತು.

ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿ ತನ್ನ ಮಕ್ಕಳಿಗೆ 40 ದಶಲಕ್ಷ ಡಾಲರ್ ವರ್ಗಾಯಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ 2017ರಲ್ಲಿ ಮಲ್ಯ ಅವರನ್ನು ತಪ್ಪಿತಸ್ಥ ಎಂದು ಆದೇಶಿಸಿತ್ತು. ಅದನ್ನು ಪ್ರಶ್ನಿಸಿದ್ದ ಮಲ್ಯ ಅವರ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು. ಮಲ್ಯ ಅವರು 2016ರ ಮಾರ್ಚ್‌ನಿಂದ ಬ್ರಿಟನ್‌ನಲ್ಲಿದ್ದಾರೆ.

ಗೋವಾ ಸಚಿವರ ವಿರುದ್ಧ ಲೈಂಗಿಕ ಕಿರುಕುಳದ ಆರೋಪ

ಪಣಜಿ (ಪಿಟಿಐ): ಬಿಜೆಪಿ ನೇತೃತ್ವದ ಗೋವಾ ಸರ್ಕಾರದ ಸಚಿವರೊಬ್ಬರು ಅಧಿಕಾರ ದುರ್ಬಳಕೆ ಮಾಡಿಕೊಂಡು ಮಹಿಳೆಯೊಬ್ಬರನ್ನು ಲೈಂಗಿಕವಾಗಿ ಶೋಷಿಸಿ, ಬೆದರಿಕೆ ಹಾಕಿದ್ದಾರೆ ಎಂದು ಅಲ್ಲಿನ ವಿರೋಧ ಪಕ್ಷ ಕಾಂಗ್ರೆಸ್ ಆರೋಪಿಸಿದೆ.

ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರು 15 ದಿನಗಳಲ್ಲಿ ಆ ಸಚಿವರನ್ನು ಸಂಪುಟದಿಂದ ವಜಾಗೊಳಿಸಿ, ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಕಾಂಗ್ರೆಸ್‌ನ ಗೋವಾ ಘಟಕದ ಅಧ್ಯಕ್ಷ ಗಿರೀಶ್ ಚೋಡಂಕರ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಮಹಿಳೆಯನ್ನು ಲೈಂಗಿಕವಾಗಿ ಶೋಷಿಸಿರುವ ಸಚಿವರಿಗೆ ಸ್ವತಃ ಮುಖ್ಯಮಂತ್ರಿ ಅವರೇ ನೆರವಾಗುತ್ತಿದ್ದಾರೆ ಎಂದು ದೂಷಿಸಿದ ಅವರು, ಸಚಿವರ ಹೆಸರನ್ನು ಬಹಿರಂಗಪಡಿಸಲಿಲ್ಲ. ಸಚಿವರ ವಿರುದ್ಧ ಮುಖ್ಯಮಂತ್ರಿ ಕ್ರಮ ಕೈಗೊಳ್ಳದಿದ್ದರೆ ಅವರ ಹೆಸರನ್ನು ಬಹಿರಂಗಪಡಿಸುತ್ತೇನೆ ಎಂದರು.

ಧರ್ಮವಲ್ಲ, ಕಾನೂನು ಆಧಾರದ ಮೇಲೆಯೇ ತೀರ್ಪು ನೀಡಲಾಗಿತ್ತು: ರಂಜನ್ ಗೊಗೊಯಿ

ಲಖನೌ: ‘ರಾಮ ಜನ್ಮಭೂಮಿ ವಿವಾದ ಕುರಿತ ತೀರ್ಪು ಕಾನೂನು ಆಧಾರದ ಮೇಲೆ ನೀಡಲಾಗಿದೆ, ಧರ್ಮದ ಆಧಾರದ ಮೇಲೆ ಅಲ್ಲ’ ಎಂದು ಸುಪ್ರೀಂ ಕೋರ್ಟ್‌ನ ಹಿಂದಿನ ಮುಖ್ಯನ್ಯಾಯಮೂರ್ತಿ ರಂಜನ್ ಗೊಗೊಯಿ ಹೇಳಿದ್ದಾರೆ.

ರಂಜನ್ ಗೊಗೊಯಿ

ರಾಜ್ಯಸಭಾ ಸದಸ್ಯರೂ ಆಗಿರುವ ಅವರು, ವಾರಾಣಸಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದರು. ‘ಅಯೋಧ್ಯೆ ವಿವಾದಕ್ಕೆ ಸಂಬಂಧಿಸಿ ನೀಡಿದ ತೀರ್ಪು ನನ್ನ ವೈಯಕ್ತಿಕ ನಿರ್ಧಾರವಾಗಿರಲಿಲ್ಲ. ಅದು ಸುಪ್ರೀಂ ಕೋರ್ಟ್‌ನ ನಿರ್ಧಾರವಾಗಿತ್ತು’ ಎಂದು ಅವರು ಹೇಳಿದರು.

‘ಪೀಠದಲ್ಲಿದ್ದ ಐವರು ನ್ಯಾಯಮೂರ್ತಿಗಳು 3–4 ತಿಂಗಳ ಅವಧಿಯಲ್ಲಿ 900 ಪುಟಗಳ ತೀರ್ಪು ಬರೆದಿದ್ದಾರೆ. ದೇಶದ ಸಂವಿಧಾನ ಹಾಗೂ ಕಾನೂನಿನ ಆಧಾರದ ಮೇಲೆ ಈ ತೀರ್ಪನ್ನು ನೀಡಲಾಗಿತ್ತೇ ಹೊರತು ಧರ್ಮ ಆಧರಿಸಿ ಅಲ್ಲ’ ಎಂದ ಅವರು, ‘ಒಬ್ಬ ನ್ಯಾಯಾಧೀಶಗೆ ಸಂವಿಧಾನವೇ ಧರ್ಮವಾಗಿರುತ್ತದೆ’ ಎಂದು ಹೇಳಿದರು.

ಗೊಗೊಯಿ ಅವರು ನಿವೃತ್ತಿ ಹೊಂದಿದ ಆರು ತಿಂಗಳ ನಂತರ ರಾಜ್ಯಸಭೆ ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದರು. ಅವರ ಈ ನಡೆಗೆ ವಿರೋಧ ಪಕ್ಷಗಳಿಂದ ತೀಕ್ಷ್ಣ ಟೀಕೆಗಳು ವ್ಯಕ್ತವಾಗಿದ್ದವು. ಚುನಾವಣೆಗೆ ಸ್ಪರ್ಧಿಸುವ ತಮ್ಮ ನಿರ್ಧಾರವನ್ನು ಆಗ ಅವರು ಸಮರ್ಥಿಸಿಕೊಂಡಿದ್ದರು.

ಸಂಕ್ಷಿಪ್ತ ಸುದ್ದಿ

‘ಎಸ್‌.ಸಿ, ಎಸ್‌.ಟಿ ಹೊರತುಪಡಿಸಿ ಜಾತಿ ಆಧರಿಸಿ ಗಣತಿ ಇಲ್ಲ’

ನವದೆಹಲಿ (ಪಿಟಿಐ): ಸ್ವಾತಂತ್ರ್ಯ ನಂತರ ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಹೊರತುಪಡಿಸಿ ಜಾತಿ ಆಧಾರದಲ್ಲಿ ಗಣತಿ ಕಾರ್ಯ ನಡೆದಿಲ್ಲ ಎಂದು ಕೇಂದ್ರ ಸರ್ಕಾರ ಮಂಗಳವಾರ ಲೋಕಸಭೆಯಲ್ಲಿ ತಿಳಿಸಿತು.

ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರ ನೀಡಿರುವ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್, ‘ಕೇಂದ್ರದ ಸಚಿವರು ಸೇರಿ ಎಲ್ಲ ಭಾಗಿದಾರರ ಅಭಿಪ್ರಾಯಗಳನ್ನು ಆಧರಿಸಿ ಗಣತಿ ವೇಳಾಪಟ್ಟಿಯನ್ನು ಅಂತಿಮಗೊಳಿಸಲಾಗಿದೆ’ ಎಂದಿದ್ದಾರೆ.

ಸಂವಿಧಾನದ (ಪರಿಶಿಷ್ಟ ಜಾತಿ) ಆದೇಶ 1950 ಮತ್ತು ಸಂವಿಧಾನದ (ಪರಿಶಿಷ್ಟ ಪಂಗಡ) ಆದೇಶ 1950ರ ಅನುಸಾರ ಆಯಾ ಕಾಲಕ್ಕೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಎಂದು ಅಧಿಸೂಚಿತವಾದ ಜಾತಿಗಳ ವಿವರಗಳನ್ನು ದಶಕಕ್ಕೆ ಒಮ್ಮೆ ನಡೆಯುವ ಗಣತಿ ಪ್ರಕ್ರಿಯೆಯಲ್ಲಿ ದಾಖಲಿಸಲಾಗುತ್ತದೆ ಎಂದೂ ಸಚಿವರು ವಿವರಿಸಿದರು.

ನೌಕಾಪಡೆ ಮುಖ್ಯಸ್ಥರಾಗಿ ಹರಿಕುಮಾರ್ ನೇಮಕ

ನವದೆಹಲಿ (ಪಿಟಿಐ): ಅಡ್ಮಿರಲ್ ಆರ್.ಹರಿಕುಮಾರ್ ಅವರು ನೌಕಾ ಪಡೆಯ ನೂತನ ಮುಖ್ಯಸ್ಥರಾಗಿ ಮಂಗಳವಾರ ಅಧಿಕಾರ ವಹಿಸಿ ಕೊಂಡರು.



ಹರಿಕುಮಾರ್

ಇದಕ್ಕೆ ಮೊದಲು ಅವರು ಪಶ್ಚಿಮ ನೌಕಾ ಕಮಾಂಡ್‌ನ ಫ್ಲಾಗ್ ಆಫೀಸರ್ ಕಮಾಂಡಿಂಗ್–ಇನ್–ಚೀಫ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಸೇವೆಯಿಂದ ನಿವೃತ್ತರಾಗಿರುವ ಅಡ್ಮಿರಲ್ ಕರಮ್‌ಬೀರ್ ಸಿಂಗ್ ಅವರಿಂದ ಅಧಿಕಾರ ಸ್ವೀಕರಿಸಿದರು.

ಹರಿಕುಮಾರ್ ಅವರು ನೌಕಾ ಪಡೆಯಲ್ಲಿ 39 ವರ್ಷಗಳ ಸೇವೆ ಸಲ್ಲಿಸಿದ್ದು, ವಿವಿಧ ಕಮಾಂಡ್‌ಗಳಲ್ಲಿ ಕೆಲಸ ಮಾಡಿದ್ದಾರೆ. ವಿಮಾನವಾಹಕ ಯುದ್ಧನೌಕೆ ಐಎನ್‌ಎಸ್ ವಿರಾಟ್ ಅನ್ನೂ ಮುನ್ನಡೆಸಿದ್ದ ಅವರು, ಪಶ್ಚಿಮ ನೌಕಾಸೇನೆಯ ಫ್ಲೀಟ್ ಆಫೀಸರ್ ಆಗಿಯೂ ಕಾರ್ಯನಿರ್ವಹಿಸಿದ್ದರು.

‘ರಾಷ್ಟ್ರವ್ಯಾಪಿ ಎನ್‌ಆರ್‌ಸಿ ಜಾರಿ ನಿರ್ಧಾರ ಆಗಿಲ್ಲ’

ನವದೆಹಲಿ (ಪಿಟಿಐ): ದೇಶದಾದ್ಯಂತ ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಜಾರಿ ಕುರಿತು ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ಮಂಗಳವಾರ ತಿಳಿಸಿದೆ.

ಪೌರತ್ವ (ತಿದ್ದುಪಡಿ) ಕಾಯ್ದೆಯು 2020ರ ಜನವರಿ 10ರಿಂದ ಜಾರಿಗೆ ಬಂದಿದೆ. ಸಿಎಎ ವ್ಯಾಪ್ತಿಗೆ ಒಳಪಡುವ ಜನರು ನಿಯಮಗಳು ರೂಪಿಸಿದ ಬಳಿಕ ಪೌರತ್ವಕ್ಕೆ ಅರ್ಜಿ ಸಲ್ಲಿಸಬಹುದು ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಲಿಖಿತ ಉತ್ತರ ನೀಡಿದ್ದಾರೆ.

‘ರಾಷ್ಟ್ರ ಮಟ್ಟದಲ್ಲಿ ಎನ್‌ಆರ್‌ಸಿ ತಯಾರಿಯ ಕುರಿತು ಕೇಂದ್ರ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಆದರೆ ಅಸ್ಸಾಂಗೆ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್‌ನ ನಿರ್ದೇಶನದ ಮೇರೆಗೆ ಎನ್‌ಆರ್‌ಸಿಯಲ್ಲಿನ ಸೇರ್ಪಡೆಗಳ ಪೂರಕ ಪಟ್ಟಿಯನ್ನು ಹಾಗೂ ಎನ್‌ಆರ್‌ಸಿಯಿಂದ ಹೊರಗುಳಿಯುವ ಕುಟುಂಬಗಳ ಆನ್‌ಲೈನ್ ಪಟ್ಟಿಯನ್ನು 2019ರ ಆಗಸ್ಟ್ 31ರಂದು ಪ್ರಕಟಿಸಲಾಗಿದೆ’ ಎಂದು ರಾಯ್ ತಿಳಿಸಿದ್ದಾರೆ.

‘5 ವರ್ಷಗಳಲ್ಲಿ ಪೌರತ್ವ ತ್ಯಜಿಸಿದ 6 ಲಕ್ಷ ಜನ’

ನವದೆಹಲಿ (ಪಿಟಿಐ): ಐದು ವರ್ಷಗಳಲ್ಲಿ ಆರು ಲಕ್ಷಕ್ಕೂ ಹೆಚ್ಚು ಜನರು ಭಾರತೀಯ ಪೌರತ್ವವನ್ನು ತ್ಯಜಿಸಿದ್ದಾರೆ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ಮಂಗಳವಾರ ಮಾಹಿತಿ ನೀಡಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದಲ್ಲಿ ಲಭ್ಯವಿರುವ ಅಂಕಿ ಅಂಶಗಳ ಪ್ರಕಾರ ಒಟ್ಟಾರೆ 1,33,83,718 ಭಾರತೀಯರು ವಿದೇಶಗಳಲ್ಲಿ ನೆಲೆಸಿದ್ದಾರೆ ಎಂದು ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಲಿಖಿತ ಉತ್ತರ ನೀಡಿದ್ದಾರೆ.

2017ನೇ ಸಾಲಿನಲ್ಲಿ 1,33,049 ಜನರು ಭಾರತೀಯ ಪೌರತ್ವ ತ್ಯಜಿಸಿದ್ದಾರೆ. 2018ರಲ್ಲಿ 1,34,561 ಜನರು, 2019ರಲ್ಲಿ 1,44,017 ಜನರು, 2020ರಲ್ಲಿ 85,248 ಮಂದಿ ಹಾಗೂ 2021ರ ಸೆ. 30ರವರೆಗೆ 1,11,287 ಜನರು ಭಾರತೀಯ ಪೌರತ್ವ ತ್ಯಜಿಸಿದ್ದಾರೆ ಎಂದು ತಿಳಿಸಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಬಿ.ಎಲ್. ಲಕ್ಕೇಗೌಡ
ನಿವೃತ್ತ ವಿಶೇಷ ಜಿಲ್ಲಾಧಿಕಾರಿಗಳು, ಕರ್ನಾಟಕ ಸರ್ಕಾರದ 'ಸಹಕಾರ ರತ್ನ' ಪ್ರಶಸ್ತಿ ಪುರಸ್ಕೃತರು, ಭಾರತ್ ವಿದ್ಯಾ ಸಂಸ್ಥೆಯ ಸಂಸ್ಥಾಪಕರಾದ ಶ್ರೀ ಬಿ.ಎಲ್. ಲಕ್ಕೇಗೌಡರು ದಿನಾಂಕ: 29.11.2021 ರಂದು ವಿಧಿವಶರಾಗಿದ್ದಾರೆ.
ವಿದ್ಯಾ ಸಂಸ್ಥೆ ಸ್ಥಾಪಿಸಿ ಸಹಸ್ರಾರು ಮಂದಿಗೆ ವಿದ್ಯಾದಾನ ಮಾಡುವುದರ ಮೂಲಕ ಸಮುದಾಯ ಹಾಗೂ ಸಮಾಜಕ್ಕೆ ಅಪಾರ ಕೊಡುಗೆ ನೀಡಿದ ಶ್ರೀಯುತರಿಗೆ ನಮ್ಮ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಶಾಂತಿ ಕೋರಿ ಕುಟುಂಬ ವರ್ಗದವರಿಗೆ ದು:ಖವನ್ನು ಭರಿಸುವ ಶಕ್ತಿ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸಲಾಗಿದೆ.
ಎಸ್.ಟಿ. ಸೋಮಶೇಖರ್, ಅಧ್ಯಕ್ಷರು, ಭಾರತ್ ವಿದ್ಯಾ ಸಂಸ್ಥೆ ಮತ್ತು ಸಹಕಾರ ಸಚಿವರು, ಕರ್ನಾಟಕ ಸರ್ಕಾರ
ಎಂ. ಕೃಷ್ಣದಾಸ್, ಕಾರ್ಯದರ್ಶಿ, ಭಾರತ್ ವಿದ್ಯಾ ಸಂಸ್ಥೆ
ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿವರ್ಗ ಮತ್ತು ವಿದ್ಯಾರ್ಥಿ ವೃಂದ, ಭಾರತ್ ವಿದ್ಯಾ ಸಂಸ್ಥೆ

LOOKING FOR JOB OPPORTUNITY
Refer Classifieds on Wednesday

For Online Classified Booking
Name Change / Education / Property / Job / Services & many more
Log on to :
dhclassifieds.com

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

WORK FROM HOME ಮನೆಯಿಂದಲೇ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ತಕ್ಷಣ ಬೇಕಾಗಿದ್ದಾರೆ MNC ಕಂಪನಿಗಳಿಗೆ SSLC,PUC,ITI Diploma ದವರು ಕೆಲಸಕ್ಕೆ ಬೇಕಾಗಿದ್ದಾರೆ ಉಚಿತ ವಸತಿಯೂಟದೊಂದಿಗೆ: 15,800/- 45000/-.ಕೀರ್ತನ. 8884812156, 8884517968

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಹಾಗೂ ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Ph: 9538811200, 9538811211

ಬೇಕಾಗಿದ್ದಾರೆ ಟಯೋಟಾ, ಟಾಟಾ ಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ,ಪಿಯುಸಿ, ಡಿಗ್ರಿ, ಐಟಿಐ,ಡಿಪ್ಲೊಮಾದವರು 16,600-62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

TOYOTA, ಟಾಟಾಮೋಟಾರ್ಸ್, ಬಿಗ್ ಬಜಾರ್, ಬ್ರಿಟಾನಿಯಾಗಳಿಗೆ 5th,SSLC, Degree, ITI,Diploma ದವರು ನೇರನೇಮಕಾತಿಯಿದೆ.18,000- 60,000 /- ವಸತಿಯೂಟವಿದೆ. 7795837319, 9901312461

Hotel

ಹೊರನಾಡು ಕಳಸದ ಹತ್ತಿರವಿರುವ ರೆಸಾರ್ಟ್‌ಗೆ ರೂಮ್ ಬಾಯ್ಸ್, ಪುರುಷ ಮತ್ತು ಮಹಿಳಾ ಸಹಾಯಕರು, ಅಡುಗೆ ಕೆಲಸದವರು ಬೇಕಾಗಿದ್ದಾರೆ ಸಂಪರ್ಕಿಸಿ: 9886789567/ 8217631509

Marketing & Sales

If you are a SUCCESSFUL INSURANCE AGENT
We have a better career opportunity for you
An exclusive opportunity for all life advisor to recruit and develop your own team and lead them to sell life insurance
What you get ?
• Earn fixed salary • No door to door selling • Earn from many • Work at your convenience
What you have to give ?
Only time & effort we will help you to start business without investment
BE YOUR OWN BOSS
9035004900

WANTED MARKETING and Sales Executives in Bangalore and across Karnataka for a leading book publisher. Phone: 9611185999

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಬೆಂಗಳೂರಿನಲ್ಲಿರುವ ಕಂಪನಿಯಲ್ಲಿ ಕೆಲಸ ಮಾಡುವುದಕ್ಕೆ ಯುವತಿಯರು ಯುವಕರು ಬೇಕಾಗಿದ್ದಾರೆ ವಯಸ್ಸು 25ರೊಳಗೆ ವಸತಿಯೂಟವಿರುತ್ತದೆ. ಸಂಬಳ 15,000/ 25,000/ 7899931996/ 8050060001

ಭವಿಷ್ಯ

Astrology

ಓಂ ಶ್ರೀಹೊರನಾಡು ಅನ್ನಪೂರ್ಣೇಶ್ವರಿ ಜ್ಯೋತಿಷ್ಯಾಲಯ. ಶ್ರೀ ವಾಸುದೇವ ಗುರೂಜಿ Ph:9606064461. ಫೋನಿನ ಮೂಲಕವೇ ಪರಿಹಾರ ತಿಳಿಸುತ್ತಾರೆ. ಜೀವನದ ಹಲವಾರು ಸಮಸ್ಯೆಗಳಿಗೆ ಕೇರಳ ಮಹಾರಾಷ್ಟ್ರ ಮಾಂತ್ರಿಕಶಕ್ತಿಯಿಂದ 2ಗಂಟೆಯಲ್ಲಿ ಪರಿಹಾರ. ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್. ಕೆಲಸವಾಗದಿದ್ದಲ್ಲಿ ಹಣವಾಪಾಸ್.

★॥ಶ್ರೀಕಬ್ಬಾಳಮ್ಮ ದೇವಿ॥★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾದೆ,ವ್ಯಾಪಾರ, ಶತ್ರುಕಾಟ,ಇನ್ನಾವುದೇ_ಕಠಣ ಸಮಸ್ಯೆಗಳಿಗೆ_ಕೇವಲ 30_ನಿಮಿಷದಲ್ಲಿ ಶಾಶ್ವತಪರಿಹಾರ. ''ಸ್ತ್ರೀಯರಿಗೆ ಕಡಿಮೆ_ಖರ್ಚಿನಲ್ಲಿ ವಿಶೇಷ_ಪರಿಹಾರ'' ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಪ್ರವಾಸ

Travel

★ವಿಮಾನದಲ್ಲಿ 10.12.2021★ 11ದಿನಗಳು ರಾಜಸ್ಥಾನ್., 22.02.2022 13 ದಿನಗಳು ಕಾಶಿ ಪ್ರವಾಸ., ಆರ್.ಗಾಂಧಿ ಟೂರ್ಸ್ (ರಿ) 9945445809/ 9902433500

Travel Agencies

24/12/21 ರಿಂದ ನೇಪಾಳ ಕಾಶಿ ಗಯಾ ಪೂರಿ ಜಗನ್ನಾಥ್ ವಿಮಾನದಲ್ಲಿ ಎಲ್ಲಾ ಸೇರಿ 33000/ ಶ್ರೀ ರಾಮ್ ಟೂರ್ 9108933383

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	60	85	70	115

CD Per Sqcm	Single Col	Double Col	Multi Col
	430	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph:080- 45557160 | 163 | 164 | M: 9880856233
9731810277 | 9901641752 | 9845114560 | 9886213331
condition apply*
dhclassifieds@deccanherald.co.in www.dhclassifieds.com

ಭಾರತ–ನ್ಯೂಜಿಲೆಂಡ್ ಟೆಸ್ಟ್ ಪಂದ್ಯ ಡ್ರಾ ಆಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆಟಗಾರ

ರಚಿನ್ ಈಗ ‘ಆಲ್‌ರೌಂಡ್ ಹೀರೊ’

ನವದೆಹಲಿ (ಎಎಫ್‌ಪಿ): ಭಾರತದ ಎದುರಿನ ಮೊದಲ ಟೆಸ್ಟ್ ಪಂದ್ಯವನ್ನು ಡ್ರಾ ಮಾಡಿಕೊಳ್ಳಲು ನೆರವಾದ ರಚಿನ್ ರವೀಂದ್ರ ಅವರು ಈಗ ನ್ಯೂಜಿಲೆಂಡ್‌ನ ‘ಆಲ್‌ರೌಂಡ್ ಹೀರೊ’ ಆಗಿದ್ದಾರೆ.

ಸೋಮವಾರ ಮುಕ್ತಾಯಗೊಂಡ ಪಂದ್ಯದಲ್ಲಿ ಕೊನೆಯ ವಿಕೆಟ್‌ಗೆ ಅಜೇಯ ಆಟವಾಡಿದ ರಚಿನ್ ರವೀಂದ್ರ ಮತ್ತು ಎಜಾಜ್ ಪಟೇಲ್ ಭಾರತದ ಕೈಯಿಂದ ಜಯ ಕಸಿದುಕೊಂಡಿದ್ದರು. ಎಂಟನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಇಳಿದಿದ್ದ ರಚಿನ್ 91 ಎಸೆತ ಎದುರಿಸಿ 18 ರನ್ ಗಳಿಸಿದ್ದರು. ಅದು ರಚಿನ್ ಅವರ ಪದಾರ್ಪಣೆ ಪಂದ್ಯವಾಗಿತ್ತು.

ಕೊನೆಯ ಕ್ರಮಾಂಕದ ಪಟೇಲ್ ಅವರು ರವೀಂದ್ರ ಜಡೇಜ ಹಾಕಿದ ಅಂತಿಮ ಓವರ್‌ನ ಎಲ್ಲ ಎಸೆತಗಳನ್ನು ಎದುರಿಸಿದ್ದರು. ಬೆಂಗಳೂರು ಮೂಲದ ರವೀಂದ್ರ ಅವರೊಂದಿಗೆ ಮುಂಬೈ ಮೂಲದ ಎಜಾಜ್ ಕೂಡ ನ್ಯೂಜಿಲೆಂಡ್‌ನಲ್ಲಿ ಈಗ ಕ್ರಿಕೆಟ್ ಪ್ರಿಯರ ಗಮನ ಸೆಳೆದಿದ್ದಾರೆ.

‘ಗ್ಯಾಲರಿಗಳಿಂದ ಪ್ರೇಕ್ಷಕರ ಜೋರು ಕೂಗು. ವಿಕೆಟ್ ಸುತ್ತ ಫೀಲ್ಡರ್‌ಗಳ ಗೋಡೆ...ಸಣ್ಣ ವಯಸ್ಸಿನಲ್ಲಿ ಊಹಿಸಿಕೊಂಡಿದ್ದ ಇಂಥ ಸನ್ನಿವೇಶದಲ್ಲಿ ನಾನೇ ಸಿಕ್ಕಿಬಿದ್ದಾಗ ಒಂದು ಬಗೆಯ ರೋಮಾಂಚನವಾಗಿತ್ತು’ ಎಂದು ವೆಲಿಂಗ್ಟನ್‌ನಲ್ಲಿ ಜನಿಸಿದ ರಚಿನ್ ಹೇಳಿದರು.

‘ಇಂಥ ರೋಚಕ ಪಂದ್ಯಗಳನ್ನು ನೋಡಿಕೊಂಡೇ ಬೆಳೆದವರು ನಾವು. ಅಂಥ ಪಂದ್ಯಗಳಲ್ಲಿ ಆಡಿದವರ ಬಗ್ಗೆ ಗೌರವ ಉಳಿಸಿಕೊಂಡು ಬಂದಿದ್ದೆವು. ಈ ಪಂದ್ಯದ ಕೊನೆಯ ಓವರ್‌ಗಳಲ್ಲಿ ಇಬ್ಬರೂ ನರನಾಡಿಗಳನ್ನು ಬಿಗಿಹಿಡಿದುಕೊಂಡು ಆಡಿದ್ದೆವು. ಆದರೆ ಕೊನೆಗೆ ಎಲ್ಲವೂ ಅಂದುಕೊಂಡಂತೆ ಆಯಿತು. ಈ ಗಳಿಗೆಯನ್ನು ಜೀವನದಲ್ಲಿ ಮರೆಯಲು ಸಾಧ್ಯವೇ ಇಲ್ಲ’ ಎಂದು ರಚಿನ್ ನುಡಿದರು.

ರವೀಂದ್ರ ಬಗ್ಗೆ ಮಾತನಾಡಿದ ನಾಯಕ ಕೇನ್ ವಿಲಿಯಮ್ಸನ್ ‘ಅವರೊಬ್ಬ ಆಲ್‌ರೌಂಡ್ ಪ್ಯಾಕೇಜ್’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ರಚಿನ್ ರವೀಂದ್ರ ಅವರಿಗೆ ತಂಡದ ಸಹ ಆಟಗಾರರಿಂದ ಅಭಿನಂದನೆ–ಟ್ವಿಟರ್ ಚಿತ್ರ

‘ದಕ್ಷಿಣ ಆಫ್ರಿಕಾ ಪ್ರವಾಸ ಅಬಾಧಿತ’

ಭಾರತ ತಂಡದ ದಕ್ಷಿಣ ಆಫ್ರಿಕಾ ಪ್ರವಾಸ ನಿಗದಿಯಂತೆ ನಡೆಯಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕೋಶಾಧಿಕಾರಿ ಅರುಣ್ ಧುಮಲ್ ತಿಳಿಸಿದ್ದಾರೆ.

ಕೋವಿಡ್–19ರ ಹೊಸ ತಳಿ ಓಮೈಕ್ರಾನ್ ಪತ್ತೆಯಾದ ಹಿನ್ನೆಲೆಯಲ್ಲಿ ದಕ್ಷಿಣ ಆಫ್ರಿಕಾ ಮತ್ತು ನೆರೆರಾಷ್ಟ್ರಗಳಲ್ಲಿ ಆತಂಕದ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಭಾರತದ ಪ್ರವಾಸದ ಬಗ್ಗೆ ಸಂದೇಹಗಳು ಎದ್ದಿದ್ದವು.

ಮುಂಬೈನಲ್ಲಿ ನ್ಯೂಜಿಲೆಂಡ್ ಎದುರಿನ ಎರಡನೇ ಹಾಗೂ ಕೊನೆಯ ಟೆಸ್ಟ್ ಡಿಸೆಂಬರ್ ಮೂರರಿಂದ ಮುಂಬೈನಲ್ಲಿ ನಡೆಯಲಿದ್ದು ಈ ಪಂದ್ಯದ ನಂತರ ವಿಶೇಷ ವಿಮಾನದಲ್ಲಿ ಭಾರತ ತಂಡ ಜೊಹಾನ್ಸ್‌ಬರ್ಗ್‌ಗೆ ತೆರಳಲಿದೆ. ಅಲ್ಲಿ 17ರಿಂದ ಮೊದಲ ಟೆಸ್ಟ್ ನಡೆಯಲಿದೆ. ತಲಾ ಮೂರು ಟೆಸ್ಟ್ ಮತ್ತು ಏಕದಿನ, ನಾಲ್ಕು ಟ್ವೆಂಟಿ20 ಪಂದ್ಯಗಳನ್ನು ದಕ್ಷಿಣ ಆಫ್ರಿಕಾ ಎದುರು ಭಾರತ ಆಡಲಿದೆ.

ರಾಹುಲ್–ಸಚಿನ್; ರಚಿನ್ ಆದಾಗ...

ರಚಿನ್ ರವೀಂದ್ರ ಅವರ ಹೆಸರಿನ ಮೊದಲ ಭಾಗವು ರಾಹುಲ್ ದ್ರಾವಿಡ್ ಮತ್ತು ಸಚಿನ್ ತೆಂಡೂಲ್ಕರ್ ಅವರ ಮಿಶ್ರಣ. ಪಂದ್ಯ ಮುಗಿದ ನಂತರ ರಚಿನ್ ಅವರನ್ನು ಸಚಿನ್ ಕೊಂಡಾಡಿದ್ದರು.
’ಅದು ಅಮೋಘ ಆಟವಾಗಿತ್ತು’ ಎಂದು ಟ್ವೀಟ್ ಮಾಡಿದ್ದರು.

‘ತಂದೆ–ತಾಯಿ ಪ್ರೋತ್ಸಾಹ ಕಾರಣ’

ರಚಿನ್ ಅವರ ತಂದೆ ರವಿ ಕೃಷ್ಣಮೂರ್ತಿ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಸಿಸ್ಟಂ ಆರ್ಕಿಟೆಕ್ಟ್ ಆಗಿದ್ದರು. ಸ್ಥಳೀಯ ಹಂತದ ಕ್ರಿಕೆಟ್ ಆಡಿದ್ದ ಅವರು ನಂತರ ನ್ಯೂಜಿಲೆಂಡ್‌ಗೆ ವಲಸೆ ಹೋಗಿದ್ದರು. ಅಲ್ಲಿ ಹಟ್ ಹಾಕ್ಸ್ ಕ್ರಿಕೆಟ್ ಕ್ಲಬ್‌ನಲ್ಲೂ ಕೆಲ ಕಾಲ ಆಡಿದ್ದಾರೆ. 16 ವರ್ಷದವರಾಗಿದ್ದಾಗಲೇ ನ್ಯೂಜಿಲೆಂಡ್‌ನ 19 ವರ್ಷದೊಳಗಿನವರ ತಂಡದಲ್ಲಿ ಆಡಲು ಆರಂಭಿಸಿದ್ದ ರಚಿನ್ ನಂತರ ಪ್ರತಿ ಹಂತದಲ್ಲೂ ಮಿಂಚಿದ್ದರು. ತಂದೆ–ತಾಯಿ ಪ್ರೋತ್ಸಾಹವೇ ತಮ್ಮ ಸಾಧನೆಯ ಬಲ ಎಂದು ರಚಿನ್ ರವೀಂದ್ರ ಹೇಳಿದರು.

ಕಾನ್ಪುರ ಟೆಸ್ಟ್ ಡ್ರಾ ಮಾಡಿಕೊಳ್ಳಲು ‘ಮಾರ್ಗದರ್ಶಕ’ ಎಜಾಜ್ ಪಟೇಲ್ ಸಹಕಾರವೂ ಮುಖ್ಯವಾಗಿತ್ತು ಎಂದು ರಚಿನ್ ಹೇಳಿದ್ದಾರೆ.

’ಪಟೇಲ್ ಅವರನ್ನು ಐದು ವರ್ಷಗಳಿಂದ ಬಲ್ಲೆ. ಅವರೊಂದಿಗೆ ಪ್ರಥಮ ದರ್ಜೆ ಕ್ರಿಕೆಟ್ ಆಡಿದ್ದೇನೆ. ಕ್ರೀಸ್‌ನ ಮತ್ತೊಂದು ತುದಿಯಲ್ಲಿ ಅವರಿದ್ದುದು ಅನುಕೂಲವಾಯಿತು. ಬೌಲಿಂಗ್ ಮಾಡುವ ಸಂದರ್ಭದಲ್ಲೂ ಪಟೇಲ್ ನೆರವಾಗುತ್ತಿದ್ದಾರೆ’ ಎಂದು ಅವರು ಹೇಳಿದರು.

19ರಂದು ರಾಜ್ಯ ಕ್ರಾಸ್‌ಕಂಟ್ರಿ ಚಾಂಪಿಯನ್‌ಷಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉತ್ತರ ಕನ್ನಡ ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆಯು ಡಿಸೆಂಬರ್ 19ರಂದು ರಾಜ್ಯ ಕ್ರಾಸ್‌ಕಂಟ್ರಿ ಚಾಂಪಿಯನ್‌ಷಿಪ್ ಆಯೋಜಿಸಿದೆ. ಯಲ್ಲಾಪುರದ ಕಾಳಮ್ಮ ನಗರ ತಾಲ್ಲೂಕು ಕ್ರೀಡಾಂಗಣದಲ್ಲಿ ಸ್ಪರ್ಧೆಗಳು ನಡೆಯಲಿವೆ.

16, 18 ಮತ್ತು 20 ವರ್ಷದೊಳಗಿನ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಚಾಂಪಿಯನ್‌ಷಿಪ್ ನಡೆಯಲಿದೆ. 2022ರ ಜನವರಿ 15ರಿಂದ ನಾಗಾಲ್ಯಾಂಡ್‌ನ ಕೊಹಿಮಾದಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ತಂಡದ ಆಯ್ಕೆಯೂ ಇದೇ ಸಂದರ್ಭದಲ್ಲಿ ನಡೆಯಲಿದೆ.

ಸ್ಪರ್ಧಿಗಳು www.karathletic.in ವಿಳಾಸಕ್ಕೆ ನೋಂದಾಯಿಸಿಕೊಳ್ಳಬೇಕು ಎಂದು ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆಯ ಕಾರ್ಯದರ್ಶಿ ಎ.ರಾಜವೇಲು (ಮೊಬೈಲ್ ಸಂಖ್ಯೆ 9448438276), ಸದಾನಂದ ನಾಯ್ಕ (9448014307) ಮತ್ತು ಕೆ.ಆರ್. ನಾಯ್ಕ (9845846351) ಅವರನ್ನು ಸಂಪರ್ಕಿಸಬೇಕು.

ಕೊರಿಯಾಕ್ಕೆ ಭಾರತ ಮಹಿಳಾ ಹಾಕಿ ತಂಡ

ಸವಿತಾ ಪೂನಿಯಾ

ಬೆಂಗಳೂರು (ಪಿಟಿಐ): ಭಾರತ ಮಹಿಳಾ ಹಾಕಿ ತಂಡವು ಏಷ್ಯನ್ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾಗವಹಿಸಲು ಮಂಗಳವಾರ ದಕ್ಷಿಣ ಕೊರಿಯಾಕ್ಕೆ ತೆರಳಿತು. ಡಿಸೆಂಬರ್ 5ರಿಂದ 12ರವರೆಗೆ ದಕ್ಷಿಣ ಕೊರಿಯಾದ ಡಾನ್‌ಗೆಯಲ್ಲಿ ಚಾಂಪಿಯನ್‌ಷಿಪ್ ನಿಗದಿಯಾಗಿದೆ.

ಟೋಕಿಯೊ ಒಲಿಂಪಿಕ್ಸ್ ಬಳಿಕ ಭಾರತ ತಂಡ ಆಡಲಿರುವ ಮೊದಲ ಟೂರ್ನಿ ಇದು. ಡಿಸೆಂಬರ್ 5ರಂದು ತನ್ನ ಮೊದಲ ಪಂದ್ಯದಲ್ಲಿ ಥಾಯ್ಲೆಂಡ್ ತಂಡಕ್ಕೆ ಮುಖಾಮುಖಿಯಾಗಲಿದೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಭಾರತ, ಈ ಟೂರ್ನಿಯಲ್ಲಿ ಗರಿಷ್ಠ ರ‍್ಯಾಂಕ್ ಹೊಂದಿರುವ ತಂಡವಾಗಿದೆ.

‘ತಂಡ ಉತ್ಸುಕ ವಾಗಿದೆ. ಒಲಿಂಪಿಕ್ಸ್ ನಂತರ ಇದು ನಮ್ಮ ಮೊದಲ ಟೂರ್ನಿಯಾಗಿದ್ದು, ಉತ್ತಮ ಸಾಮರ್ಥ್ಯ ನೀಡುವ ಜವಾಬ್ದಾರಿ ನಮ್ಮ ಮೇಲಿದೆ‘ ಎಂದು ಭಾರತ ತಂಡವನ್ನು ಮುನ್ನಡೆಸಲಿರುವ ಸವಿತಾ ಪೂನಿಯಾ ಹೇಳಿದ್ದಾರೆ.

ಅಫ್ಗನ್: ನಿಲ್ಲದ ಪ್ರತೀಕಾರ ಮಾಜಿ ಅಧಿಕಾರಿಗಳಿಗೆ ಆತಂಕ

ಕಾಬೂಲ್ (ಎ.ಪಿ): ಅಫ್ಗಾನಿಸ್ತಾನದ ಆಡಳಿತವನ್ನು ವಶಕ್ಕೆ ಪಡೆದ ಬಳಿಕ ತಾಲಿಬಾನ್ ಹೋರಾಟಗಾರರು 100ಕ್ಕೂ ಹೆಚ್ಚು ಪೊಲೀಸ್ ಮತ್ತು ಗುಪ್ತದಳದ ಅಧಿಕಾರಿಗಳನ್ನು ಕೊಂದಿದ್ದಾರೆ ಅಥವಾ ನಾಪತ್ತೆಗೊಳಿಸಿದ್ದಾರೆ.

ಮಾನವ ಹಕ್ಕುಗಳ ಕಣ್ಗಾವಲು ಸಂಸ್ಥೆಯು ತನ್ನ ವರದಿಯಲ್ಲಿ ಈ ಅಂಶ ಉಲ್ಲೇಖಿಸಿದೆ. ಕ್ಷಮಾದಾನದ ನಂತರವೂ ಪದಚ್ಯುತಗೊಂಡ ಸರ್ಕಾರದ ಶಸ್ತ್ರಸಜ್ಜಿತ ಸೇನೆ ಜೊತೆಗಿನ ಘರ್ಷಣೆ ಇನ್ನೂ ಮುಂದುವರಿದಿದೆ ಎಂದು ತಿಳಿಸಿದೆ.

ಸರ್ಕಾರದ ಮಾಹಿತಿ ಆಧರಿಸಿ ತಾಲಿಬಾನ್ ಪಡೆಗಳು ಮಾಜಿ ಅಧಿಕಾರಿಗಳನ್ನು ಬೇಟೆಯಾಡುತ್ತಿವೆ. ಶರಣಾದ ಮತ್ತು ಸುರಕ್ಷತೆ ಕುರಿತು ಖಾತರಿಪತ್ರ ಪಡೆದ ಅಧಿಕಾರಿಗಳನ್ನೇ ಗುರಿಯಾಗಿಸಿ ಕಾರ್ಯಾಚರಣೆ ನಡೆಸುತ್ತಿವೆ ಎಂದು ಹೇಳಿದೆ.

‘ಕೆಲವು ಪ್ರಕರಣಗಳಲ್ಲಿ ತಾಲಿಬಾನ್‌ನ ಸ್ಥಳೀಯ ಅಧಿಕಾರಿಗಳು, ‘ಪ್ರತೀಕಾರ’ ಭಾವನೆ ಹೊಂದಿರುವ ಕೆಲ ಜನರ ಪಟ್ಟಿಯನ್ನು ಸ್ಥಳೀಯವಾಗಿಯೇ ಸಿದ್ಧಪಡಿಸಿಕೊಂಡಿದ್ದಾರೆ. ತಾಲಿಬಾನ್ ಹೋರಾಟಗಾರರು ಕೊಲೆ ಮಾಡುವ ಶೈಲಿಯು ಅಫ್ಗಾನಿಸ್ತಾನದುದ್ದಕ್ಕೂ ಭೀತಿಯ ಭಾವನೆಯನ್ನು ಹುಟ್ಟುಹಾಕಿದೆ. ಹಿಂದಿನ ಸರ್ಕಾರದ ಜೊತೆಗೆ ಗುರುತಿಸಿಕೊಂಡ ಯಾರಿಗೂ ಸುರಕ್ಷತಾ ಭಾವನೆಯೇ ಇಲ್ಲವಾಗಿದೆ’ ಎಂದು ಮಾನವಹಕ್ಕುಗಳ ಕಣ್ಗಾವಲು ಸಂಸ್ಥೆಯು ತಿಳಿಸಿದೆ.

ಯೋಗ ತರಗತಿಯಲ್ಲಿ ಕಿರುಕುಳ, ಭಾರತೀಯನ ವಿರುದ್ಧ ಪ್ರಕರಣ

ಸಿಂಗಪುರ (ಪಿಟಿಐ): ಯೋಗ ತರಗತಿಯಲ್ಲಿ ಐವರು ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದ ಹಾಗೂ ದೌರ್ಜನ್ಯ ಎಸಗಿದ ಆರೋಪವನ್ನು ಭಾರತ ಮೂಲದ 32 ವರ್ಷದ ಯೋಗ ತರಬೇತುದಾರನ ಮೇಲೆ ಹೊರಿಸಲಾಗಿದೆ.

ಆರೋಪಿಯ ಹೆಸರು ಬಹಿರಂಗಪಡಿಸಿಲ್ಲ. ತರಗತಿಯಲ್ಲಿ ಈತ 24ರಿಂದ 29 ವರ್ಷದ ಮಹಿಳೆಯರ ಜೊತೆಗೆ ಅನುಚಿತವಾಗಿ ವರ್ತಿಸಿದ್ದ ಕೃತ್ಯ 2020ರ ಜೂನ್‌ನಲ್ಲಿ ನಡೆದಿತ್ತು ಎಂದು ಚಾನಲ್ ನ್ಯೂಸ್ ಏಷ್ಯಾ ವರದಿ ಮಾಡಿದೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ನಡೆದ ವಿಚಾರಣೆಗೆ ಆರೋಪಿಯು ಹಾಜರಾಗಿದ್ದು, ಕೋರ್ಟ್ ಜಾಮೀನು ಮಂಜೂರು ಮಾಡಿದೆ. ವಿಚಾರಣೆಯನ್ನು ಡಿಸೆಂಬರ್ 14ಕ್ಕೆ ಮುಂದೂಡಲಾಗಿದೆ.

ಸಂಕ್ಷಿಪ್ತ ಸುದ್ದಿ

ಸೂಕಿ ವಿರುದ್ಧ ಪ್ರಕರಣ: ತೀರ್ಪು ಮುಂದೂಡಿಕೆ

ಬ್ಯಾಂಕಾಕ್ (ಎಪಿ): ಸಾರ್ವಜನಿಕವಾಗಿ ಶಾಂತಿಗೆ ಭಂಗ ತಂದ ಆರೋಪಕ್ಕೆ ಸಂಬಂಧಿಸಿದಂತೆ ಮ್ಯಾನ್ಮಾರ್‌ನ ಉಚ್ಚಾಟಿತ ನಾಯಕಿ ಆಂಗ್ ಸಾನ್ ಸೂಕಿ ವಿರುದ್ಧ ದಾಖಲಾಗಿರುವ ಪ್ರಕರಣದ ತೀರ್ಪನ್ನು ಡಿಸೆಂಬರ್ 6ಕ್ಕೆ ಮುಂದೂಡಲಾಗಿದೆ.

ಈ ಮುಂಚೆ ತಿಳಿಸಿದ ಪ್ರಕಾರ ಮಂಗಳವಾರವೇ ತೀರ್ಪು ಪ್ರಕಟವಾಗಬೇಕಾಗಿತ್ತು. ಆದರೆ, ಸೂಕಿ ವಿರುದ್ಧ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಸಾಕ್ಷ್ಯಾಧಾರಗಳನ್ನು ಸಲ್ಲಿಸಲು ಅವಕಾಶ ನೀಡಿದ ನ್ಯಾಯಾಲಯ ಡಿಸೆಂಬರ್ 6ಕ್ಕೆ ತೀರ್ಪು ನೀಡುವುದಾಗಿ ತಿಳಿಸಿದೆ.

ಫೆಬ್ರುವರಿಯಲ್ಲಿ ಮ್ಯಾನ್ಮಾರ್‌ನಲ್ಲಿ ಆದ ಸೇನಾ ದಂಗೆ ವೇಳೆ ಬಂಧನಕ್ಕೆ ಒಳಗಾಗಿರುವ ಸೂಕಿ ಅವರ ವಿರುದ್ಧ ಶಾಂತಿಗೆ ಭಂಗ ತಂದಿರುವುದು ಸೇರಿದಂತೆ 10 ಆರೋಪಗಳನ್ನು ಮಾಡಲಾಗಿದೆ.

ಮಿಲಿಟರಿ ಹೆಲಿಕಾಪ್ಟರ್ ಪತನ, 14 ಮಂದಿ ಸಾವು

ಬಾಕು, ಅಜರ್‌ಬೈಜಾನ್ (ಎಪಿ): ಅಜರ್‌ಬೈಜಾನ್‌ನಲ್ಲಿ ಮಿಲಿಟರಿ ಹೆಲಿಕಾಪ್ಟರ್‌ವೊಂದು ಮಂಗಳವಾರ ತರಬೇತಿ ವೇಳೆ ಪತನಗೊಂಡಿದ್ದರಿಂದ 14 ಮಂದಿ ಮೃತಪಟ್ಟಿದ್ದು ಇಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಜರ್‌ಬೈಜಾನ್‌ನ ರಾಜ್ಯ ಗಡಿ ಕಾವಲು ಸೇವೆಯ ಹೆಲಿಕಾಪ್ಟರ್ ಮಂಗಳವಾರ ಬೆಳಿಗ್ಗೆ ತರಬೇತಿ ಮೈದಾನದಲ್ಲಿ ಹಾರಾಟ ನಡೆಸುವ ವೇಳೆ ಅಪಘಾತಕ್ಕೀಡಾಗಿದೆ ಎಂದು ಗಡಿ ಕಾವಲು ಸೇವೆ ಮತ್ತು ಅಜರ್‌ಬೈಜಾನ್‌ನ ಪ್ರಾಸಿಕ್ಯೂಟರ್ ಜನರಲ್ ಕಚೇರಿಯ ಜಂಟಿ ಹೇಳಿಕೆಯೊಂದು ತಿಳಿಸಿದೆ.

ಅಪಘಾತಕ್ಕೆ ಕಾರಣ ಏನು ಎಂದು ತಕ್ಷಣಕ್ಕೆ ತಿಳಿದು ಬಂದಿಲ್ಲ. ಎರಡು ಸರ್ಕಾರಿ ಸಂಸ್ಥೆಗಳು ಈ ಬಗ್ಗೆ ತನಿಖೆ ನಡೆಸುತ್ತಿವೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಷೇರುಪೇಟೆ ವಹಿವಾಟು

195



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,053
ಇಂದಿನ ಅಂತ್ಯ	16,983
▼	70
ದಿನದ ಕನಿಷ್ಠ	16,931

ವಿನಿಮಯ ದರ

$ ಡಾಲರ್	75.13
£ ಪೌಂಡ್	100.44
€ ಯುರೊ	85.42
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹447

ಎರಡನೇ ತ್ರೈಮಾಸಿಕದಲ್ಲಿ ಕೋವಿಡ್‌ಗೂ ಮುಂಚಿನ ಮಟ್ಟ ಮೀರಿದೆ

ಜಿಡಿಪಿ ಶೇ 8.4ರಷ್ಟು ಬೆಳವಣಿಗೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ದೇಶದ ಆರ್ಥಿಕ ವೃದ್ಧಿ ದರವು (ಜಿಡಿಪಿ) ಶೇ 8.4ರಷ್ಟು ಬೆಳವಣಿಗೆ ಕಂಡಿದ್ದು, ಕೋವಿಡ್‌ಗೂ ಮುಂಚಿನ ಮಟ್ಟವನ್ನು ದಾಟಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಜಿಡಿಪಿ ಶೇ 20.1ರಷ್ಟು ಬೆಳವಣಿಗೆ ಕಂಡಿತ್ತು. ಇದಕ್ಕೆ ಹೋಲಿಸಿದರೆ ಎರಡನೇ ತ್ರೈಮಾಸಿಕದಲ್ಲಿ ಬೆಳವಣಿಗೆಯು ಇಳಿಕೆ ಆಗಿದೆ. ಆದರೆ, ಹೋಲಿಕೆಯ ಮಟ್ಟವಾದ ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಜಿಡಿಪಿ ಭಾರಿ ಕುಸಿತ (ಶೇ (–) 7.4) ಕಂಡಿದ್ದು ಕೂಡ, ಈ ತ್ರೈಮಾಸಿಕದಲ್ಲಿ ಬೆಳವಣಿಗೆ ದರ ಇಷ್ಟಿರುವುದಕ್ಕೆ ಒಂದು ಕಾರಣ. ಕೋವಿಡ್ ನಿಯಂತ್ರಿಸಲು ಕೇಂದ್ರ ಸರ್ಕಾರವು ಕಳೆದ ವರ್ಷ ದೇಶದಾದ್ಯಂತ ಲಾಕ್‌ಡೌನ್ ಹೇರಿದ್ದರಿಂದ ಜಿಡಿಪಿ ಬೆಳವಣಿಗೆ ನಕಾರಾತ್ಮಕ ಮಟ್ಟ ತಲುಪಿತ್ತು.

ಆರ್ಥಿಕ ಚಟುವಟಿಕೆಗಳು ಸಹಜ ಸ್ಥಿತಿಯತ್ತ ಮರಳುತ್ತಿದ್ದು, ಸತತ ನಾಲ್ಕನೇ ತ್ರೈಮಾಸಿಕದಲ್ಲಿಯೂ ಜಿಡಿಪಿ ಸಕಾರಾತ್ಮಕ ಬೆಳವಣಿಗೆ ಕಂಡಂತಾಗಿದೆ.

ಆರ್ಥಿಕ ಚಟುವಟಿಕೆಗಳು ಮತ್ತೆ ಆರಂಭ ಆಗಿರುವುದರಿಂದ ಜನರು ಸರಕು ಮತ್ತು ಸೇವೆಗಳ ಖರೀದಿಗೆ ಮಾಡುತ್ತಿರುವ ಖರ್ಚಿನಲ್ಲಿ ಏರಿಕೆ ಕಂಡುಬಂದಿದೆ. ಹೆಚ್ಚು ಜನರು ಲಸಿಕೆ ಪಡೆದಿದ್ದರಿಂದ ಈ ಅವಧಿಯಲ್ಲಿ ಕೋವಿಡ್ ತೀವ್ರತೆಯೂ ಕಡಿಮೆ ಆಗಿತ್ತು. ಈ ಎಲ್ಲಾ ಕಾರಣಗಳಿಂದಾಗಿ ಎರಡನೇ ತ್ರೈಮಾಸಿಕದಲ್ಲಿ ಜಿಡಿಪಿಯು ಈ ಪ್ರಮಾಣದ ಬೆಳವಣಿಗೆ ಕಂಡಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್–ಸೆಪ್ಟೆಂಬರ್ ಅವಧಿ) ಜಿಡಿಪಿಯು ಶೇ 13.7ರಷ್ಟು ಬೆಳವಣಿಗೆ ಕಂಡಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಶೇ (–) 15.9ರಷ್ಟು ಇಳಿಕೆ ಕಂಡಿತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಮಾಹಿತಿ ನೀಡಿದೆ.

ಎರಡಂಕಿ ಪ್ರಗತಿ ನಿರೀಕ್ಷೆ: ಸಿಇಎ

ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕತೆಯು ಎರಡಂಕಿ ಪ್ರಗತಿ ಸಾಧಿಸುವ ನಿರೀಕ್ಷೆ ಮಾಡಲಾಗಿದೆ ಎಂದು ಮುಖ್ಯ ಆರ್ಥಿಕ ಸಲಹೆಗಾರ (ಸಿಇಎ) ಕೆ.ವಿ. ಸುಬ್ರಮಣಿಯನ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಜಿಡಿಪಿ ಶೇ 13.7ರಷ್ಟು ಬೆಳವಣಿಗೆ ಕಂಡಿದೆ. ಮುಂಬರುವ ತ್ರೈಮಾಸಿಕಗಳಲ್ಲಿ ಶೇ 6ಕ್ಕಿಂತಲೂ ತುಸು ಹೆಚ್ಚಿನ ಮಟ್ಟದ ಬೆಳವಣಿಗೆ ಕಾಣಲಿದ್ದು, ಒಟ್ಟಾರೆಯಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಎರಡಂಕಿ ಪ್ರಗತಿಗೆ ನೆರವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ವಿತ್ತೀಯ ಕೊರತೆ ₹ 5.47 ಲಕ್ಷ ಕೋಟಿ

ದೇಶದ ವಿತ್ತೀಯ ಕೊರತೆಯು ಅಕ್ಟೋಬರ್ ತಿಂಗಳ ಅಂತ್ಯಕ್ಕೆ ₹ 5.47 ಲಕ್ಷ ಕೋಟಿಗಳಷ್ಟಾಗಿದೆ. ಬಜೆಟ್ ಅಂದಾಜಿನ ಪ್ರಕಾರ ಶೇ 36.3ರಷ್ಟಾಗಿದೆ.

ವರಮಾನ ಸಂಗ್ರಹದಲ್ಲಿ ಸುಧಾರಣೆ ಕಂಡುಬಂದಿರುವುದರಿಂದ ವಿತ್ತೀಯ ಕೊರತೆಯು ಈ ಪ್ರಮಾಣದ ಬೆಳವಣಿಗೆ ಕಂಡಿದೆ ಎಂದು ಸಿಜಿಎ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷಕ್ಕೆ ವಿತ್ತೀಯ ಕೊರತೆಯು ಜಿಡಿಪಿಯ ಶೇ 6.8ರಷ್ಟು (₹ 15.06 ಲಕ್ಷ ಕೋಟಿಗಳಷ್ಟು) ಇರುವ ಅಂದಾಜು ಮಾಡಲಾಗಿದೆ.

ಎಕ್ಸೈಸ್ ಸುಂಕ ಸಂಗ್ರಹ ಎರಡು ಪಟ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಸಂಗ್ರಹವು 2019–20ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ 2020–21ನೇ ಹಣಕಾಸು ವರ್ಷದಲ್ಲಿ ಎರಡು ಪಟ್ಟು ಹೆಚ್ಚಾಗಿದೆ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ರಾಜ್ಯಸಭೆಗೆ ಮಾಹಿತಿ ನೀಡಿದ್ದಾರೆ.

2019–20ರಲ್ಲಿ ಎಕ್ಸೈಸ್ ಸುಂಕದಿಂದ ₹ 1.78 ಲಕ್ಷ ಕೋಟಿ ವರಮಾನ ಸಂಗ್ರಹಿಸಲಾಗಿತ್ತು. ಇದು 2020–21ರಲ್ಲಿ ₹ 3.72 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ ಎಂದು ಅವರು ತಿಳಿಸಿದ್ದಾರೆ.

ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ಹೆಚ್ಚಳ ಮಾಡಿರುವುದೇ ಸುಂಕ ಸಂಗ್ರಹದಲ್ಲಿ ಹೆಚ್ಚಳ ಆಗಲು ಕಾರಣ. 2019ರಲ್ಲಿ ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕ ಪ್ರತಿ ಲೀಟರಿಗೆ ₹ 19.98ರಷ್ಟು ಇತ್ತು. ಕೇಂದ್ರ ಸರ್ಕಾರವು ಕಳೆದ ವರ್ಷ ಇದನ್ನು ಪ್ರತಿ ಲೀಟರಿಗೆ ₹ 32.98ಕ್ಕೆ ಹೆಚ್ಚಿಸಿತು. ಅದೇ ರೀತಿ ಡೀಸೆಲ್ ಮೇಲಿನ ಎಕ್ಸೈಸ್ ಸುಂಕವನ್ನು ಸಹ ಪ್ರತಿ ಲೀಟರಿಗೆ ₹ 15.83 ರಷ್ಟು ಇದ್ದಿದ್ದು ₹ 31.83ಕ್ಕೆ ಏರಿಕೆ ಆಯಿತು. ಆ ಬಳಿಕ ಈ ವರ್ಷದ ಬಜೆಟ್‌ನಲ್ಲಿ ಪೆಟ್ರೋಲ್ ಮೇಲಿನ ಸುಂಕವನ್ನು ಪ್ರತಿ ಲೀಟರಿಗೆ ₹ 32.90 ಮತ್ತು ಡೀಸೆಲ್ ಮೇಲಿನ ಸುಂಕವನ್ನು ಪ್ರತಿ ಲೀಟರಿಗೆ ₹ 31.80ಕ್ಕೆ ಅಲ್ಪ ಇಳಿಕೆ ಮಾಡಲಾಯಿತು.

ದೇಶದಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಗರಿಷ್ಠ ಮಟ್ಟಕ್ಕೆ ತಲುಪಿದ್ದರಿಂದ ಕೇಂದ್ರ ಸರ್ಕಾರವು ನವೆಂಬರ್‌ನಲ್ಲಿ ಪೆಟ್ರೋಲ್ ಮೇಲಿನ ಸುಂಕವನ್ನು ಲೀಟರಿಗೆ ₹ 5 ಮತ್ತು ಡೀಸೆಲ್ ಮೇಲಿನ ಸುಂಕವನ್ನು ಲೀಟರಿಗೆ ₹ 10ರಷ್ಟು ಇಳಿಕೆ ಮಾಡಿತು. ಇದರಿಂದಾಗಿ ಸದ್ಯ ಪೆಟ್ರೋಲ್ ಮೇಲಿನ ಎಕ್ಸೈಸ್ ಸುಂಕ ಲೀಟರಿಗೆ ₹ 27.90 ಮತ್ತು ಡೀಸೆಲ್ ಮೇಲಿನ ಎಕ್ಸೈಸ್ ಸುಂಕ ಲೀಟರಿಗೆ ₹ 21.80 ಇದೆ.

2020–21ನೇ ಹಣಕಾಸು ವರ್ಷದಲ್ಲಿ ಎಕ್ಸೈಸ್ ಸುಂಕದಿಂದ ಸಂಗ್ರಹ ಆಗಿರುವ ಒಟ್ಟಾರೆ ಮೊತ್ತದಲ್ಲಿ ರಾಜ್ಯಗಳಿಗೆ ₹ 19,972 ಕೋಟಿ ನೀಡಲಾಗಿದೆ ಎಂದು ಚೌಧರಿ ತಿಳಿಸಿದ್ದಾರೆ. ಕೇಂದ್ರವು ಸಂಗ್ರಹಿಸುವ ಸುಂಕದಲ್ಲಿ ಮೂಲ ಎಕ್ಸೈಸ್ ಸುಂಕದ ಪಾಲು ಮಾತ್ರವೇ ರಾಜ್ಯಗಳಿಗೆ ಸಿಗುತ್ತದೆ. ಸದ್ಯ ಲೀಟರಿಗೆ ಪೆಟ್ರೋಲ್ ಮೇಲಿನ ಮೂಲ ಎಕ್ಸೈಸ್ ಸುಂಕ ₹ 1.40 ಮತ್ತು ಡೀಸೆಲ್ ಮೇಲಿನ ಮೂಲ ಎಕ್ಸೈಸ್ ಸುಂಕ ಲೀಟರಿಗೆ ₹ 1.80 ಇದೆ.

ಸುಂಕ ಸಂಗ್ರಹ ವಿವರ
(₹ ಲಕ್ಷ ಕೋಟಿಗಳಲ್ಲಿ)



ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	750-850
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	510
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-42500
ಹಳತು	46000-52500
ಕುಂದಾಪುರ	
ಹಳೆಚಾಲಿ	44000-51500
ಪುತ್ತೂರು	
ಕೋಕ	11000-26000
ಹೊಸತು	27500-42500
ಕಾರ್ಕಳ	
ಹೊಸತು	35000-42500
ಸಿದ್ದಾಪುರ	
ಬಿಳಿಗೋಟು	33089-43099
ಚಾಲಿ	46699-50599
ಕೋಕ	28099-37399
ಹೊಸಚಾಲಿ	33099-36099
ಕೆಂಪುಗೋಟು	25629-33019
ರಾಶಿ	46109-48109
ತಟ್ಟಿಬೆಟ್ಟೆ	34609-44099
ಶಿರಸಿ	
ಬೆಟ್ಟೆ	20069-44699
ಬಿಳಿಗೋಟು	19069-43810
ಚಾಲಿ	33700-50801
ರಾಶಿ	39099-51300
ಯಲ್ಲಾಪುರ	
ಬಿಳಿಗೋಟು	31011-42931
ಚಾಲಿ	44389-50894
ಕೋಕ	22011-34899
ಕೆಂಪುಗೋಟು	28899-31850
ರಾಶಿ	46891-53799
ತಟ್ಟಿಬೆಟ್ಟೆ	39161-45699
ರಾಮನಗರ ರೇಷ್ಮೆ	
ಮಿಶ್ರತಳಿ	330-557
ದ್ವಿತಳಿ	388-661

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14700	14600	14300	203.5 ಸೆಂಟ್ಸ್
ಎಸಿ	6400	5500	6150	
ಆರ್‌ಪಿ	6200	---	6200	
ಆರ್‌ಸಿ	3640	3250	3700	2258 ಡಾಲರ್ಸ್

ಷೇರುಪೇಟೆ ವಹಿವಾಟಿಗೆ ಅಡ್ಡಿಯಾದ ಓಮೈಕ್ರಾನ್

ಮುಂಬೈ (ಪಿಟಿಐ): ಓಮೈಕ್ರಾನ್‌ನ ಪರಿಣಾಮಕ್ಕೆ ಒಳಗಾಗಿ ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ನಕಾರಾತ್ಮಕ ವಹಿವಾಟು ನಡೆಯಿತು.

ಜಾಗತಿಕ ಆರ್ಥಿಕ ಚೇತರಿಕೆಗೆ ಓಮೈಕ್ರಾನ್ ಅಡ್ಡಿಯಾಗಲಿದೆ ಎನ್ನುವ ಭಯದಿಂದ ಷೇರುಪೇಟೆಗಳಲ್ಲಿ ಸೂಚ್ಯಂಕಗಳು ಇಳಿಕೆ ಕಾಣುವಂತಾಯಿತು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ, ವಿದೇಶಿ ಬಂಡವಾಳ ಹೊರಹರಿವು ದಿನದ ವಹಿವಾಟಿನ ಮೇಲೆ ಪರಿಣಾಮ ಬೀರಿದವು ಎಂದು ವರ್ತಕರು ಹೇಳಿದ್ದಾರೆ.



ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಮಧ್ಯಂತರ ವಹಿವಾಟಿನಲ್ಲಿ 900 ಅಂಶಗಳಷ್ಟು ಏರಿಕೆ ಕಂಡಿತ್ತಾದರೂ ನಂತರ ಇಳಿಮುಖ ಹಾದಿ ಹಿಡಿಯಿತು. ಇದರಿಂದ ಅಂತಿಮವಾಗಿ 196 ಅಂಶಗಳ ಇಳಿಕೆಯೊಂದಿಗೆ 57,065 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 70 ಅಂಶ ಇಳಿಕೆ ಕಂಡು 16,983 ಅಂಶಗಳಿಗೆ ತಲುಪಿತು.

ರಿಲಯನ್ಸ್ ಕ್ಯಾಪಿಟಲ್‌ಗೆ ಸಲಹಾ ಸಮಿತಿ

ಮುಂಬೈ (ಪಿಟಿಐ): ಅನಿಲ ಅಂಬಾನಿ ಒಡೆತನದ ರಿಲಯನ್ಸ್ ಕ್ಯಾಪಿಟಲ್‌ನ ಆಡಳಿತಾಧಿಕಾರಿಗೆ ನೆರವಾಗುವಂತೆ ಮೂವರು ಸದಸ್ಯರ ಸಲಹಾ ಸಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಂಗಳವಾರ ನೇಮಿಸಿದೆ.

ಆಡಳಿತಾತ್ಮಕ ವೈಫಲ್ಯ ಮತ್ತು ಸಾಲ ಮರುಪಾವತಿಸದೇ ಇರುವ ಕಾರಣಗಳಿಗಾಗಿ ಕಂಪನಿಯ ಆಡಳಿತ ಮಂಡಳಿಯನ್ನು ಆರ್‌ಬಿಐ ಸೋಮವಾರ ರದ್ದು ಮಾಡಿದೆ.

‘ಪೊಲೀಸರಿಗೆ ಸಾಲ ಕೊಡದಂತೆ ಬ್ಯಾಂಕ್‌ಗೆ ಹೇಳಿಲ್ಲ’

ನವದೆಹಲಿ (ಪಿಟಿಐ): ಪೊಲೀಸರು, ರಾಜಕಾರಣಿಗಳು ಮುಂತಾದ ‘ಪ್ರಭಾವಿ’ ವರ್ಗದವರಿಗೆ ಸಾಲ ನೀಡದೇ ಇರುವಂತೆ ಬ್ಯಾಂಕ್‌ಗಳಿಗೆ ಯಾವುದೇ ನಿರ್ದಿಷ್ಟ ನಿರ್ದೇಶನಗಳನ್ನು ನೀಡಲಾಗಿಲ್ಲ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ರಾಜ್ಯಸಭೆಗೆ ಮಂಗಳವಾರ ಸ್ಪಷ್ಟಪಡಿಸಿದ್ದಾರೆ.

ಬ್ಯಾಂಕ್‌ಗಳು ‘ಕೆವೈಸಿ’ ಮತ್ತು ಇತರೆ ರೇಟಿಂಗ್ಸ್‌ಗಳ ಮೂಲಕ ಇಂತಹ ವರ್ಗದವರಿಗೆ ಸಾಲ ನೀಡುವ ಕುರಿತು ಮೌಲ್ಯಮಾಪನ ಮಾಡಬಹುದು ಎಂದು ಹೇಳಿದ್ದಾರೆ.

ಪೊಲೀಸರು ಮತ್ತು ರಾಜಕಾರಣಿಗಳಿಗೆ ಸಾಲ ನೀಡುವಲ್ಲಿ ಬ್ಯಾಂಕ್‌ಗಳು ಸಮಸ್ಯೆ ಹೊಂದಿವೆ. ಇಂತಹ ಗ್ರಾಹರಿಗೆ ಸಾಲ ನೀಡುವ ಮೊದಲು ಬ್ಯಾಂಕ್‌ಗಳು ದಾಖಲೆಗಳನ್ನು ನೋಡುತ್ತವೆ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕೃಷ್ಣರಾವ್ ಕರಾಡ್ ಅವರು ತಿಳಿಸಿದ್ದಾರೆ.

ಕ್ರಿಪ್ಟೊಕರೆನ್ಸಿ ಕುರಿತು ಹೊಸ ಮಸೂದೆ ಸಿದ್ಧಪಡಿಸುವ ಬಗ್ಗೆ ಕೇಂದ್ರ ಸರ್ಕಾರವು ಕೆಲಸ ಮಾಡುತ್ತಿದ್ದು ಕೇಂದ್ರ ಸಚಿವ ಸಂಪುಟದ ಒಪ್ಪಿಗೆಯ ಬಳಿಕ ಸಂಸತ್‌ನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಸಚಿವೆ ನಿರ್ಮಲಾ ಅವರು ತಿಳಿಸಿದ್ದಾರೆ.

ವಿಮಾ ಕಂಪನಿಗಳ ವಿಲೀನ ಇಲ್ಲ: ಕರಾಡ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಸಾಮಾನ್ಯ ವಿಮಾ ಕಂಪನಿಗಳನ್ನು ವಿಲೀನಗೊಳಿಸುವ ಯಾವುದೇ ಆಲೋಚನೆಯೂ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕೃಷ್ಣರಾವ್ ಕರಾಡ್ ಅವರು ಮಂಗಳವಾರ ರಾಜ್ಯಸಭೆಗೆ ತಿಳಿಸಿದ್ದಾರೆ.

ಸರ್ಕಾರಿ ಸ್ವಾಮ್ಯದ ಕಂಪನಿಗಳು: ನ್ಯೂ ಇಂಡಿಯಾ ಅಶ್ಯುರೆನ್ಸ್ ಕಂಪನಿ, ನ್ಯಾಷನಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್, ಯುನೈಟೆಡ್ ಇಂಡಿಯಾ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಮತ್ತು ಓರಿಯಂಟಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್–ಹಣಕಾಸು ತಜ್ಞ
uppuranik@gmail.com
ಮೊ: 9448015300

ಜೈರಾಮರಾವ್, ಬನಶಂಕರಿ

● **ಪ್ರಶ್ನೆ: ನಾನು ಸರ್ಕಾರಿ ನೌಕರ. ನನಗೆ ಪಿಂಚಣಿ ಇಲ್ಲ. ಪಿಂಚಣಿಗೆ ಬದಲಾಗಿ ನನ್ನಿಂದ ಶೇಕಡ 10 ಹಾಗೂ ಸರ್ಕಾರದಿಂದ ಶೇ 14 ಎನ್.ಪಿ.ಎಸ್. ಜಮಾ ಆಗುತ್ತದೆ. ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ₹ 50 ಸಾವಿರ ವಿನಾಯಿತಿ ಪಡೆಯಬಹುದೇ ತಿಳಿಸಿ. ಪ್ರತಿ ಬುಧವಾರ ನಿಮ್ಮ ಅಂಕಣದ ಮೇಲೆ ನಮ್ಮ ಕಚೇರಿಯಲ್ಲಿ ಚರ್ಚಿಸುತ್ತೇವೆ. ಎಲ್ಲಾ ವರ್ಗದ ಜನರಿಗೆ ಸರಳವಾದ ಕನ್ನಡದಲ್ಲಿ ಉತ್ತರಿಸುವ ನಿಮಗೆ ಅಭಿನಂದನೆ.**

ಉತ್ತರ: ಓರ್ವ ನೌಕರ ಸೆಕ್ಷನ್ 80ಸಿಸಿಡಿ (1) ಆಧಾರದ ಮೇಲೆ ತನ್ನ ಬೇಸಿಕ್ + ಡಿ.ಎ.ದಲ್ಲಿ ಶೇಕಡ 10ರಷ್ಟು ಎನ್.ಪಿ.ಎಸ್.ಗೆ ಜಮಾ ಮಾಡಿದಲ್ಲಿ ಸೆಕ್ಷನ್ 80ಸಿ ಮಿತಿ ₹ 1.50 ಲಕ್ಷದೊಳಗೆ ವಿನಾಯಿತಿ ಪಡೆಯಬಹುದು. ಸೆಕ್ಷನ್ 80ಸಿಸಿಡಿ (2) ಆಧಾರದ ಮೇಲೆ ಗರಿಷ್ಠ ಮಿತಿ ಇಲ್ಲದೆ ಉದ್ಯೋಗದಾತರು ಕೊಡುವ ಕೊಡುಗೆಯಲ್ಲಿ ಬೇಸಿಕ್ + - ಡಿ.ಎ.ದಲ್ಲಿ ಶೇ 10ರಷ್ಟು ವಿನಾಯಿತಿ ಪಡೆಯಬಹುದು. ಇವೆರಡೂ ಯೋಜನೆ ಹೊರತುಪಡಿಸಿ, ನೀವು ಸೆಕ್ಷನ್ 80ಸಿಸಿ (1ಬಿ) ಆಧಾರದ ಮೇಲೆ ಕೂಡಾ ಎನ್.ಪಿ.ಎಸ್.ನಲ್ಲಿ ಗರಿಷ್ಠ ₹ 50 ಸಾವಿರ ಹೂಡಿಕೆ ಮಾಡಿ ವಿನಾಯಿತಿ ಪಡೆಯಬಹುದು. ನಿಮ್ಮ ಅಭಿಮಾನಕ್ಕೆ ಧನ್ಯವಾದ.

ರಾಮಾನಾಯ್ಕ್, ಹಳದೀಪುರ (ಹೊನ್ನಾವರ)

● **ಪ್ರಶ್ನೆ: ನನ್ನ ಕೃಷಿ ಜಮೀನು ರಾಷ್ಟ್ರೀಯ ಹೆದ್ದಾರಿಗೆ ಹೋಗುತ್ತಿದೆ. ಇದರಿಂದ ಬರುವ ಹಣಕ್ಕೆ ತೆರಿಗೆ ಇದೆಯೇ ತಿಳಿಸಿ. ಒಂದು ಕೃಷಿ ಜಮೀನು ಮಾರಾಟ ಮಾಡಿ ಇನ್ನೊಂದು ಕೃಷಿ ಜಮೀನು ಕೊಳ್ಳುವಾಗ ತೆರಿಗೆ ಬರುವುದಾದರೆ ವಿನಾಯಿತಿ, ಕಾನೂನು, ಅವಧಿ ಎಲ್ಲವನ್ನೂ ತಿಳಿಸಿ.**

ಉತ್ತರ: ಸರ್ಕಾರ ಕೃಷಿ ಜಮೀನನ್ನು ಕಡ್ಡಾಯವಾಗಿ ವಶಪಡಿಸಿಕೊಂಡಾಗ (compulsory acquisition) ಸೆಕ್ಷನ್ 15ಎಚ್ ಆಧಾರದ ಮೇಲೆ ಪರಿಹಾರದ ಹಣ ಸಿಕ್ಕಿದ ತಾರೀಕಿನಿಂದ ಎರಡು ವರ್ಷದೊಳಗೆ ಪರಿಹಾರದಿಂದ ಪಡೆದ ಹಣಕ್ಕೆ ಕಡಿಮೆ ಆಗದಂತೆ ಮತ್ತೊಂದು ಜಮೀನು ಕೊಳ್ಳಬಹುದು. ಅದೇ ರೀತಿ ಸೆಕ್ಷನ್ 54 (ಬಿ) ಆಧಾರದ ಮೇಲೆ ಓರ್ವ ಕೃಷಿಕ ಜಮೀನನ್ನು ಮಾರಾಟ ಮಾಡಿ ಬರುವ ಮೊತ್ತದಲ್ಲಿ ಬೇರೊಂದು ಕೃಷಿ ಜಮೀನನ್ನು ಕೊಳ್ಳಬಹುದು. ಹೀಗೆ ಮಾಡಿದಲ್ಲಿ ಅಲ್ಪಾವಧಿ–ದೀರ್ಘಾವಧಿ–ಬಂಡವಾಳ ವೃದ್ಧಿ ತೆರಿಗೆ ಬರುವುದಿಲ್ಲ. ಈ ಪ್ರಕ್ರಿಯೆ ಎರಡು ವರ್ಷದೊಳಗೆ ಆಗಬೇಕು. ಇದೇ ವೇಳೆ ಹೀಗೆ ಕೊಂಡ ಕೃಷಿ ಜಮೀನನ್ನು ಮೂರು ವರ್ಷದೊಳಗೆ ಮಾರಾಟ ಮಾಡುವಂತಿಲ್ಲ. ಕೃಷಿ ಜಮೀನು ಸೆಕ್ಷನ್ 48 ಆಧಾರದ ಮೇಲೆ ಮಾರಾಟ ಮಾಡಿದಾಗ ಅಥವಾ ಸರ್ಕಾರ ವಶಪಡಿಸಿಕೊಂಡಾಗ ಬಂಡವಾಳ ವೃದ್ಧಿ ತೆರಿಗೆಯಿಂದ ವಿನಾಯಿತಿ ಹೊಂದಿದ್ದರೂ ಅಂತಹ ಕೃಷಿ ಜಮೀನು ಪಟ್ಟಣಕ್ಕೆ ಸಮೀಪ ಇರುವಲ್ಲಿ ಉಳಿದ ಸ್ಥಿರ ಆಸ್ತಿಯಂತೆ ಮಾರಾಟ ಮಾಡಿದಾಗ ಬಂಡವಾಳವೃದ್ಧಿ ತೆರಿಗೆ ಕೊಡಬೇಕಾಗುತ್ತದೆ.

ಮಹಂತೇಶಪ್ಪ, ಶಿವಮೊಗ್ಗ

● **ಪ್ರಶ್ನೆ: ನಾನು ಕೆಎಸ್‌ಆರ್‌ಟಿಸಿಯಲ್ಲಿ ಕೆಲಸ ಮಾಡುತ್ತಿದ್ದು 31–3–2022 ನಿವೃತ್ತಿಯಾಗುತ್ತಿದ್ದೇನೆ. ಎಲ್ಲಾ ಸೇರಿಸಿ ಅಂದಾಜು ₹ 42 ಲಕ್ಷ ನಿವೃತ್ತಿಯಿಂದ ಬರಬಹುದು. ಸ್ವಂತ ಮನೆ ಇಲ್ಲ. ಪಿಂಚಣಿ ಇಲ್ಲ. ₹ 42 ಲಕ್ಷಕ್ಕೆ ಎಷ್ಟು ತೆರಿಗೆ ಬರಬಹುದು? ₹ 42 ಲಕ್ಷದಲ್ಲಿ ₹ 30 ಲಕ್ಷದಿಂದ ಒಂದು ಫ್ಲ್ಯಾಟ್ ಕೊಳ್ಳುವ ವಿಚಾರ ಇದೆ. ತೆರಿಗೆ, ಉಳಿತಾಯ, ಫ್ಲ್ಯಾಟ್ ಕೊಳ್ಳುವ ವಿಚಾರದಲ್ಲಿ ಗೊಂದಲಕ್ಕೆ ಪರಿಹಾರ ನೀಡಿ.**

ಉತ್ತರ: ನಿವೃತ್ತಿಯಿಂದ ಪಡೆಯುವ (terminal benefit) ಎಲ್ಲಾ ಮೊತ್ತಗಳಿಗೆ ತೆರಿಗೆ ವಿನಾಯಿತಿ ಇದೆ. ಆದರೆ ಕೇಂದ್ರ ಸರ್ಕಾರ–ರಾಜ್ಯ ಸರ್ಕಾರದ ನೌಕರರನ್ನು ಹೊರತುಪಡಿಸಿ ಉಳಿದವರು ರಜಾ ಸಂಬಳ ನಗದೀಕರಿಸಿದಲ್ಲಿ ಅಂತಹ ಹಣ ₹ 3 ಲಕ್ಷದೊಳಗೆ ಇರುವಲ್ಲಿ ಮಾತ್ರ ತೆರಿಗೆ ಬರುವುದಿಲ್ಲ. ಮಿಕ್ಕಿದ ಹಣಕ್ಕೆ ತೆರಿಗೆ ಕೊಡಬೇಕಾಗುತ್ತದೆ. (ಸೆಕ್ಷನ್ 10 (10ಎಎ)). ನಿಮ್ಮೊಡನೆ ಈಗಾಗಲೇ ಮಾಡಿರುವ ಹೆಚ್ಚಿನ ಉಳಿತಾಯದ ಹಣವಿದ್ದು ಹಾಗೂ ಪಿತ್ರಾರ್ಜಿತ ಕೃಷಿ ಜಮೀನಿದ್ದು, ಇವುಗಳಿಂದ ಬರುವ ವರಮಾನ ಜೀವನೋಪಾಯಕ್ಕೆ ಸರಿ ಹೋಗುವಲ್ಲಿ ಮಾತ್ರ ₹ 30 ಲಕ್ಷವನ್ನು ಫ್ಲ್ಯಾಟ್‌ಗೆ ವಿನಿಯೋಗಿಸಿರಿ. ₹ 42 ಲಕ್ಷ ಜೀವನೋಪಾಯಕ್ಕೆಂದು ಬಳಸುವಲ್ಲಿ ₹ 15 ಲಕ್ಷ ಅಂಚೆ ಕಚೇರಿ ಹಿರಿಯ ನಾಗರಿಕ ಠೇವಣಿಯಲ್ಲಿ ಹಾಗೂ ಇನ್ನೊಂದು ₹ 15 ಲಕ್ಷ ಎಲ್‌ಐಸಿ ವಯೋವಂದನಾ ಯೋಜನೆಯಲ್ಲಿ ಇರಿಸಿ. ಈ ಎರಡೂ ಹೂಡಿಕೆ ಭದ್ರವಾಗಿದ್ದು, ಇವುಗಳಿಂದ ವಾರ್ಷಿಕ ಶೇ 7.4 ಬಡ್ಡಿ ಪಡೆಯಬಹುದು. ಉಳಿದ ₹ 12 ಲಕ್ಷ ಮನೆಗೆ ಸಮೀಪದ ಬ್ಯಾಂಕ್‌ನಲ್ಲಿ ಅವಧಿ ಠೇವಣಿಯಲ್ಲಿ ಇಡಿ. ಹೆಚ್ಚಿನ ವರಮಾನ, ಉಡುಗೊರೆ ಹಾಗೂ ಕಮಿಷನ್ ಆಸೆಯಿಂದ ಅಭದ್ರವಾದ ಹೂಡಿಕೆಯಲ್ಲಿ ಹಣ ಇಡಬೇಡಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1295 (1320)
ಸೋಯಾ (ರಿಫೈನ್ಡ್)	₹1215 (1225)
ಸೂರ್ಯಕಾಂತಿ (ರಿಫೈನ್ಡ್)	₹1280 (1290)
ಪಾಮೋಲಿನ್	₹1180 (1192)

ಮುಂಬೈ ಧಾರಣೆ

ಶೇಂಗಾ

30-11-2021

ಜಾವಾ 70/80(ಹೊಸ)	10200-10250
ಜಾವಾ 80/90(ಹೊಸ)	9900-9950
ದಪ್ಪ ಮಧ್ಯಪ್ರದೇಶ(ಹೊಸ)	9800-9850
ದಪ್ಪ ಗುಜರಾತ್(ಹೊಸ)	9400-9450

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1305 (1330)
ಒಂದು ವಾರದ ಡೆಲಿವರಿ	1300 (1325)
ಸೋಯಾ ಕಚ್ಚಾ	1157 (1185)
ಪಾಮ್ ವಾರದ ಡೆಲಿವರಿ	1178 (1190)
ಸೂರ್ಯಕಾಂತಿ ಎಣ್ಣೆ ಕಚ್ಚಾ	1200 (1200)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	47,950 (47,800)
ಬೆಳ್ಳಿ ಕೆ.ಜಿ	62,100 (62,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಪ್ರಜಾಧ್ವನಿ
ಜನರ ಮನದಾಳದ ಮಾತು
ಓಮೈಕ್ರಾನ್ ಸೋಂಕು ಕುರಿತು ರಾಜ್ಯದ ಜನರಲ್ಲಿ ಉಂಟಾಗಿರುವ ಆತಂಕ ಅನಗತ್ಯವೇ?
QR ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/prajadhwani ಲಿಂಕ್ ಮೂಲಕ ಇಂದು ಸಂಜೆ 5ರ ಒಳಗೆ ನಿಮ್ಮ ಅನಿಸಿಕೆಯನ್ನು ಕಳುಹಿಸಿ

ಮಹಿಳೆಯರ ವಿಶ್ವ ಟೆನಿಸ್ ಟೂರ್ ಚಾಂಪಿಯನ್‌ಷಿಪ್: ಸೋಹಾ ಸಾದಿಕ್ ಗಮನಾರ್ಹ ಆಟ

ಜಗಮೀತ್ ಗೆಲುವಿನ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಬಲ ಪೈಪೋಟಿಯಲ್ಲಿ ಎದುರಾಳಿಯನ್ನು ಮಣಿಸಿದ ಜಗಮೀತ್ ಕೌರ್ ಗ್ರೆವಾಲ್ ಅವರು ಮಹಿಳೆಯರ ಐಟಿಎಫ್ ಅಂತರರಾಷ್ಟ್ರೀಯ ಟೆನಿಸ್ ಟೂರ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಗೆಲುವು ದಾಖಲಿಸಿದರು.

ರಾಜ್ಯ ಟೆನಿಸ್ ಸಂಸ್ಥೆಯ ಅಂಗಣದಲ್ಲಿ ಮಂಗಳವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ದೆಹಲಿಯ 19 ವರ್ಷದ ಜಗಮೀತ್ 6-2, 2-6, 6-3ರಲ್ಲಿ ಐದನೇ ಶ್ರೇಯಾಂಕದ ಮಿಹಿಕಾ ಯಾದವ್ ವಿರುದ್ಧ ಗೆದ್ದರು.

ವೈಲ್ಡ್ ಕಾರ್ಡ್ ಮೂಲಕ ಪ್ರವೇಶ ಪಡೆದಿರುವ ಜಗಮೀತ್ ಆರಂಭದಲ್ಲಿ ಆಕ್ರಮಣಕಾರಿ ಆಟಕ್ಕೆ ಮುಂದಾದರು. ಇದರಿಂದ ಕಂಗೆಟ್ಟ ಎದುರಾಳಿ ಚೆಂಡನ್ನು ರಿಟರ್ನ್ ಮಾಡಲು ಪರದಾಡಿದರು. 4-0ಯಿಂದ ಜಗಮೀತ್ ಮುನ್ನಡೆದಾಗ ಮಿಹಿಕಾ ತಿರುಗೇಟು ನೀಡಿ ಎರಡು ಪಾಯಿಂಟ್ ಕಲೆ ಹಾಕಿದರು. ಆದರೆ ನಂತರ ಸಂಪೂರ್ಣ ಕಳೆಗುಂದಿದರು.

ಎರಡನೇ ಸೆಟ್‌ನಲ್ಲಿ ಮಿಹಿಕಾ ಭರ್ಜರಿ ಆಟವಾಡಿ ಬಲಶಾಲಿ ಹೊಡೆತಗಳೊಂದಿಗೆ ಮಿಂಚಿದರು. ಹೀಗಾಗಿ ಸುಲಭವಾಗಿ ಸೆಟ್ ಗೆದ್ದು ಸಮಬಲ ಸಾಧಿಸಿದರು. ನಿರ್ಣಾಯಕ ಸೆಟ್‌ನಲ್ಲಿ ಜಗಮೀತ್ ಮತ್ತೆ ಲಯ ಕಂಡುಕೊಂಡರು. ಎದುರಾಳಿಯ ಸ್ವಯಂ ತಪ್ಪುಗಳ ಲಾಭ ಪಡೆದುಕೊಂಡ ಅವರು ಆರಂಭದಲ್ಲಿ 5–0ಯಿಂದ ಮುನ್ನಡೆ ಸಾಧಿಸಿದರು. ಮಿಹಿಕಾ ಪಟ್ಟು ಬಿಡದೆ ಆಡಿ ಪಾಯಿಂಟ್‌ಗಳನ್ನು ಕಲೆ ಹಾಕಿದರೂ ಪಂದ್ಯ ಜಗಮೀತ್ ಅವರ ಪಾಲಾಯಿತು.

ಜಗಮೀತ್ ಕೌರ್ ಗ್ರೇವಾಲ್ ಅವರ ಆಟದ ಭಂಗಿ – ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಖ್ಯಾತ ಟೆನಿಸ್ ಪಟು ರೋಹನ್ ಬೋಪಣ್ಣ ಅವರು ಆಟಗಾರ್ತಿಯರಿಗೆ ಶುಭ ಕೋರಿದರು. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಬೋಪಣ್ಣ ಅವರನ್ನು ಈ ಸಂದರ್ಭದಲ್ಲಿ ರಾಜ್ಯ ಲಾನ್ ಟೆನಿಸ್ ಸಂಸ್ಥೆಯು ಸನ್ಮಾನಿಸಿತು– ಪ್ರಜಾವಾಣಿ ಚಿತ್ರ

ಸ್ಥಳೀಯ ಆಟಗಾರ್ತಿ ಸೋಹಾ ಸಾದಿಕ್ ಸೊಗಸಾದ ಆಟವಾಡಿ ಅಮೆರಿಕದ ಶ್ರೇಯಾ ಅಟುರಾ ಅವರನ್ನು ಮಣಿಸಿ ಮೊದಲ ದಿನವೇ ಗಮನ ಸೆಳೆದರು. 32ರ ಘಟ್ಟದ ಪಂದ್ಯದಲ್ಲಿ ಅವರು 6-2, 6-2ರ ಜಯ ಸಾಧಿಸಿದರು. ಅಕ್ಟೋಬರ್‌ನಲ್ಲಿ ಮಹಿಳಾ ಓಪನ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದ ಸೋಹಾ ಚುರುಕಿನ ಆಟದ ಮೂಲಕ ಎದುರಾಳಿಯನ್ನು ಕಂಗೆಡಿಸಿದರು.

ಏಳನೇ ಶ್ರೇಯಾಂಕದ ಕೊರಿಯಾ ಆಟಗಾರ್ತಿ ಸೊ ರಾ ಲೀ ಭಾರತದ ರಮ್ಯಾ ನಟರಾಜನ್ ವಿರುದ್ಧ 6-4, 6-2ರಲ್ಲಿ ಗೆಲುವು ಸಾಧಿಸಿದರೆ, ವೈದೇಹಿ ಚೌಧರಿ 6-2, 6-2ರಲ್ಲಿ ನಿಧಿ ಚಿಲುಮುಲ ಅವರನ್ನು ಮಣಿಸಿದರು.

ಡಬಲ್ಸ್ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಶರ್ಮದಾ ಬಾಲು–ಶ್ರವ್ಯಾ ಶಿವಾನಿ ಜೋಡಿ ಸೊನಾಶೆ ಭಟ್ನಾಗರ್– ಬೇಲಾ ತಮಂಕರ್ ಅವರನ್ನು 3-6, 2-6ರಲ್ಲಿ ಮಣಿಸಿದರು. ಹುಮೇರಾ–ಶ್ರೀವಲ್ಲಿ ಜೋಡಿ ಆರತಿ ಮುನಿಯನ್–ಆಕಾಂಕ್ಷಾ ದಿಲೀಪ್ ಜೋಡಿ ವಿರುದ್ಧ 1-6, 2-6ರಲ್ಲಿ, ಸಾಯಿ ಸಂಹಿತಾ–ಸೋಹಾ ಸಾದಿಕ್ ಜೋಡಿ 4-6, 1-6ರಲ್ಲಿ ನಿಧಿ ಚಿಲುಮುಲ–ಸ್ನೇಹಲ್ ಮಾನೆ ಜೋಡಿ ವಿರುದ್ಧ ಗೆದ್ದರು.

ಐಪಿಎಲ್: ಆಟಗಾರರ ಉಳಿಸಿಕೊಳ್ಳುವ ಪ್ರಕ್ರಿಯೆ

ಪಂಜಾಬ್‌ನಿಂದ ರಾಹುಲ್ 'ಔಟ್'

ನವದೆಹಲಿ (ಪಿಟಿಐ): ಮಹೇಂದ್ರ ಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿ ಅವರನ್ನು ಕ್ರಮವಾಗಿ ಚೆನ್ನೈಯಿನ್ ಸೂಪರ್ ಕಿಂಗ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ತಮ್ಮಲ್ಲೇ ಉಳಿಸಿಕೊಂಡಿವೆ. ನಾಯಕ ಕೆ.ಎಲ್. ರಾಹುಲ್ ಅವರನ್ನು ಪಂಜಾಬ್ ಕಿಂಗ್ಸ್ ಬಿಡುಗಡೆ ಮಾಡಿದೆ. ಕನ್ನಡಿಗ ಮಯಂಕ್ ಅಗರವಾಲ್ ಅವರು ಪಂಜಾಬ್ ಕಿಂಗ್ಸ್‌ನಲ್ಲೇ ಇದ್ದಾರೆ.

ಕೆ.ಎಲ್‌.ರಾಹುಲ್

ವಿರಾಟ್ ಕೊಹ್ಲಿ

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ 2022ರ ಆವೃತ್ತಿಗೆ ಆಟಗಾರರನ್ನು ಉಳಿಸಿಕೊಳ್ಳುವ ಪ್ರಕ್ರಿಯೆ ಪೂರ್ಣಗೊಳಿಸಲು ಮಂಗಳವಾರ ಕೊನೆಯ ದಿನವಾಗಿತ್ತು. ಸನ್‌ರೈಸರ್ಸ್ ಹೈದರಾಬಾದ್ ತಂಡ ನಾಯಕ ಕೇನ್ ವಿಲಿಯಮ್ಸನ್ ಅವರನ್ನು ಉಳಿಸಿಕೊಂಡಿದ್ದು ಸ್ಪಿನ್ನರ್ ರಶೀದ್ ಖಾನ್ ಅವರನ್ನೂ ಬಿಡುಗಡೆ ಮಾಡಿದೆ.

ಮಹೇಂದ್ರ ಸಿಂಗ್ ಧೋನಿ ಅವರೊಂದಿಗೆ ರವೀಂದ್ರ ಜಡೇಜ, ಋತುರಾಜ್ ಗಾಯಕವಾಡ್ ಮತ್ತು ಮೋಯಿನ್ ಅಲಿ ಅವರನ್ನು ಚೆನ್ನೈ ಉಳಿಸಿಕೊಂಡಿದೆ. ಸುನಿಲ ನಾರಾಯಣ್, ಆ್ಯಂಡ್ರೆ ರಸೆಲ್, ವರುಣ್ ಚಕ್ರವರ್ತಿ ಮತ್ತು ವೆಂಕಟೇಶ್ ಅಯ್ಯರ್ ಅವರು ಕೋಲ್ಕತ್ತ ನೈಟ್ ರೈಡರ್ಸ್‌ನಲ್ಲಿ ಉಳಿದು–ಕೊಂಡಿದ್ದಾರೆ.

ಮುಂಬೈ ಇಂಡಿಯನ್ಸ್ ನಾಯಕ ರೋಹಿತ್ ಶರ್ಮಾ, ವೇಗಿ ಜಸ್‌ಪ್ರೀತ್ ಬೂಮ್ರಾ, ಆಲ್‌ರೌಂಡರ್ ಕೀರನ್ ಪೊಲಾರ್ಡ ಮತ್ತು ಸೂರ್ಯಕುಮಾರ್ ಯಾದವ್ ಅವರನ್ನು ಉಳಿಸಿದ್ದು ಡೆಲ್ಲಿ ರಿಷಭ್ ಪಂತ್, ಪೃಥ್ವಿ ಶಾ, ಅಕ್ಷರ್ ಪಟೇಲ್ ಮತ್ತು ಆ್ಯನ್ರಿಚ್ ನಾರ್ಕಿಯ ಅವರನ್ನು ಬಿಟ್ಟುಕೊಡಲು ಸಿದ್ಧವಿರಲಿಲ್ಲ.

ಹಾರ್ದಿಕ್ ಪಾಂಡ್ಯ ಮತ್ತು ಇಶಾನ್ ಕಿಶನ್ ಅವರನ್ನು ಮುಂಬೈ ಇಂಡಿಯನ್ಸ್ ಬಿಡಗಡೆ ಮಾಡಿದ್ದು ಆರ್‌ಸಿಬಿ ತಂಡ ಸ್ಪಿನ್ನರ್ ಯಜುವೇಂದ್ರ ಚಾಹಲ್ ಮತ್ತು ವೇಗಿ ಹರ್ಷಲ್ ಪಟೇಲ್ ಅವರನ್ನು ಬಿಡುಗಡೆ ಮಾಡಿದೆ.

ಉಳಿದುಕೊಂಡ ಆಟಗಾರರು (ಆವರಣದಲ್ಲಿ ಮೊತ್ತ/₹ಗಳಲ್ಲಿ)

ರಾಯಲ್ ಚಾಲೆಂಜರ್ಸ್ ಬೆಂಗಳೂರು	ವಿರಾಟ್ ಕೊಹ್ಲಿ (15 ಕೋಟಿ), ಗ್ಲೆನ್ ಮ್ಯಾಕ್ಸ್‌ವೆಲ್ (11 ಕೋಟಿ), ಮೊಹಮ್ಮದ್ ಸಿರಾಜ್ (7 ಕೋಟಿ).
ಚೆನ್ನೈ ಸೂಪರ್ ಕಿಂಗ್ಸ್	ರವೀಂದ್ರ ಜಡೇಜ (16 ಕೋಟಿ), ಮಹೇಂದ್ರ ಸಿಂಗ್ ಧೋನಿ (12 ಕೋಟಿ), ಮೋಯಿನ್ ಅಲಿ (8 ಕೋಟಿ), ಋತುರಾಜ್ ಗಾಯಕವಾಡ್ (6 ಕೋಟಿ).
ಮುಂಬೈ ಇಂಡಿಯನ್ಸ್	ರೋಹಿತ್ ಶರ್ಮಾ (16 ಕೋಟಿ), ಜಸ್‌ಪ್ರೀತ್ ಬೂಮ್ರಾ (12 ಕೋಟಿ), ಸೂರ್ಯಕುಮಾರ್ ಯಾದವ್ (8 ಕೋಟಿ), ಕೀರನ್ ಪೊಲಾರ್ಡ್ (6 ಕೋಟಿ).
ಪಂಜಾಬ್ ಕಿಂಗ್ಸ್	ಮಯಂಕ್ ಅಗರವಾಲ್ (12 ಕೊಟಿ) ಆರ್ಷದೀಪ್ ಸಿಂಗ್ (4 ಕೋಟಿ).
ಸನ್‌ರೈಸರ್ಸ್ ಹೈದರಾಬಾದ್	ಕೇನ್ ವಿಲಿಯಮ್ಸನ್ (14 ಕೋಟಿ), ಅಬ್ದುಲ್ ಸಮದ್ (4 ಕೋಟಿ), ಉಮ್ರಾನ್ ಮಲಿಕ್ (4 ಕೋಟಿ).
ರಾಜಸ್ಥಾನ್ ರಾಯಲ್ಸ್	ಸಂಜು ಸ್ಯಾಮ್ಸನ್ (14 ಕೋಟಿ), ಜೋಸ್ ಬಟ್ಲರ್ (10 ಕೋಟಿ), ಯಶಸ್ವಿ ಜೈಸ್ವಾಲ್ (4 ಕೋಟಿ).
ಕೋಲ್ಕತ್ತ ನೈಟ್ ರೈಡರ್ಸ್	ಆ್ಯಂಡ್ರೆ ರಸೆಲ್ (12 ಕೋಟಿ), ವರುಣ್ ಚಕ್ರವರ್ತಿ (8 ಕೋಟಿ), ವೆಂಕಟೇಶ್ ಅಯ್ಯರ್ (8 ಕೋಟಿ), ಸುನಿಲ್ ನಾರಾಯಣ್ (6 ಕೋಟಿ).
ಡೆಲ್ಲಿ ಕ್ಯಾಪಿಟಲ್ಸ್	ರಿಷಭ್ ಪಂತ್ (16 ಕೋಟಿ), ಅಕ್ಷರ್ ಪಟೇಲ್ (9 ಕೋಟಿ), ಪೃಥ್ವಿ ಶಾ (7.5 ಕೋಟಿ), ಆ್ಯನ್ರಿಚ್ ನಾರ್ಕಿಯ (6.5 ಕೋಟಿ).

ಹಾಕಿ: ಸೆಮಿ ಹಾದಿಯಲ್ಲಿ ಬೆಲ್ಜಿಯಂ ಸವಾಲು

ಜೂನಿಯರ್ ವಿಶ್ವಕಪ್: ಭಾರತಕ್ಕೆ ಫಾರ್ವರ್ಡ್ ಆಟಗಾರರ ಮೇಲೆ ಭರವಸೆ

ಭುವನೇಶ್ವರ (ಪಿಟಿಐ): ಸತತ ಎರಡು ಜಯದ ನಂತರ ಚೇತರಿಸಿಕೊಂಡಿರುವ ಭಾರತ ತಂಡ ಜೂನಿಯರ್ ಹಾಕಿ ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಬುಧವಾರ ಬೆಲ್ಜಿಯಂ ವಿರುದ್ಧ ಸೆಣಸಲಿದೆ. ಫಾರ್ವರ್ಡ್ ವಿಭಾಗ ಮತ್ತು ಡ್ರ್ಯಾಗ್ ಫ್ಲಿಕ್ಕರ್‌ಗಳ ಮೇಲೆ ಭಾರತ ತಂಡ ಭರವಸೆ ಇರಿಸಿಕೊಂಡಿದೆ.

ಹಾಲಿ ಚಾಂಪಿಯನ್ ಭಾರತ ತಂಡ ಈ ಬಾರಿಯೂ ಪ್ರಶಸ್ತಿ ಗೆಲ್ಲುವ ತಂಡಗಳಲ್ಲಿ ಒಂದೆನಿಸಿಕೊಂಡಿದೆ. ಮೊದಲ ಪಂದ್ಯದಲ್ಲಿ ಫ್ರಾನ್ಸ್ ವಿರುದ್ಧ 4–5ರ ಸೋಲಿನಿಂದಾಗಿ ಆತಂಕಕ್ಕೆ ಒಳಗಾಗಿದ್ದ ತಂಡ ನಂತರ ಕೆನಡಾವನ್ನು 13–1ರಲ್ಲಿ ಮಣಿಸಿ ಲಯಕ್ಕೆ ಮರಳಿತ್ತು. ಪೋಲೆಂಡ್‌ಗೆ 8–2ರಲ್ಲಿ ಸೋಲುಣಿಸಿ ಆತ್ಮವಿಶ್ವಾಸ ಗಳಿಸಿತ್ತು. 'ಬಿ' ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸುವುದರೊಂದಿಗೆ ನಾಕೌಟ್ ಹಂತ ಪ್ರವೇಶಿಸಿತ್ತು.

ಈಗ ತಂಡಕ್ಕೆ ನಿಜವಾದ ಸವಾಲು ಎದುರಾಗಿದೆ. ಮೂರನೇ ಬಾರಿ ಪ್ರಶಸ್ತಿ ಗದ್ದುಕೊಳ್ಳಬೇಕಾದರೆ ತಂಡ ಉಳಿದ ಎಲ್ಲ ಪಂದ್ಯಗಳನ್ನೂ ಗೆಲ್ಲಬೇಕಾಗಿದೆ. ಬೆಲ್ಜಿಯಂ ಎದುರಿನ ಎಂಟರ ಘಟ್ಟದ ಪಂದ್ಯವು ಕಳೆದ ಬಾರಿಯ ಫೈನಲ್ ಪಂದ್ಯದ ಪುನರಾವರ್ತನೆಯಂತಾಗಲಿದೆ. ಆ ಪಂದ್ಯದಲ್ಲಿ ಭಾರತ 2–1ರಲ್ಲಿ ಜಯ ಸಾಧಿಸಿತ್ತು. ಪ್ರತೀಕಾರ ತೀರಿಸಲು ಕಾಯು ತ್ತಿರುವ ಬೆಲ್ಜಿಯಂ ಬುಧವಾರ ತನ್ನೆಲ್ಲ ಸಾಮರ್ಥ್ಯವನ್ನು ತೋರಿ ಆಡಲು ಮುಂದಾಗುವ ಸಾಧ್ಯತೆ ಇದೆ. ಆದ್ದರಿಂದ ಪಂದ್ಯ ರೋಚಕವಾಗುವುದು ಖಚಿತ. ಉತ್ತಮ್ ಸಿಂಗ್, ಅರಿಜೀತ್ ಸಿಂಗ್ ಹುಂದಾಲ್, ಸಂದೀಪ್ ಚಿರ್ಮಾಕೊ ಮತ್ತು ಮಣಿಂದರ್ ಸಿಂಗ್ ಅವರು ಭಾರತ ತಂಡದ ಆಧಾರವಾಗಿದ್ದು ಶ್ರದ್ಧಾನಂದ, ಅಭಿಷೇಕ್ ಲಾಕ್ರ, ನಾಯಕ ವಿವೇಕ್ ಪ್ರಸಾದ್ ಮತ್ತಿತರರ ಮೇಲೆಯೂ ನಿರೀಕ್ಷೆ ಇದೆ.

ಪಾಕಿಸ್ತಾನಕ್ಕೆ ಭರ್ಜರಿ ಜಯ: ಮಂಗಳವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನ ತಂಡವು 18–2ರಿಂದ ಅಮೆರಿಕ ತಂಡವನ್ನು ಸೋಲಿಸಿತು. ವಿಜೇತ ತಂಡದ ಪರ ಅಬ್ದುಲ್ ರಾಣಾ ನಾಲ್ಕು ಗೋಲು ಹೊಡೆದರು.

ಭಾರತದ ಯುವ ಪಡೆ ಗೆಲುವಿನ ನಿರೀಕ್ಷೆಯಲ್ಲಿದೆ –ಎಫ್‌ಐಎಚ್ ವೆಬ್‌ಸೈಟ್ ಚಿತ್ರ

ಮುಖಾಮುಖಿ	
24	ಪಂದ್ಯಗಳು
8	ಭಾರತ ಜಯ
14	ಬೆಲ್ಜಿಯಂ ಜಯ
2	ಡ್ರಾ
ಮುಖಾಮುಖಿಯಲ್ಲಿ ಗೋಲು	
54	ಬೆಲ್ಜಿಯಂ
45	ಭಾರತ

ಆರಂಭ: ರಾತ್ರಿ 7.30
ನೇರ ಪ್ರಸಾರ: watch.hockey

ಮೆಸ್ಸಿಗೆ 'ಬ್ಯಾಲನ್ ಡಿ ಒರ್'

ಪ್ಯಾರಿಸ್ (ಎಎಫ್‌ಪಿ): ಅರ್ಜೆಂಟೀನಾ ಫುಟ್‌ಬಾಲ್ ಲಯೊನೆಲ್ ಮೆಸ್ಸಿ ಅವರು ದಾಖಲೆಯ ಏಳನೇ ಬಾರಿ ಪ್ರತಿಷ್ಠಿತ ಬಾಲನ್ ಡಿ ಒರ್ ಪ್ರಶಸ್ತಿ ಮುಡಿಗೇರಿಸಿ–ಕೊಂಡಿದ್ದಾರೆ.

ಫ್ರಾನ್ಸ್ ಫುಟ್‌ಬಾಲ್ ನಿಯತಕಾಲಿಕೆ ನೀಡುವ ಬ್ಯಾಲನ್ ಡಿ ಒರ್ ಪ್ರಶಸ್ತಿಯ–ನ್ನು ಮೆಸ್ಸಿ 2009, 2010, 2011, 2012, 2015 ಮತ್ತು 2019ರಲ್ಲಿ ಗೆದ್ದುಕೊಂಡಿದ್ದರು.

ಅಲೆಕ್ಸಿಯಾಗೆ ಗರಿ: ಮಹಿಳೆಯರ ವಿಭಾಗದಲ್ಲಿ ಸ್ಪೇನ್‌ನ ಅಲೆಕ್ಸಿಯಾ ಪುಟೆಲ್ಲಾ ಅವರು ಬ್ಯಾಲನ್ ಡಿ ಒರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಲಯೊನೆಲ್ ಮೆಸ್ಸಿ– ರಾಯಿಟರ್ಸ್

ವಿಶ್ವ ಚೆಸ್: 4ನೇ ಆಟವೂ ಡ್ರಾ

ದುಬೈ: ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ರಷ್ಯಾದ ಇಯಾನ್ ನಿಪೋಮ್‌ನಿಶಿ ನಡುವೆ ಮಂಗಳವಾರ ನಡೆದ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ನಾಲ್ಕನೇ ಪಂದ್ಯ ಕೂಡ 'ಡ್ರಾ' ಆಯಿತು. ಆಟಗಾರರು ತಲಾ 2 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ. ಶುಕ್ರವಾರ ಈ ಚಾಂಪಿಯನ್‌ಷಿಪ್ ಆರಂಭವಾಗಿದೆ.

ಕ್ರಿಕೆಟ್: ಪಾಕಿಸ್ತಾನಕ್ಕೆ ಜಯ

ಚಿತ್ತಗಾಂಗ್, ಬಾಂಗ್ಲಾದೇಶ (ಎಎಫ್‌ಪಿ): ಬಾಂಗ್ಲಾದೇಶ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಪಾಕಿಸ್ತಾನ 8 ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್, ಬಾಂಗ್ಲಾದೇಶ: 330; ಪಾಕಿಸ್ತಾನ: 286; ಎರಡನೇ ಇನಿಂಗ್ಸ್, ಬಾಂಗ್ಲಾದೇಶ: 157; ಪಾಕಿಸ್ತಾನ (ಸೋಮವಾರ ವಿಕೆಟ್ ಕಳೆದುಕೊಳ್ಳದೆ 109): 58.3 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 203 (ಅಬಿದ್ ಅಲಿ 91, ಅಬ್ದುಲ್ಲ ಶಫೀಕ್ 73, ಅಜರ್ ಅಲಿ ಔಟಾಗದೆ 24). ಫಲಿತಾಂಶ: ಪಾಕಿಸ್ತಾನಕ್ಕೆ 8 ವಿಕೆಟ್‌ಗಳ ಜಯ; ಸರಣಿಯಲ್ಲಿ 1–0 ಮುನ್ನಡೆ.

ಸೌರವ್ ಘೋಷಾಲ್– ಪಿಟಿಐ ಚಿತ್ರ

ಏಷ್ಯನ್ ಸ್ಕ್ವಾಷ್: ಭಾರತ ತಂಡಗಳ ಶುಭಾರಂಭ

ಕ್ವಾಲಾಲಂಪುರ (ಪಿಟಿಐ): ಅಗ್ರಶ್ರೇಯಾಂಕದ ಭಾರತ ಪುರುಷರ ತಂಡವು ಏಷ್ಯನ್ ಸ್ಕ್ವಾಷ್ ಚಾಂಪಿಯನ್‌ಷಿಪ್‌ನಲ್ಲಿ ಗೆಲುವಿನ ಆರಂಭ ಮಾಡಿದೆ. ಮೂರನೇ ಶ್ರೇಯಾಂಕದ ಮಹಿಳಾ ತಂಡವು ಮಂಗಳವಾರ ಮೊದಲ ತಡೆ ದಾಟಿತು.

ಸೌರವ್ ಘೋಷಾಲ್, ಮಹೇಶ್ ಮನಗಾಂವಕರ್ ಮತ್ತು ವೇಲವನ್ ಸೆಂಥಿಲ್ ಕುಮಾರ್ ಅವರಿದ್ದ ಭಾರತ ಪುರುಷರ ತಂಡವು 3–0ಯಿಂದ ಎಂಟನೇ ಶ್ರೇಯಾಂಕದ ಫಿಲಿಪ್ಪೀನ್ಸ್ ಎದುರು ಗೆದ್ದಿತು.

ಫಿಲಿಪ್ಪೀನ್ಸ್ ಎದುರಿನ ಪಂದ್ಯದಲ್ಲಿ ಭಾರತದ ಸೌರವ್ ಘೋಷಾಲ್ 11-8, 11-8, 11-4ರಿಂದ ರಾಬರ್ಟ್ ಗಾರ್ಸಿಯಾ ಎದುರು, ಮಹೇಶ್ 1-1, 11-6, 11-6ರಿಂದ ಡೇವಿಡ್ ಪೆಲಿನೊ ವಿರುದ್ಧ, ಸೆಂಥಿಲ್ ಕುಮಾರ್ 11-5, 11-7, 11-2ರಿಂದ ರೇಮಾರ್ಕ್ ಬೆಗೊರ್ನಿಯಾ ಮೇಲೆ ಗೆಲುವು ಸಾಧಿಸಿದರು.

ಭಾರತ ಮಹಿಳಾ ತಂಡ ವೂ ಫಿಲಿಪ್ಪೀನ್ಸ್ ಎದುರೇ 3-0ಯಿಂದ ಗೆಲುವು ಸಾಧಿಸಿತು.

ವಿಶ್ವ ಟೂರ್ ಫೈನಲ್ಸ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ

ಲಕ್ಷ್ಯ, ಸಿಂಧು ಮೇಲೆ ನಿರೀಕ್ಷೆ

ಬಾಲಿ (ಪಿಟಿಐ): ಇತ್ತೀಚಿನ ಬಹುತೇಕ ಟೂರ್ನಿಗಳ ಅಂತಿಮ ಹಂತಗಳಲ್ಲಿ ಎಡವಿರುವ ಭಾರತದ ಪಿ.ವಿ. ಸಿಂಧು, ಲಕ್ಷ್ಯ ಸೇನ್ , ಬುಧವಾರ ಆರಂಭವಾಗುವ ಬಿಡಬ್ಲ್ಯುಎಫ್ ವಿಶ್ವ ಟೂರ್ ಫೈನಲ್ಸ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದು, ಪ್ರಶಸ್ತಿ ನಿರೀಕ್ಷೆಯಲ್ಲಿದ್ದಾರೆ.

ಟೂರ್ನಿಗೆ ಮೊದಲ ಬಾರಿ ಅರ್ಹತೆ ಗಿಟ್ಟಿಸಿರುವ ಲಕ್ಷ್ಯ ಸೇನ್, ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಉತ್ತಮ ಸಾಮರ್ಥ್ಯ ತೋರುವ ಹಂಬಲದಲ್ಲಿದ್ದಾರೆ.

₹ 1 ಕೋಟಿ 12.50 ಲಕ್ಷ ಒಟ್ಟು ಬಹುಮಾನ ಮೊತ್ತದ ಟೂರ್ನಿಯಲ್ಲಿ ಭಾರತದ 7 ಮಂದಿ ಕಣಕ್ಕಿಳಿಯುತ್ತಿರುವುದು ಇದೇ ಮೊದಲ ಬಾರಿಯಾಗಿದೆ.

ಮಿಶ್ರ ಡಬಲ್ಸ್ ಹೊರತುಪಡಿಸಿ ಎಲ್ಲ ವಿಭಾಗಗಳಲ್ಲೂ ಭಾರತದ ಪಟುಗಳು ಆಡಲಿದ್ದಾರೆ. ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ–ಎನ್.ಸಿಕ್ಕಿ ರೆಡ್ಡಿ, ಪುರುಷರ ಸಿಂಗಲ್ಸ್‌ನಲ್ಲಿ ಕಿದಂಬಿ ಶ್ರೀಕಾಂತ್ ಕಣಕ್ಕಿಳಿಯಲಿರುವ ಇನ್ನುಳಿದ ಆಟಗಾರರು.

2018ರಲ್ಲಿ ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದಿದ್ದ ಸಿಂಧು, ಹೋದ ವರ್ಷ ಟೂರ್ನಿಯ ಫೈನಲ್ ತಲುಪಿದ್ದರು. ಅವರು ಇಲ್ಲಿ 'ಎ' ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಮೊದಲ ಪಂದ್ಯದಲ್ಲಿ ಅಗ್ರಶ್ರೇಯಾಂಕದ ಆಟಗಾರ್ತಿ ಥಾಯ್ಲೆಂಡ್‌ನ ಪಾರ್ನ್‌ಪವೀ ಚೋಚುವಾಂಗ್ ಅವರನ್ನು ಎದುರಿಸಲಿದ್ದಾರೆ.

ಇತ್ತೀಚೆಗೆ ನಡೆದ ಸತತ ಮೂರು ಟೂರ್ನಿಗಳಲ್ಲಿ ನಾಲ್ಕರ ಘಟ್ಟ ತಲುಪಿದ್ದ, ಎರಡು ಬಾರಿಯ ಒಲಿಂಪಿಕ್ಸ್ ಪದಕ ವಿಜೇತೆ ಸಿಂಧು, ಇಲ್ಲಿ ಕಿರೀಟ ಧರಿಸುವ ವಿಶ್ವಾಸದಲ್ಲಿದ್ದಾರೆ.

ಐಎಸ್‌ಎಲ್: ಒಡಿಶಾ ಜಯಭೇರಿ

ವಾಸ್ಕೊ (ಪಿಟಿಐ): ಒಡಿಶಾ ಎಫ್‌ಸಿ ತಂಡ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಮತ್ತೊಮ್ಮೆ ಪಾರಮ್ಯ ಮೆರೆಯಿತು. ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಎಸ್‌ಸಿ ಈಸ್ಟ್ ಬೆಂಗಾಲ್ ಎದುರು ಒಡಿಶಾ 6–4ರಲ್ಲಿ ಗೆಲುವು ಸಾಧಿಸಿತು.

ಹಿಂದಿನ ಎರಡು ಪಂದ್ಯಗಳಲ್ಲಿ ನಿರಾಸೆ ಅನುಭವಿಸಿದ್ದ ಈಸ್ಟ್ ಬೆಂಗಾಲ್ ಈ ಪಂದ್ಯದಲ್ಲಿ ಆಕ್ರಮಣಕಾರಿ ಆಟಕ್ಕೆ ಮುಂದಾಯಿತು. ಇದರ ಪರಿಣಾಮವಾಗಿ 13ನೇ ನಿಮಿಷದಲ್ಲೇ ಮುನ್ನಡೆ ಸಾಧಿಸಲು ಸಾಧ್ಯವಾಯಿತು. ಸಿಡೋಲ್ ಅವರು ಪಂದ್ಯದ ಮೊದಲ ಗೋಲು ಬಾರಿಸಿದರು.

ಆದರೆ ವಿರಾಮಕ್ಕೆ ತೆರಳುವ ಮುನ್ನ ಒಡಿಶಾ ಮೂರು ಗೋಲುಗಳನ್ನು ಗಳಿಸಿ ಮುನ್ನಡೆಯಿತು. ರೊಡಾಸ್ (33, 44ನೇ ನಿಮಿಷ) ಮತ್ತು ಜೇವಿಯರ್ ಹೆರ್ನಾಂಡಸ್ (45ನೇ ನಿ) ಚೆಂಡನ್ನು ಗುರಿ ಮುಟ್ಟಿಸಿದರು. 71 ಮತ್ತು 90ನೇ ನಿಮಿಷಗಳಲ್ಲಿ ಅರಿದಾಯಿ, 82ನೇ ನಿಮಿಷದಲ್ಲಿ ಇಸಾಕ ರಾಲ್ಟೆ ತಂಡದ ಪರ ಗೋಲು ಗಳಿಸಿದರು. ಈಸ್ಟ್ ಬೆಂಗಾಲ್‌ಗಾಗಿ ಶೆಂಬೊಯ್ (80ನೇ ನಿ), ಚುಕುವು (89, 90ನೇ ನಿ) ಗೋಲು ಗಳಿಸಿ ಸೋಲಿನ ಅಂತರ ಕಡಿಮೆ ಮಾಡಿದರು.

ಹೋದ ಆವೃತ್ತಿಯ ಪ್ರಶಸ್ತಿ ಸುತ್ತಿನಲ್ಲಿ ಅನುಭವಿಸಿದ್ದ ಸೋಲಿಗೆ ಸೇಡು ತೀರಿಸಿಕೊಳ್ಳುವ ತವಕದಲ್ಲಿರುವ ಎಟಿಕೆ ಮೋಹನ್ ಬಾಗನ್ ತಂಡವು ಮುಂಬೈ ಸಿಟಿ ಎಫ್‌ಸಿ ತಂಡವನ್ನು ಮಂಗಳವಾರ ಎದುರಿಸಲಿದೆ.

ಜೇವಿಯರ್ ಹೆರ್ನಾಂಡಸ್

ಮೈಸೂರು ರೇಸ್

ಅಬರ್ಲರ್ ಗೆಲ್ಲುವ ನಿರೀಕ್ಷೆ

ಡಾ. ಎಂ.ಎನ್.ದೊರೆಸ್ವಾಮಿ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಬರ್ಲರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕಮ್ ಅಲೈವ್ 6, ಲೇಡಿ ಸಿಂಗರ್ 8 ಡಿವಾ ಇನ್ ಗೋಲ್ಡ್ 7
2ನೇ ರೇಸ್: ಸರ್ಪ್ರೈಸ್ ಪ್ಯಾಕೇಜ್ 4, ಏರ್‌ವೆಲಾಸಿಟಿ 10, ಕಪ್ಪಡೋಸಿಯಾ 2
3ನೇ ರೇಸ್: ಶೀ ಈಸ್ ಎ ಬ್ಯೂಟಿ 12, ಆಕ್ರೆ 11, ಡಿ ಫೈಟರ್ 2
4ನೇ ರೇಸ್: ಕ್ಲೋವರ್ ಕ್ರ್ಯೂ 5, ವೈಲ್ಡ್ ಸ್ಪೆಲ್ 3, ಬೀಟ್ ದಿ ಆಡ್ಸ್ 1
5ನೇ ರೇಸ್: ಡೀನ್ಸ್ ಗಾಲ್ 8, ಚಿಲ್ಲಿ ಬ್ರೀಝ್ 7, ಅರಾಕ್ 6
6ನೇ ರೇಸ್: ಡಿ ಕರ್ನ 2, ರೈಸಿಂಗ್ ಸನ್ 10, ಟಿಯಾ ಮಾರಿಯ 5
7ನೇ ರೇಸ್: ಅಬರ್ಲರ್ 1, ಲಾರ್ಡ್ ಕಮಾಂಡರ್ 6, ಟ್ರೆಮಂಡಸ್ 3
8ನೇ ರೇಸ್: ಗೈಡಿಂಗ್ ಫೋರ್ಸ್ 1, ಟ್ರಸ್ಟ್ ಬಾಂಡ್ 12, ಎನ್.ಆರ್.ಐ ಪ್ಲಾನ್ 4
9ನೇ ರೇಸ್: ಡೇರಿಂಗ್ ಪ್ರಿನ್ಸ್ 5, ಕ್ರಿಮ್‌ಸನ್ ಫ್ಲೈರ್ 2, ಸೀ ಲಾಗೂನ್ 1

ಉತ್ತಮ ಬೆಟ್: ಶೀ ಈಸ್ ಎ ಬ್ಯೂಟಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
5,6,7,8,9	1,2,3	4,5,6

3ನೇ ಟ್ರಿಬಲ್	ಎಕ್ಸಾಕ್ಟ್
7,8,9	8,9

ಟೆಸ್ಟ್: ಪೊರೆಲ್, ಸೈನಿ 'ಶೈನ್'

ಬ್ಲೂಮ್‌ಫೌಂಟೇನ್ (ಪಿಟಿಐ): ನವದೀಪ್ ಸೈನಿ ಮತ್ತು ಇಶಾನ್ ಪೊರೆಲ್ ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಭಾರತ 'ಎ' ತಂಡ ದಕ್ಷಿಣ ಆಫ್ರಿಕಾ 'ಎ' ತಂಡದ ಎದುರಿನ ಎರಡನೇ ಟೆಸ್ಟ್ ಪಂದ್ಯದಲ್ಲಿ ಹಿಡಿತ ಸಾಧಿಸಿದೆ.

ಮೊದಲ ದಿನದ ಆಟ ಮುಕ್ತಾಯಗೊಂಡಾಗ ಆತಿಥೇಯರು 85 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 233 ರನ್ ಕಲೆ ಹಾಕಿದೆ.

ಓಮೈಕ್ರಾನ್ ಆತಂಕದ ನಡುವೆಯೇ ಆರಂಭಗೊಂಡ ಪಂದ್ಯದಲ್ಲಿ ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಖಾತೆ ತೆರೆಯುವ ಮೊದಲೇ ನಾಯಕ ಪೀಟರ್ ಮಲಾನ್ ಅವರು ನಾಗಸ್ವಾಲ ಬೌಲಿಂಗ್‌ನಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ನಂತರ ಸರೆಲ್ ಎರ್ವಿ ಮತ್ತು ರೇನಾ ರ್ಡ್ 72 ರನ್‌ಗಳ ಜೊತೆಯಾಟ ಆಡಿದರು. ಸೈನಿ ಮತ್ತು ಪೊರೆಲ್ ಅವರ ದಾಳಿಯ ನಡುವೆಯೂ ಜುಬೇರ್ ಹಂಜ, ವಿಕೆಟ್ ಕೀಪರ್ ಸಿನೆತೆಂಬಾ ಖುರೇಶಿ, ಜಾರ್ಜ್ ಲಿಂಡೆ ಮತ್ತು ಮಾರ್ಕೊ ಜಾನ್ಸೆನ್ ದಿಟ್ಟ ಅಟ ವಾಡಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ 'ಎ', ಮೊದಲ ಇನಿಂಗ್ಸ್: 85 ಓವರ್‌ಗಳಲ್ಲಿ 7ಕ್ಕೆ 233 (ಸರೆಲ್ ಎರ್ವಿ 38, ರೇನಾರ್ಡ್ ವ್ಯಾನ್ ತೊಂಡರ್ 34, ಜುಬೇರ್ ಹಂಜ 31, ಸಿನೆತೆಂಬ ಕ್ವೆಶಿಲೆ 32, ಜಾರ್ಜ್ ಲಿಂಡೆ 44, ಮಾರ್ಕೊ ಜಾನ್ಸೆನ್ 38; ನವದೀಪ್ ಸೈನಿ 54ಕ್ಕೆ2, ಅರ್ಜಾನ ನಾಗಸ್ವಾಲ 44ಕ್ಕೆ1, ಇಶಾನ್ ಪೊರೆಲ್ 26ಕ್ಕೆ2, ಸೌರಭ್ ಕುಮಾರ್ 64ಕ್ಕೆ 1, ಬಾಬಾ ಅಪರಾಜಿತ್ 34ಕ್ಕೆ1).

ಇಶಾನ್ ಪೊರೆಲ್